Ratnamāle

1857

Ratnamāle

ರತ್ನಮಾಲೆ.

ಅಂದರೆ

ಶಾಲೇ ಹುಡುಗರು ಬಾಯಿಪಾಠ ಮಾಡುವದಕ್ಕೆ

ಆರಿಸಿದ

ದೇವರ ವಾಕ್ಯದ ವಚನಗಳು.

ಮಂಗಳೂರು:
ಜರ್ಮನ್ ಮಿಶನ್ ಪ್ರೆಸ್.
೧೮೫೭.
1857-60.

ಸೂಚನೆ.

೧ನೇ ಭಾಗ—ರಕ್ಷಣೆಯ ಕ್ರಮದ ಪ್ರಕಾರ ಆರಿಸಿದ ವಚನಗಳ ನಾಲ್ಕು ಕ್ರಮಗಳು.

೨ನೇ ಭಾಗ—ಕುಮಾರ ಬೋಧನೆಗೆ ಆಧಾರವಾದ ವಚನಗಳು.

೩ನೇ ಭಾಗ—ಕ್ರೈಸ್ತಮನೇ ಪದ್ಧತಿ.

೪ನೇ ಭಾಗ—ಪ್ರಾರ್ಥನೆ ಬಿನ್ನಪಗಳಾದ ವಚನಗಳು.

ರಕ್ಷಣೆಯ ಕ್ರಮದ ಪ್ರಕಾರ ಆರಿಸಿದ ವಚನಗಳು.

ಮೊದಲನೆ ಕ್ರಮ.

ಸದ್ವಿಶ್ವಾಸವನ್ನು ಕಲಿಸುವಂಥ ವಚನಗಳು.

ಸ್ವಭಾವದಲ್ಲಿ ಒಬ್ಬನಾಗಿರುವ ತಂದೆ ಮಗ ಆತ್ಮವೆಂಬ ಅನಾದಿಯಾದ ದೇವರು ಆದಿಯಲ್ಲಿ ಸಮಸ್ತ ಲೋಕವನ್ನು ನಿರ್ಮಿಸಿದನು.

೧. ಆದಿಯಲ್ಲಿ ದೇವರು ಪರಲೋಕವನ್ನೂ ಭೂಲೋಕವನ್ನೂ ನಿರ್ಮಿಸಿದನು. ಭೂಲೋಕವು ಆಕೃತಿ ಇಲ್ಲದ್ದಾಗಿಯೂ ಬರಿದಾಗಿಯೂ ಇತ್ತು. ಅಗಾಧದ ಮೇಲೆ ಕತ್ತಲು ಇತ್ತು. ದೇವರ ಆತ್ಮವು ನೀರುಗಳ ಮೇಲೆ ಪರಿದಾಡುತ್ತಿತ್ತು. ಆಗಲು ದೇವರು ಬೆಳಕಾಗಲಿ ಅನ್ನಲು ಬೆಳಕಾಯಿತು. (ಉತ್ಪತ್ತಿ. ೧, ೧. ೨. ೩.)

ಅದರಲ್ಲಿ ಮನುಷ್ಯನನ್ನು ಸಹಾ.

೨. ಕರ್ತನಾದ ದೇವರು ಭೂಮಿಯ ಮಣ್ಣಿನಿಂದ ಮನುಷ್ಯನನ್ನು ರೂಪಿಸಿ, ಅವನ ಮೂಗಿನಲ್ಲಿ ಜೀವ

ದ ಉಸುರು ಊದಿದನು; ಹೀಗೆ ಮನುಷ್ಯನು ಜೀವಾತ್ಮನಾದನು. (ಉತ್ಪತ್ತಿ. ೨, ೭.)

ಆವಾಗ ಮನುಷ್ಯನು ಆನಂದವುಳ್ಳ ಸ್ಥಿತಿಯಲ್ಲಿ ಇದ್ದನು.

೩. ದೇವರು ಮನುಷ್ಯನನ್ನು ತನ್ನ ಪ್ರತಿರೂಪವಾಗಿ ನಿರ್ಮಿಸಿದನು, ದೇವರ ಪ್ರತಿರೂಪವಾಗಿ ಅವನನ್ನು ನಿರ್ಮಿಸಿದನು. (ಉತ್ಪತ್ತಿ. ೧, ೨೭.)

ಆದರೆ ಮನುಷ್ಯನು ತನ್ನ ಸಂತಾನದವರೆಲ್ಲರ ಸಹಿತವಾಗಿ ಸೈತಾನನ ಮೋಸದಿಂದ ಪಾಪದಲ್ಲಿಯೂ ಕೇಡಿನಲ್ಲಿಯೂ ಬಿದ್ದನು. ಅವರಿಗೆ ತಮ್ಮೊಳಗೆ ರಕ್ಷಣೆ ಉಪಾಯವಿಲ್ಲದೆ ಹೋಯಿತು.

೪. ಒಬ್ಬ ಮನುಷ್ಯನಿಂದ ಪಾಪವೂ, ಪಾಪದಿಂದ ಮರಣವೂ ಲೋಕದಲ್ಲಿ ಪ್ರವೇಶಿಸಿ, ಈ ಪ್ರಕಾರ ಯೆಲ್ಲರು ಪಾಪ ಮಾಡಿದ್ದಲ್ಲಿ ಮರಣವು ಯೆಲ್ಲರ ಮೇಲೆ ವ್ಯಾಪಿಸಿದ ಹಾಗಿರುವದು. (ರೋಮ್. ೫, ೧೨.)

೫. ತನ್ನ ಸಹೋದರನನ್ನು ಮನುಷ್ಯನು ವಿಮೋಚಿಸಲಾರನು. ಅವನ ಅಪರಾಧದ ಹಣವನ್ನು ದೇವರಿಗೆ ಕೊಡಲಾರನು. ಯಾಕಂದರೆ ಅವರ ಪ್ರಾಣ ವಿಮೋಚನೆಯ ಹಣವು ಅಮೂಲ್ಯವಾಗಿದೆ. ಯುಗಯುಗಕ್ಕೂ ಆಗದು. (ಕೀರ್ತ. ೪೯, ೭—೯.

ಆದರೆ ದೇವರು ಅವರ ಮೇಲೆ ಅಂತಃಕರಣ ಪಟ್ಟು, ಅವರನ್ನು ರಕ್ಷಿಸ ಬೇಕೆಂದು ನೇಮಿಸಿದ್ದಾನೆ.

೬. ಯಾರೂ ನಾಶನವಾಗ ಬೇಕೆಂದು ದೇವರು ಮ

ನಷ್ಟಿಲ್ಲದೆ, ಯೆಲ್ಲರು ಮಾನಸಾಂತರಕ್ಕೆ ತಿರುಗ ಬೇಕೆಂದು, ಮನಸ್ಸಾಗಿದ್ಧಾನೆ. (೨ ಪೇತ್ರ. ೩, ೯.)

೭. ಸಕಲ ಮನುಷ್ಯರು ರಕ್ಷಿಸಲ್ಪಟ್ಟು, ಸತ್ಯದ ತಿಳುವಿಕೆಗೆ ಬರ ಬೇಕು ಯೆಂದು ದೇವರು ಇಚ್ಛೈಸುತ್ತಾನೆ. (೧ ತಿಮ್. ೨, ೩.)

ಇದನ್ನು ಒಬ್ಬನಾಗಿ ಹುಟ್ಟಿದ ತನ್ನ ಮಗನ ಮುಖದಿಂದ ನಡಿಸುತ್ತಾನೆ.

೮. ಆತನಲ್ಲಿ ವಿಶ್ವಾಸವಿಡುವವರೆಲ್ಲರು ನಾಶನವಾಗದೆ, ನಿತ್ಯಜೀವವನ್ನು ಹೊಂದುವ ಬಗ್ಗೆ, ದೇವರು ಒಬ್ಬನಾಗಿ ಹುಟ್ಟಿದ ತನ್ನ ಮಗನನ್ನು ಕೊಡುವ ಹಾಗೆ, ಲೋಕಕ್ಕೆ ಅಷ್ಟು ಪ್ರೀತಿ ಮಾಡಿದನು. (ಯೋ. ೩, ೧೬.)

೯. ಇದರಿಂದ ದೇವರ ಪ್ರೀತಿ ನಂಮಲ್ಲಿ ಪ್ರಕಟವಾಯಿತು. ದೇವರು ತನ್ನ ಒಬ್ಬನೇ ಹುಟ್ಟಿದ ಮಗನನ್ನು, ಆತನ ಮುಖದಿಂದ ನಾವು ಬದುಕುವ ಹಾಗೆ, ಲೋಕಕ್ಕೆ ಕಳುಹಿಸಿದದರಿಂದಲೇ. (೧ ಯೋ. ೪, ೯.)

ಈತನೇ ನಮ್ಮ ಮಧ್ಯಸ್ಥನಾಗಿ ನಮ್ಮನ್ನು ದರ್ಶಿಸಿದನು.

೧೦. ದೇವರು ಒಬ್ಬನೇ, ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ ಮನುಷ್ಯನಾದ ಕ್ರಿಸ್ತ ಯೇಸುವೇ; ಈತನು ತನ್ನನ್ನು ಯೆಲ್ಲರಿಗೋಸ್ಕರ ಓಲಾಗಿ ಕೊಟ್ಟಿದ್ಧಾನೆ. (೧ ತಿಮ್. ೨, ೫. ೬.

ಸಂಪೂರ್ಣವಾದ ವಿಮೋಚನೆಯನ್ನು ಸಂಪಾದಿಸಿದನು.

೧೧. ಕ್ರಿಸ್ತನು ನಮಗೆ ದೇವರಿಂದ ಜ್ಞಾನವೂ ನೀತಿಯೂ ಪರಿಶುದ್ಧಿಯೂ ವಿಮೋಚನೆಯೂ ಆದನು. (೧ ಕೊರ್. ೧, ೩೦.)

ಹೇಗಂದರೆ ದೇವರು, ಮಾಂಸದಲ್ಲಿ ಪ್ರಕಟವಾದ ತನ್ನ ಮಗನು ನಿರ್ದೋಷಿಯಾದ ನಿಷ್ಕಳಂಕವಾದ ಕುರಿಮರಿ ಯೆಂದು, ನಮ್ಮ ಪಾಪಗಳ ದೋಷ ದಂಡನೆಯನ್ನೆಲ್ಲಾ ಆತನ ಮೇಲೆ ಹಾಕಿದನು.

೧೨ ನಾವು ಆತನಲ್ಲಿ ದೇವರ ನೀತಿಯಾಗುವ ಹಾಗೆ, ದೇವರು ಪಾಪವನ್ನು ಅರಿಯದವನನ್ನು ನಮಗೋಸ್ಕರ ಪಾಪವಾಗ ಮಾಡಿದನು. (೨ ಕೊರ್ ೫,: ೨೧.)

೧೩. ನಿಶ್ಚಯವಾಗಿ, ಆತನು ನಮ್ಮ ರೋಗ ಧರಿಸಿಕೊಂಡು, ನಮ್ಮ ಬೇನೆಗಳನ್ನು ಹೊತ್ತುಕೊಂಡನು. ಆದರೆ ಆತನು ದೇವರಿಂದ ಪೆಟ್ಟು ಹೊಂದಿ ಹೊಡೆಯಲ್ಪಟ್ಟು ಶ್ರಮೆ ಪಡುವವನೆಂದು ನಾವು ನೆನಿಸಿದೆವು. ಪರಂತು ಆತನು ನಮ್ಮ ಅಪರಾಧಗಳ ದೆಸೆಯಿಂದ ಘಾಯವಾದವನಾಗಿದ್ದು, ನಮ್ಮ ಪಾಪಗಳ ನಿಮಿತ್ತ ಜಜ್ಜಲ್ಪಟ್ಟನು. ನಮ್ಮ ಸಮಾಧಾನಕ್ಕಾಗಿ ಶಿಕ್ಷೆಯು ಆತನ ಮೇಲೆ ಬಿದ್ದು, ಆತನ ಘಾಯಗಳಿಂದ ನಾವು ಸ್ವಸ್ಥರಾದೆವು. (ಯೆಶ. ೫೩, ೪. ೫.)

ಅದರಿಂದ ಆತನು ನಮಗೆ ಪಾಪಪರಿಹಾರವನ್ನೂ, ನೀತಿಗಾಗಿ ಬೇಕಾದ ಉಳಿದ ಸಹಾಯವೆಲ್ಲಾನ್ನೂ ಸಂಪಾದಿಸಿದನು.

೧೪. ಬೆಳಕಿನಲ್ಲಿರುವ ಪರಿಶುದ್ಧರ ಬಾಧ್ಯದ ಭಾಗಕ್ಕಾ

೧ ನಮ್ಮನ್ನು ಸಿದ್ಧಮಾಡಿದ ತಂದೆಗೆ ಸ್ತೋತ್ರ ಮಾಡಿರಿ. ಆತನು ಅಂಧಕಾರದ ಅಧಿಕಾರದೊಳಗಿಂದ ನಮ್ಮನ್ನು ತಪ್ಪಿಸಿ, ತನ್ನ ಪ್ರೀತಿಯ ಮಗನ ರಾಜ್ಯದೊಳಗೆ ತಂದಿಟ್ಟಿದ್ದಾನೆ. ಈತನಲ್ಲಿ ಆತನ ರಕ್ತದಿಂದಾಗುವ ವಿಮೋಚನೆಯಾದ ಪಾಪಗಳ ಪರಿಹಾರವು ನಮಗುಂಟು. (ಕೊಲ್. ೧, ೧೧—೧೪.)

ಕ್ರಿಸ್ತನ ಈ ಪುಣ್ಯವು ವಿಶ್ವಾಸದಿಂದ ನಮ್ಮದಾಗುವದು.

೧೫. ಆದದರಿಂದ ಮನುಷ್ಯನು ನ್ಯಾಯಪ್ರಮಾಣದ ಕ್ರಿಯೆಗಳಿಂದಲ್ಲಾ, ವಿಶ್ವಾಸದಿಂದ ನೀತಿ ನಿರ್ಣಯ ಪಡುತ್ತಾನೆಂದು ತೀರಿಸುತ್ತೇವೆ. (ರೋಮ್. ೩, ೨೮.)

೧೬. ಕೃಪೆಯಿಂದಲೇ ವಿಶ್ವಾಸದ ಮುಖದಿಂದ ರಕ್ಷಿಸಲ್ಪಟ್ಟಿದ್ದೀರಿ; ಅದು ನಿಮ್ಮಿಂದಲ್ಲಾ, ದೇವರ ವರವೇ. ಯಾವನಾದರೂ ಹೆಚ್ಚಳ ಪಡದ ಹಾಗೆ, ಅದು ಕ್ರಿಯೆಗಳಿಂದಲ್ಲಾ. (ಎಫೆ. ೨, ೮. ೯.)

ಈ ಪ್ರಕಾರ ಪೂರ್ವಕಾಲದ ಭಕ್ತರು ಸುದಾ ದೇವರು ತಮಗೆ ಮೆಚ್ಚುತ್ತಾನೆಂಬ ಸಾಕ್ಷಿಯನ್ನು ವಿಶ್ವಾಸದಿಂದಲೇ ಹೊಂದಿದರು.

೧೭. ಅಬ್ರಹಾಮನು ದೇವರನ್ನು ವಿಶ್ವಾಸಿಸಿದನು, ಅದು ಅವನಿಗೆ ನೀತಿ ಯೆಂದು ಯೆಣಿಸಲ್ಪಟ್ಟಿತು. (ರೋಮ್. ೪, ೩.)

೧೮. ಆತನನ್ನು ಅಂಗೀಕರಿಸಿದವರೆಷ್ಟು ಆತನ ಹೆ

ಸರಿನಲ್ಲಿ ವಿಶ್ವಾಸವಿಡುವವರಾದ ಅವರಿಗೆ ದೇವರ ಮಕ್ಕಳಾಗುವದಕ್ಕೆ ಅಧಿಕಾರ ಕೊಟ್ಟನು. ಇವರು ರಕ್ತಗಳಿಂದಲ್ಲಾ, ಮಾಂಸದ ಚಿತ್ತದಿಂದಲ್ಲಾ, ಪುರುಷನ ಚಿತ್ತದಿಂದಲ್ಲಾ, ದೇವರಿಂದಲೇ ಪುಟ್ಟಿದರು. (ಯೋ. ೧, ೧೨. ೧೩.)

ವಿಶ್ವಾಸಕ್ಕೆ ಮುಂಚೆ ನಿಜವಾದ ಮಾನಸಾಂತರವು ಬೇಕಾಗಿದೆ.

೧೯. ಸಮಯವು ಸಂಪೂರ್ಣವಾಯಿತು. ದೇವರ ರಾಜ್ಯವು ಸಮೀಪವಾಯಿತು. ಮಾನಸಾಂತರ ಪಟ್ಟು ಸುವಾರ್ತೆಯಲ್ಲಿ ವಿಶ್ವಾಸವಿಡಿರಿ. (ಮಾರ್ಕ. ೧, ೧೫.)

೨೦. ಯೆಚ್ಚರವಾಗು, ನಿದ್ರೆ ಮಾಡುವವನೇ, ಸತ್ತವರೊಳಗಿಂದ ಯೇಳು; ಕ್ರಿಸ್ತನು ನಿನಗೆ ಪ್ರಕಾಶವಾಗುವನು. (ಎಫ್. ೫, ೧೪.)

೨೧. ನನ್ನ ಪಾಪವನ್ನು ನಿನಗೆ ತಿಳಿಸಿ, ನನ್ನ ಅಕ್ರಮವನ್ನು ಮುಚ್ಚದೆ, ನನ್ನ ದ್ರೋಹಗಳನ್ನು ಕರ್ತನಿಗೆ ಅರಿಕೆ ಮಾಡುವೆನೆಂದು ಹೇಳಿದೆನು. ಆಗ ನೀನು ನನ್ನ ಪಾಪದ ಅಕ್ರಮವನ್ನು ಪರಿಹರಿಸಿದಿ. (ಕೀರ್ತ. ೩೨, ೫.)

ಇಂಥಾ ಮಾನಸಾಂತರವು ಯೆಲ್ಲರಿಗೂ, ಉತ್ತಮರಿಗೆ ಸುದಾ ಬೇಕಾಗಿದೆ.

೨೨. ಯೆಲ್ಲರು ಪಾಪ ಮಾಡಿ ದೇವರ ಮಹಿಮೆಗೆ ತಪ್ಪಿ ಹೋಗಿ, ಯೇಸು ಕ್ರಿಸ್ತನಿಂದಾದ ವಿಮೋಚ

ನೆಯ ಮುಖಾಂತರ, ಆತನ ಕೃಪೆಯಿಂದ ಉಚಿತವಾಗಿ ನೀತಿನಿರ್ಣಯ ಪಡುತ್ತಾರೆ. (ರೋಮ್. ೩, ೨೩. ೨೪.)

೨೩. ನಮಗೆ ಪಾಪವಿಲ್ಲವೆಂದು ಹೇಳಿದರೆ, ನಮ್ಮನ್ನು ನಾವೇ ಮೋಸಗೊಳಿಸುತ್ತೇವೆ, ಮತ್ತು ಸತ್ಯವು ನಮ್ಮಲ್ಲಿ ಇಲ್ಲ. ನಮ್ಮ ಪಾಪಗಳನ್ನು ಅರಿಕೆ ಮಾಡಿದರೆ, ಆತನು ನಮಗೆ ಪಾಪಗಳನ್ನು ಮನ್ನಿಸಿ, ಯೆಲ್ಲಾ ಅನೀತಿಯಿಂದ ನಮ್ಮನ್ನು ಶುದ್ಧ ಮಾಡುವ ಹಾಗೆ ನಂಬಿಕೆ ನೀತಿಯುಳ್ಳಾತನಾಗಿದ್ದಾನೆ. (೧ಯೋ. ೧, ೮. ೯.)

ಆದರೆ ವಿಶ್ವಾಸದ ಮೇಲೆ ನಿಜವಾದ ಪರಿಶುದ್ಧತ್ವವೂ ಬರ ಬೇಕು.

೨೪. ಈ ವಾಗ್ದತ್ತಗಳನ್ನು ಹೊಂದಿದವರಾಗಿ ಮಾಂಸ ಆತ್ಮಗಳ ಯೆಲ್ಲಾ ಮೈಲಿಗೆಯಿಂದ ನಮ್ಮನ್ನು ಶುಚಿ ಮಾಡಿ ಕೊಂಡು ಪರಿಶುದ್ಧತ್ವವನ್ನು ದೇವರ ಭಯದಲ್ಲಿ ಪೂರೈಸುವ. (೨ ಕೊರ್. ೭, ೧.)

೨೫. ಪರಿಶುದ್ಧತ್ವವನ್ನು ಹಿಂದಟ್ಟಿರಿ; ಇದು ಇಲ್ಲದೆ ಯಾವನಾದರೂ ಕರ್ತನನ್ನು ಕಾಣನು. (ಇಬ್ರಿ. ೧೨,೧೪.)

೨೬. ನಾವು ಅವುಗಳಲ್ಲಿ ನಡೆದು ಕೊಳ್ಳುವ ಹಾಗೆ, ದೇವರು ಸಿದ್ಧ ಮಾಡಿದ ಸತ್‌ಕ್ರಿಯೆಗಳಿಗಾಗಿ, ಯೇಸು ಕ್ರಿಸ್ತನಲ್ಲಿ ಸೃಷ್ಟಿಸಲ್ಪಟ್ಟಂಥ, ಆತನ ನಿರ್ಮಾಣವಾಗಿದ್ದೇವೆ. (ಎಫ್. ೩, ೧೦.)

೨೭. ವಿಮೋಚನೆಯ ದಿವಸಕ್ಕೆಂದು ನಿಮಗೆ ಮುದ್ರೆ ಹಾಕಿದಂಥಾ, ದೇವರ ಪರಿಶುದ್ಧವಾದ ಆತ್ಮವನ್ನು ದುಃಖ ಪಡಿಸಬೇಡಿರಿ. (ಎಫ್. ೪, ೩೦.)

ಇದಕ್ಕೆ ವಿಶ್ವಾಸಿಯು ನಿರಂತರವಾಗಿ ಕ್ರಿಸ್ತನ ಸಂಗಡಲೂ ಆತನ ಆತ್ಮದ ಸಂಗಡಲೂ ಐಕ್ಯದಲ್ಲಿ ಇರಬೇಕು.

೨೮. ನನಗೆ ಹೊರಗಾಗಿ ಯೇನು ಮಾಡಲಾರಿರಿ. ಯಾವನಾದರೂ ನಂನಲ್ಲಿ ನೆಲೆಯಾಗಿರದಿದ್ದರೆ, ಕುಡಿಯ ಹಾಗೆ ಹೊರಗೆ ಬಿಸಾಡಲ್ಪಟ್ಟು ಒಣಗಿ ಹೋಗುವನು, ಮತ್ತು ಅವುಗಳನ್ನು ಕೂಡಿಸಿ ಬೆಂಕಿಯೊಳಗೆ ಹಾಕಿ ಸುಡುತ್ತಾರೆ. (ಯೋ. ೧೫, ೫. ೬.)

೨೯. ನೀವು ಮಾಂಸದಲ್ಲಿ ಅಲ್ಲಾ, ದೇವರ ಆತ್ಮವು ನಿಂಮಲ್ಲಿ ವಾಸವಾಗಿದ್ದರೆ, ಆತ್ಮದಲ್ಲಿ ಇದ್ದೀರಿ. ಆದರೆ ಯಾವನಿಗಾದರೂ ಕ್ರಿಸ್ತನ ಆತ್ಮವು ಇಲ್ಲದಿದ್ದರೆ ಅವನು ಕ್ರಿಸ್ತನವನಲ್ಲಾ. (ರೋಮ್. ೮, ೯.)

೩೦. ಭಯದಿಂದಲೂ ನಡುಗಿನಿಂದಲೂ ನಿಮ್ಮ ರಕ್ಷಣೆಯನ್ನು ಉಂಟು ಮಾಡಿ ಕೊಳ್ಳಿರಿ. ಯಾಕಂದರೆ ಇಚ್ಛೈಸುವದನ್ನೂ ಯತ್ನೈಸುವದನ್ನೂ ತನ್ನ ಸುಯೋಚನೆಯ ಪ್ರಕಾರ ನಿಂಮಲ್ಲಿ ಯತ್ನೈಸುವವನು ದೇವರೇ. (ಫಿಲಿಪ್ಪ್. ೨, ೧೨. ೧೩.)

ಇದರಲ್ಲಿ ಕರ್ತನು ನಮಗೆ ವಿಶೇಷವಾಗಿ ಕ್ರೈಸ್ತಸಭೆಯಿಂದ ಸಹಾಯ ಮಾಡುತ್ತಾನೆ.

೩೧. ಇಬ್ಬರಾದರೂ ಮೂವರಾದರೂ ನನ್ನ ಹೆಸರಿನಲ್ಲಿ ಯೆಲ್ಲಿ ಕೂಡಿ ಇರುತ್ತಾರೋ ಅಲ್ಲಿ ಅವರ ಮಧ್ಯದಲ್ಲಿ ಇದ್ದೇನೆ. (ಮತ್ಥ್. ೧೮, ೨೦.)

೩೨. ಇಗೋ, ನಾನು ಯುಗದ ಅಂತ್ಯದವರೆಗೂ ಯೆಲ್ಲಾ ದಿವಸಗಳಲ್ಲಿ ನಿಮ್ಮ ಸಂಗಡ ಇದ್ದೇನೆ. (ಮತ್ಥ್. ೨೮, ೨೦.)

ಮತ್ತು ವಾಕ್ಯದ ಮುಖದಿಂದ ತನ್ನನ್ನು ನಮಗೆ ದಯಪಾಲಿಸುತ್ತಾನೆ.

೩೩. ಸ್ಥಿರವಾದ ಪ್ರವಾದನೆಯ ವಾಕ್ಯವು ನಮಗೆ ಉಂಟು; ದಿವಸವು ಬೆಳಗುವ ಪರಿಯಂತರಕ್ಕೂ, ಉದಯ ನಕ್ಷತ್ರವು ನಿಮ್ಮ ಹೃದಯಗಳಲ್ಲಿ ಮೂಡುವ ಪರಿಯಂತರಕ್ಕೂ ಇದನ್ನು ಕತ್ತಲೆಯಾದ ಸ್ಥಳದಲ್ಲಿ ಪ್ರಕಾಶಿಸುವ ದೀಪವೆಂದೆಣಿಸಿ ಲಕ್ಷ್ಯ ಮಾಡಿದರೆ, ಚನ್ನಾಗಿ ಮಾಡುತ್ತೀರಿ. (೨ ಪೇತ್ರ. ೧, ೧೯.)

೩೪. ದೇವರ ವಾಕ್ಯವು ಜೀವವುಳ್ಳದ್ದು, ಚುರುಕಾದದ್ದು, ಯಾವ ಇಬ್ಬಾಯಿ ಕತ್ತಿಗಿಂತಲಾದರೂ ಹದವಾದದ್ದು, ಪ್ರಾಣ, ಆತ್ಮ, ಕೀಲು, ಮೆದಳುಗಳ ಛೇದದವರೆಗೂ ಸೇರುವಂಥಾದ್ದು, ಹೃದಯದ ಇಚ್ಛೆಗಳನ್ನೂ, ಆಲೋಚನೆಗಳನ್ನೂ ಶೋಧಿಸುವಂಥಾದ್ದು. (ಇಬ್ರಿ. ೪, ೧೨.)

ಹಾಂಗೂ ಕೃಪೆಃ ಪರಿಶುದ್ಧ ಆಚಾರಗಳ ಮುಖದಿಂದ.

೨೫. ಈತನೇ ನೀರಿನಿಂದಲೂ ರಕ್ತದಿಂದಲೂ ಬಂದವನು; ಯಾವನಂದರೆ—ಕ್ರಿಸ್ತನಾದ ಯೇಸು. ನೀರಿನಿಂದ ಮಾತ್ರವಲ್ಲ, ನೀರಿನಿಂದಲೂ ರಕ್ತದಿಂದಲೂ. (೧ ಯೋ. ೫, ೬.)

ಅಂದರೆ ಪರಿಶುದ್ಧ ಸ್ನಾನದಿಂದ.

೨೬. ಕ್ರಿಸ್ತ ಯೇಸುವಿನಲ್ಲಿರುವ ವಿಶ್ವಾಸದ ಮೂಲವಾಗಿ ಯೆಲ್ಲರು ದೇವರ ಮಕ್ಕಳಾಗಿದ್ದೀರಿ. ಹ್ಯಾಗಂದರೆ, ಕ್ರಿಸ್ತನಿಗಾಗಿ ಸ್ನಾನ ಹೊಂದಿದವರಷ್ಟು ಕ್ರಿಸ್ತನನ್ನು ಧರಿಸಿದಿರಿ. (ಗಲ್. ೪, ೨೭.)

ಮತ್ತು ಪರಿಶುದ್ಧ ರಾತ್ರಿಭೋಜನದಿಂದ.

೨೭. ನನ್ನ ಮಾಂಸವನ್ನು ತಿಂದು, ನನ್ನ ರಕ್ತವನ್ನು ಕುಡಿಯುವವನಿಗೆ ನಿತ್ಯಜೀವ ಉಂಟು. ಮತ್ತು ನಾನು ಅವನನ್ನು ಕಡೇ ದಿನದಲ್ಲಿ ಯೆಬ್ಬಿಸುವೆನು. ಯಾಕಂದರೆ ನನ್ನ ಮಾಂಸ ನಿಜವಾಗಿವು ಆಹಾರವಾಗಿದೆ, ನನ್ನ ರಕ್ತವು ನಿಜವಾಗಿ ಪಾನವಾಗಿದೆ. ನನ್ನ ಮಾಂಸವನ್ನು ತಿಂದು ನನ್ನ ರಕ್ತವನ್ನು ಕುಡಿಯುವವನು ನನ್ನಲ್ಲಿ ನೆಲೆಯಾಗಿದ್ದಾನೆ; ನಾನು ಅವನಲ್ಲಿ ಇದ್ದೇನೆ. (ಯೋ. ೬, ೫೪—೫೬.)

ಇದರ ಸೇವೆಗಾಗಿ ಆತನು ವಾಕ್ಯದ ಸೇವೆಯನ್ನು ನೇಮಿಸಿದ್ದಾನೆ.

೩೮. ದೇವರು ನಮ್ಮನ್ನು ಯೇಸು ಕ್ರಿಸ್ತನ ಮುಖಾಂತರ ತನಗೆ ಅನ್ಯೋನ್ಯ ಮಾಡಿ, ಅನ್ಯೋನ್ಯದ ಸೇವೆಯನ್ನು ನಮಗೆ ಕೊಟ್ಟನು .(೨ ಕೊರ್. ೫, ೧೮.)

೩೯. ಕ್ರಿಸ್ತನ ಸೇವಕರೆಂದೂ, ದೇವರ ಮರ್ಮಗಳ ಉಗ್ರಾಣದವರೆಂದೂ, ಹೀಗೆ ಮನುಷ್ಯನು ನಮ್ಮನ್ನು ಯೆಣಿಸಲಿ. (೧ ಕೊರ್. ೪, ೧.)

ಮನುಷ್ಯನು ಈ ಕ್ರಮಕ್ಕೆ ಒಪ್ಪಿಕೊಂಡರೆ ತನ್ನ ರಕ್ಷಣೆಯು ಅವನಿಗೆ ಇಹಕ್ಕೂ ಪರಕ್ಕೂ ನಿಶ್ಚಯವಾಗಿದೆ.

೪೦. ವಿಶ್ವಾಸದಿಂದ ನೀತಿನಿರ್ಣಯ ಪಟ್ಟ ನಮಗೆ ದೇವರ ಸಂಗಡ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮುಖಾಂತರ ಸಮಾಧಾನ ಉಂಟು ಆತನ ಮುಖಾಂತರ ನಾವು ನಿಂತು ಕೊಂಡಿರುವ ಈ ಕೃಪೆಯಲ್ಲಿ ಪ್ರವೇಶವನ್ನು ಸಹ ವಿಶ್ವಾಸದಿಂದ ಹೊಂದಿ ದೇವರ ಮಹಿಮೆಯ ಕೋರಿಕೆಯಲ್ಲಿ ಹೆಚ್ಚಳ ಪಡುತ್ತೇವೆ. (ರೋಮ್. ೫, ೧. ೨.)

೪೧. ಆದದರಿಂದ ಸಹೋದರರೇ, ನಿಮ್ಮ ಕರೆಯುವಿಕೆಯನ್ನೂ ಆಯುವಿಕೆಯಂನೂ ಸ್ಥಿರ ಮಾಡುವ ಹಾಗೆ, ಹೆಚ್ಚಾಗಿ ಜಾಗ್ರತೆಯಾಗಿರಿ. ಯಾಕಂದರೆ ಇವುಗಳನ್ನು ಮಾಡಿದರೆ, ಯೆಂದಿಗೂ ಯೆಡವದೇ ಇರುವಿರಿ. ಯಾಕಂದರೆ ಹೀಗೆಯೇ ನಮ್ಮ ಕರ್ತನೂ ರಕ್ಷಕನೂ ಆ

ಗಿರುವ ಯೇಸು ಕ್ರಿಸ್ತನ ನಿತ್ಯರಾಜ್ಯದಲ್ಲಿ ನಮಗೆ ಪ್ರವೇಶವು ಐಶ್ವರ್ಯವಾಗಿ ಕಾಡಲ್ಪಡುವದು. (೨. ಪೇತ್ರ. ೧, ೧೦. ೧೧.)

ಮೊದಲಿನ ಕ್ರಮದ ಉಪಭಾಗ.

ಕ್ರೈಸ್ತಸಭೆಯ ಉತ್ಸವಗಳ ಅಭಿಪ್ರಾಯ ತಿಳಿಸುವ ವಚನಗಳು.

೧. ಕ್ರಿಸ್ತನ ಆಗಮದ ಕಾಲ.

೪೨. ದೇವರಾದ ಕರ್ತನು ಸರ್ಪಕ್ಕೆ ಹೇಳಿದ್ದೇನಂದರೆ: ನಿನಗೂ ಸ್ತ್ರೀಗೂ, ನಿನ್ನ ಬೀಜಕ್ಕೂ ಸ್ತ್ರೀಯ ಬೀಜಕ್ಕೂ ಹಗೆ ಇಡುವೆನು. ಅವನು ನಿನ್ನ ತಲೆಯನ್ನು ಅಮಕುವನು, ಆದರೆ ನೀನು ಅವನ ಹಿಮ್ಮಡಿಯನ್ನು ಅಮಕುವಿ. (ಉತ್ಪತ್ತಿ. ೩, ೧೫.)

೪೩. ಇಗೋ ನನ್ನ ದೂತನನ್ನು ಕಳುಹಿಸುವೆನು, ಅವನು ನನ್ನ ಮುಂದೆ ಮಾರ್ಗವನ್ನು ಸಿದ್ಧ ಮಾಡುವನು ಮತ್ತು ನೀವು ಹುಡುಕುವ ಕರ್ತನೂ, ನೀವು ಇಚ್ಛೈಸುವ ಹಾಡಂಬಡಿಕೆಯ ದೂತನೂ, ತನ್ನ ಮಂದಿರಕ್ಕೆ ಬರುವನು. (ಮಲ್. ೩, ೧.)

೪೪. ಯೆಲ್ಲಾ ಅಂಗೀಕಾರಕ್ಕೆ ಯೋಗ್ಯವಾದ ನಂಬಿಕೆಯಾದ ವಾಕ್ಯವು ಇದೇ—ಕ್ರಿಸ್ತ ಯೇಸು ಪಾಪಿಗಳನ್ನು ರಕ್ಷಿಸುವದಕ್ಕೆ ಲೋಕಕ್ಕೆ ಬಂದನು. (೧ ತಿಮ್. ೧, ೧೫.)

೪೫. ಇಗೋ ಬಾಗಲಿನ ಹತ್ತರ ನಿಂತು ಕೊಂಡು ತಟ್ಟುತ್ತೇನೆ. ಯಾವನಾದರೂ ನನ್ನ ಶಬ್ದವನ್ನು ಕೇಳಿ ಬಾಗಲನ್ನು ತೆರೆದರೆ, ನಾನು ಅವನ ಬಳಿಗೆ ಪ್ರವೇಶಿಸಿ, ಅವನ ಸಂಗಡ ಉಣ್ಣುವೆನು. (ಪ್ರಕ್. ೩, ೨೦.)

೪೬. ಇಗೋ, ಬೇಗ ಬರುತ್ತೇನೆ; ಮತ್ತು ಒಬ್ಬೊಬ್ಬನಿಗೆ ಅವನವನ ಕ್ರಿಯೆಯು ಇರುವ ಪ್ರಕಾರವೇ ಕೊಡುವದಕ್ಕೆ, ನನ್ನ ಸಂಬಳವು ನನ್ನ ಸಂಗಡ ಇರುತ್ತದೆ. (ಪ್ರಕ್. ೨೨, ೧೨.)

೨. ಕ್ರಿಸ್ತನ ಜನ್ಮಹಬ್ಬ.

೪೭. ಭಯ ಪಡ ಬೇಡಿರಿ. ಯಾಕಂದರೆ ಇಗೋ ಜನರಿಗೆಲ್ಲಾ ಉಂಟಾಗುವ ಮಹಾ ಸಂತೋಷವನ್ನು ನಿಮಗೆ ಪ್ರಸಂಗಿಸುತ್ತೇನೆ. ಯೇನಂದರೆ, ಈಹೊತ್ತು ಕರ್ತನಾದ ಕ್ರಿಸ್ತನೆಂಬ ರಕ್ಷಕನು ದಾವೀದನ ಪಟ್ಟಣದಲ್ಲಿ ನಿಮಗೆ ಹುಟ್ಟಿದ್ದಾನೆ. (ಲೂಕ್. ೨, ೧೦.)

೪೮. ಭಕ್ತಿಯ ಮರ್ಮವು ಸಂದೇಹವಿಲ್ಲದೆ ದೊಡ್ಡದಾಗಿದೆ—ದೇವರು ಮಾಂಸದಲ್ಲಿ ಪ್ರತ್ಯಕ್ಷವಾಗಿ, ಆತ್ಮದಲ್ಲಿ ನೀತಿನಿರ್ಣಯ ಪಟ್ಟು, ದೂತರಿಗೆ ಕಾಣಿಸಿಕೊಂಡು, ಜನಾಂಗಗಳಲ್ಲಿ ಸಾರಲ್ಪಟ್ಟು, ಲೋಕದಲ್ಲಿ ವಿಶ್ವಾಸಿಸಲ್ಪಟ್ಟು, ಮಹಿಮೆಯಲ್ಲಿ ಯೆತ್ತಲ್ಪಟ್ಟನು. (೧ ತಿಮ್. ೩, ೧೬.)

೩. ಕ್ರಿಸ್ತನ ಛೇದನೆ ಹೆಸರು.

೪೯. (ಯೇಸುವೆಂಬ ಹೆಸರು ಅಲ್ಲದೆ) ನಾವು ಅದರಲ್ಲಿ ರಕ್ಷಿಸಲ್ಪಡ ಬೇಕೆಂದು ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟ ಬೇರೆ ಹೆಸರು ಇಲ್ಲವೇ ಇಲ್ಲಾ. (ಅಪೊ. ಕ್ರಿ. ೪, ೧೨.)

೪. ಕ್ರಿಸ್ತನ ಪ್ರಶ್ಚೃಕ್ಷತೆಯ ಹೆಸರು.

೫೦. ಕ್ರಿಸ್ತನು ಬಂದು ದೂರವಾದ ನಿಮಗೂ, ಸಮೀಪವಾದವರಿಗೂ ಸಮಾಧಾನವನ್ನು ಪ್ರಸಂಗಿಸಿದನು. ಯೇನಂದರೆ ಆತನ ಮುಖಾಂತರ ಇಬ್ಬರಾದ ನಮಗೆ ಒಂದೇ ಆತ್ಮದಲ್ಲಿ ತಂದೆಯ ಬಳಿಗೆ ಪ್ರವೇಶ ಉಂಟು. (ಎಫ್. ೨, ೧೭. ೧೮.)

೫೧. ಜನಾಂಗಗಳು ನಿನ್ನಬೆಳಕಿಗೆ—ಅರಸರು ನಿಂನ ಉದಯದ ಪ್ರಕಾಶಕ್ಕೆ ಬರುವರು. (ಯೆಶ್. ೬೦, ೩.)

೫. ಕ್ರಿಸ್ತನ ಶ್ರಮೆ, ಮರಣದ ಕಾಲ.

೫೨. ನಿನ್ನ ಪಾಪಗಳಿಂದ ನನಗೆ ಕಷ್ಟ ಕೊಟ್ಟಿ ನಿನ್ನ ಅಪರಾಧಗಳಿಂದ ನನ್ನನ್ನು ದಣಿಸಿದಿ. ನಾನೇ ನನ್ನ ನಿಮಿತ್ತ ನಿನ್ನ ಅಕ್ರಮವನ್ನು ಪರಿಹರಿಸಿ ನಿನ್ನ ಪಾಪವನ್ನುನೆನಸುವದಿಲ್ಲಾ. (ಯೆಶ್. ೪೩, ೨೪. ೨೫.)

೫೩. ಬದುಕುವವರು ಇನ್ನುತಮಗಲ್ಲಾ, ತಮಗೋ

ಸ್ಕರ ಸತ್ತು ಯೆಬ್ಬಿಸಲ್ಪಟ್ಟವನಿಗೆ ಬದುಕುವ ಹಾಗೆ, ಆತನು ಯೆಲ್ಲರಿಗೋಸ್ಕರ ಸತ್ತನು. (೨. ಕಾರ್. ೫, ೧೫.)

೫೪. ನಾನು ಶಿಲುಬೆಗೆ ಹಾಕಲ್ಪಟ್ಟವನಾದ ಯೇಸು ಕ್ರಿಸ್ತನನ್ನೇ ಹೊರ್ತು, ನಿಮ್ಮಲ್ಲಿ ಯೇನಾದರೂ ತಿಳಿಯ ನಿರ್ಣಯಿಸಿ ಕೊಳ್ಳಲಿಲ್ಲ. (೧ ಕಾರ್. ೨, ೨.)

೫೫. ನನಗೆ ನಮ್ಮ ಕರ್ತನಾದ ಯೇಸು ಕ್ರಿಸ್ತನ ಶಿಲುಬೆಯಲ್ಲಿ ಹೊರ್ತು ಹೊಗ್ಗಳ ಪಡುವದು ಆಗದು; ಅದರಿಂದ ನನಗೆ ಲೋಕವು ಶಿಲುಬೆಗೆ ಹಾಕಲ್ಪಟ್ಟದೆ; ನಾನು ಲೋಕಕ್ಕೆ. (ಗಲ್. ೬, ೧೪.)

೫೬. ಕ್ರಿಸ್ತನು ತನ್ನನ್ನು ಸುವಾಸನೆಯಾದ ಪರಿಮಳಕ್ಕಾಗಿ, ನಮಗೋಸ್ಕರ ಕಾಣಿಕೆಯಾಗಿಯೂ, ಬಲಿಯಾಗಿಯೂ, ದೇವರಿಗೆ ಒಪ್ಪಿಸಿ ಕೊಟ್ಟು ನಮ್ಮನ್ನು ಪ್ರೀತಿ ಮಾಡಿದನು. (ಎಫ್. ೫, ೨.)

೫೭. ಲಯವಾಗುವ ಬೆಳ್ಳಿಯಿಂದಲೂ ಭಂಗಾರದಿಂದಲೂ ಅಲ್ಲ, ನಿರ್ಮಲವಾಗಿಯೂ ನಿಷ್ಕಳಂಕವಾಗಿಯೂ ಇರುವ ಕುರಿಮರಿಯಾದ ಕ್ರಿಸ್ತನ ಅಮೂಲ್ಯವಾದ ರಕ್ತದಿಂದಲೇ ಪಿತೃಸಂಪ್ರದಾಯವಾದ ನಿಮ್ಮ ವ್ಯರ್ಥ ನಡತೆಯಿಂದ ಬಿಡುಗಡೆಯಾದಿರೆಂದು ಬಲ್ಲಿರಿ. (೧ ಪೇತ್ರ. ೨, ೧೮.)

೫೮. ಕ್ರಿಸ್ತನು ನಮಗೋಸ್ಕರ ಶ್ರಮೆ ಪಟ್ಟು, ನೀವು ಆತನ ಹೆಜ್ಜೆಗಳನ್ನು ಹಿಡಿಯುವ ಹಾಗೆ ನಿಮ

ಗೆ ಮಾದರಿಯನ್ನು ತೋರಿಸಿದ್ದಾನೆ. ಆತನು ಪಾಪ ಮಾಡಲಿಲ್ಲ; ಆತನ ಬಾಯಲ್ಲಿ ಮೋಸವು ಕಾಣಿಸಲಿಲ್ಲ. ಆತನು ಬೈಯಲ್ಪಟ್ಟಾಗ, ಬೈಯಲಿಲ್ಲ. ಶ್ರಮೆಪಟ್ಟಾಗ, ಬೆದರಿಸಲಿಲ್ಲ; ಆದರೆ ನೀತಿಯಾಗಿ ನ್ಯಾಯತೀರಿಸುವವನಿಗೆ ಕಾರ್ಯವನ್ನು ಒಪ್ಪಿಸಿದನು. ನಾವು ಪಾಪಗಳಿಗೆ ಸತ್ತು, ನೀತಿಗೆ ಬದುಕುವ ಹಾಗೆ, ಆತನು ತಾನೇ ನಮ್ಮ ಪಾಪಗಳನ್ನು ತನ್ನ ಶರೀರದಲ್ಲಿ ಮರದ ಮೇಲೆ ಹೊತ್ತುಕೊಂಡನು. (೧ ಪೇತ್ರ. ೨, ೨೧—೨೪.)

೬. ಕ್ರಿಸ್ತನ ಉತ್ಥಾನದ ಹಬ್ಬ.

೫೯. ಯೇಸು ಹೇಳಿದ್ದೇನಂದರೆ: ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ; ನಂನಲ್ಲಿ ವಿಶ್ವಾಸವಿಡುವವನು ಸತ್ತರೂ ಬದುಕುವನು. ಮತ್ತು ಬದುಕಿ ನಂನಲ್ಲಿ ವಿಶ್ವಾಸವಿಡುವವನು ಯೆಂದಿಗೂ ಸಾಯುವದಿಲ್ಲ. ಇದಂನು ನಂಬುತ್ತೀಯೋ? (ಯೋ. ೧೧, ೨೫. ೨೬.)

೬೦. ಅಂಜಬೇಡ; ನಾನು ಮೊದಲಿನವನೂ, ಕಡೆಯವನೂ, ಬದುಕುವವನೂ ಆಗಿದ್ದೇನೆ. ಸತ್ತಿದ್ದೆನು, ಮತ್ತು ಇಗೋ, ಯುಗಯುಗಾಂತರಗಳವರಿಗೂ ಬದುಕುವವನಾಗಿದ್ದೇನೆ. ಮತ್ತು ಪಾತಾಳ ಮರಣಗಳ ಬೀಗದ ಕೈಗಳು ನನಗುಂಟು. (ಪ್ರಕ್. ೧, ೧೭. ೧೮.)

೭. ಕ್ರಿಸ್ತನ ದಿವಾರೋಹಣದ ಹಬ್ಬ.

೬೧. ದೇವರು ಜಯಧ್ವನಿಯಿಂದ, ಕರ್ತನು ತುತೂರಿಯ ಶಬ್ದದಿಂದ ಯೇರಿ ಹೋಗಿದ್ದಾನೆ. ಕೀರ್ತಿಸಿರಿ, ದೇವರನ್ನು ಕೀರ್ತಿಸಿರಿ. ಕೀರ್ತಿಸಿರಿ, ನಮ್ಮ ಅರಸನನ್ನು ಕೀರ್ತಿಸಿರಿ. (ಕೀರ್ತ್. ೪೭, ೫. ೬.)

೬೨. ನೀವು ಕ್ರಿಸ್ತನ ಸಂಗಡ ಯೆಬ್ಬಿಸಲ್ಪಟ್ಟವರಾಗಿದ್ದರೆ, ಮೇಲೆ ಇರುವವುಗಳನ್ನು ಹುಡುಕಿರಿ. ಅಲ್ಲಿ ಕ್ರಿಸ್ತನು ದೇವರ ಬಲಕಡೆಯಲ್ಲಿ ಕೂತು ಕೊಂಡಿದ್ದಾನೆ. ಭೂಲೋಕದವುಗಳನ್ನಲ್ಲ, ಮೇಲಿನವುಗಳನ್ನೇ ಚಿಂತಿಸಿರಿ. (ಕೊಲ್. ೩, ೧. ೨.)

೮. ಪಂಚಾಶತ್ತಿನ ಹಬ್ಬ.

೬೩. ಮಾಂಸವೆಲ್ಲಾದರ ಮೇಲೆ ನನ್ನ ಆತ್ಮವನ್ನು ಹೊಯ್ಯುವೆನು, ನಿಮ್ಮ ಕುಮಾರ ಕುಮಾರ್ತೆಗಳು ಪ್ರವಾದಿಸುವರು; ನಿಮ್ಮ ಯೌವನಸ್ಥರು ದರ್ಶನಗಳನ್ನು ನೋಡುವರು; ನಿಮ್ಮ ಹಿರಿಯರು ಕನಸುಗಳನ್ನು ಕಾಣುವರು. ಆ ದಿನಗಳಲ್ಲಿ ನನ್ನ ದಾಸರ ಮೇಲೆಯೂ ನನ್ನ ದಾಸಿಗಳ ಮೇಲೆಯೂ ನನ್ನ ಆತ್ಮವನ್ನು ಹೊಯ್ಯುವೆನು. (ಯೋಯೆಲ್. ೩, ೧. ೨.)

೬೪. ನಮ್ಮನ್ನು ಕ್ರಿಸ್ತನಲ್ಲಿ ಸ್ಥಿರ ಪಡಿಸುವವನೂ

ನಮ್ಮನ್ನು ಅಭಿಷೇಕಿಸಿದವನೂ ದೇವರೇ; ನಮಗೆ ಮುದ್ರೆ ಹಾಕಿದವನೂ, ಆತ್ಮದ ಮುಂಗಡವನ್ನು ನಂಮ ಹೃದಯಗಳಲ್ಲಿ ಕೊಟ್ಟವನೂ ಆತನೇ. (೨. ಕೊರ್. ೧, ೨೧. ೨೨.)

೬೫. ಕರ್ತನಾದ ಯೇಸುವಿನ ನಾಮದಿಂದಲೂ ನಮ್ಮದೇವರ ಆತ್ಮದಿಂದಲೂ ನೀವು ತೊಳೆಯಲ್ಪಟ್ಟು, ಪರಿಶುದ್ಧ ಮಾಡಲ್ಪಟ್ಟು, ನೀತಿನಿರ್ಣಯ ಪಟ್ಟಿದ್ಧೀರಿ. (೧ ಕೊರ್. ೬, ೧೧.)

೮. ಪರಿಶುದ್ಧ ತ್ರಿಯೇಕತ್ವದ ಹಬ್ಬ.

೬೬. ಕರ್ತನಾದ ಯೇಸು ಕ್ರಿಸ್ತನ ಕೃಪೆಯೂ, ದೇವರ ಪ್ರೀತಿಯೂ, ಪರಿಶುದ್ಧಾತ್ಮದ ಐಕ್ಯವೂ ನಿಮ್ಮೆಲ್ಲರ ಸಂಗಡ ಇರಲಿ! ಆಮೆನ್. (೧ ಕೊರ್. ೧೩, ೧೩.)

೬೭. ಓ ದೇವರ ಜ್ಞಾನ ತಿಳುವಿಕೆಗಳ ಐಶ್ವರ್ಯದ ಅಗಾಧವೇ! ಆತನ ನ್ಯಾಯತೀರ್ವಿಕೆಗಳು ಯೆಷ್ಟೋ ಅಶೋಧ್ಯವಾಗಿವೆ! ಆತನ ಹಾದಿಗಳು ಯೆಷ್ಟೋ ಅಮಾರ್ಗ್ಯವಾಗಿವೆ! ಯಾಕಂದರೆ ಆತನ ದೆಶೆಯಿಂದಲೂ ಆತನ ಮುಖಾಂತರವಾಗಿಯೂ ಆತನ ಕಡೆಗೂ ಸಮಸ್ತವು. (ರೋಮ್. ೧೧, ೩೩. ೩೬.)

ಯೆರಡನೇ ಕ್ರಮ.

ಸದಾಚಾರವನ್ನು ತಿಳಿಸುವಂಥಾ ವಚನಗಳು.

ಸದಾಚಾರದಿಂದ ನಡಿಯ ಬೇಕೆಂದು ದೇವರ ವಾಕ್ಯದಲ್ಲಿ ಸ್ಪಷ್ಟವಾಗಿ ಹೇಳಿಯದೆ.

೧. ಇಕ್ಕಟ್ಟಿನ ಬಾಗಲಿನಿಂದ ಪ್ರವೇಶಿಸಿರಿ, ಯಾಕಂದರೆ ನಾಶನಕ್ಕೆ ಹೋಗುವ ಬಾಗಲು ಅಗಲವೂ, ಮಾರ್ಗ ವಿಸ್ತಾರವೂ, ಅದರಿಂದ ಪ್ರವೇಶಿಸುವವರು ಬಹು ಜನ. ಯಾಕಂದರೆ ಜೀವಕ್ಕೆ ಹೋಗುವ ಬಾಗಲು ಇಕ್ಕಟ್ಟೂ ಮಾರ್ಗ ಸಂಣದೂ ಅದನ್ನು ಕಂಡುಕೊಳ್ಳುವವರು ಸ್ವಲ್ಪ ಜನ. (ಮತ್ಥ್ ೭, ೧೩. ೧೪.)

೨. ಮನುಷ್ಯನೇ! ವೊಳ್ಳೇದಂಥಾದ್ದೂ ಕರ್ತನು ನಿನ್ನ ಕಡೆಯಿಂದ ಕೇಳುವಂಥಾದ್ದೂ ಯಾವದೆಂದು ನಿನಗೆ ತಿಳಿಸಿದ್ಧಾನೆ. ಯೇನಂದರೆ ನ್ಯಾಯವಾದದ್ದನ್ನು ಮಾಡುವದೇ ದಯವನ್ನು ಪ್ರೀತಿಸುವದೇ, ನಿನ್ನ ದೇವರ ಮುಂದೆ ದೀನ ಮನಸ್ಸಾಗಿ ನಡಿಯುವದೇ. (ಮಿಖ್. ೬, ೮.)

೩. ನೀವು ಮಾತಿನಿಂದಾಗಲಿ, ಕ್ರಿಯೆಯಿಂದಾಗಲೀ, ಯೇನು ಮಾಡಿದರೂ, ಯೆಲ್ಲವನ್ನು ಕರ್ತನಾದ ಯೇಸುವಿನ ಹೆಸರಿನಲ್ಲಿ ಮಾಡಿ, ಆತನ ಮುಖಾಂತರ ತಂದೆಯಾದ ದೇವರನ್ನು ಸ್ತುತಿಸಿರಿ. (ಕೊಲ್. ೩, ೧೭.)

೪. ಸತ್ಯವಾದವುಗಳು ಯಾವವೋ, ಘನವಾದವುಗಳು ಯಾವವೋ, ನ್ಯಾಯವಾದವುಗಳು ಯಾವವೋ,

ಪವಿತ್ರವಾದವುಗಳು ಯಾವವೋ, ಪ್ರಿಯಕರವಾದವುಗಳು ಯಾವವೋ, ಸುಕೀರ್ತಿಯಾದವುಗಳು ಯಾವವೋ, ಯಾವ ಸದ್ಗುಣವಿದ್ದರೆ, ಯಾವ ಸ್ತೋತ್ರವಿದ್ದರೆ, ಅವುಗಳನ್ನೇ ಆಲೋಚಿಸಿರಿ. (ಫಿಲಿಪ್ಪಿ. ೪, ೮.)

ದೇವರ ಕೃಪೆಯ ಅನುಭವಕ್ಕೆ ಅಪೇಕ್ಷೆ ಮಾಡುವವರೆಲ್ಲರಿಗೆ ಸಮವಾಗಿ ಈ ಪಾಂಗು ಉಂಟು.

೫. ರಕ್ಷಣೆಗಾಗಿರುವ ದೇವರ ಕೃಪೆಯು ಮನುಷ್ಯರೆಲ್ಲರಿಗೆ ಪ್ರಸಿದ್ಧಿಯಾಗಿ, ನಾವು ಭಕ್ತಿಹೀನತ್ವವನ್ನೂ ಲೌಕಿಕ ಆಶೆಗಳನ್ನೂ ಬಿಟ್ಟು ಬಿಟ್ಟು, ಮನೋಸ್ವಸ್ಥವಾಗಿಯೂ ನೀತಿಯಾಗಿಯೂ ಭಕ್ತಿಯಾಗಿಯೂ ಈಗಿನ ಯುಗದಲ್ಲಿ ಬದುಕಿ, ಭಾಗ್ಯವಾದ ಕೋರಿಕೆಯನ್ನೂ ಮಹಾ ದೇವರೂ, ನಮ್ಮ ರಕ್ಷಕನೂ ಆಗಿರುವ ಯೇಸು ಕ್ರಿಸ್ತನ ಮಹಿಮೆಯ ಪ್ರತ್ಯಕ್ಷತೆಯನ್ನೂ ಯೆದುರು ನೋಡುವ ಹಾಗೆ ನಮ್ಮನ್ನು ಉಪದೇಶಿಸುತ್ತದೆ. (ತೀತ್. ೨, ೧೧—೧೪.)

ಆದರೆ ಹೇಳಿದಂಥಾದೆಲ್ಲಾಕ್ಕೆ ನಮ್ಮಲ್ಲಿ ಮೊದಲು ಕೆಟ್ಟದನ್ನು ಯೆದುರಿಸುವದರಿಂದ ಇಂಬು ಮಾಡ ಬೇಕು.

೬. ಪಾಪ ಮಾಡುವವನು ಪಿಶಾಚನವನಾಗಿದ್ದಾನೆ; ಯಾಕಂದರೆ ಆದಿಯಿಂದ ಪಿಶಾಚನು ಪಾಪ ಮಾಡುತ್ತಾನೆ. ಪಿಶಾಚನ ಕ್ರಿಯೆಗಳನ್ನು ಲಯ ಮಾಡುವದಕ್ಕೋಸ್ಕರವೇ ದೇವರ ಮಗನು ಪ್ರತ್ಯಕ್ಷವಾದನು. (೧ ಯೋ. ೩, ೮.)

೭. ನಿನ್ನ ಬಲಗಣ್ಣು ನಿನ್ನನ್ನು ಆಟಂಕಿಸಿದರೆ, ಅದನ್ನು ಕಿತ್ತು ನಿನ್ನ ಬಳಿಯಿಂದ ಬಿಸಾಡು. ಯಾಕಂದರೆ ನಿನ್ನ ಅಂಗಗಳಲ್ಲಿ ಒಂದು ನಾಶವಾಗಿ ನಿನ್ನ ಶರೀರವೆಲ್ಲಾ ನರಕದಲ್ಲಿ ಹಾಕಲ್ಪಡದೆ ಇರುವದು ನಿನಗೆ ಪ್ರಯೋಜನವಾಗಿದೆ. ಮತ್ತು ನಿನ್ನ ಬಲಗೈ ನಿನ್ನನ್ನು ಆಟಂಕಿಸಿದರೆ, ಅದನ್ನು ಕಡಿದು, ನಿನ್ನ ಬಳಿಯಿಂದ ಬಿಸಾಡು. ಯಾಕಂದರೆ ನಿನ್ನ ಅಂಗಗಳಲ್ಲಿ ಒಂದು ನಾಶವಾಗಿ ನಿನ್ನ ಶರೀರವೆಲ್ಲಾ ನರಕದಲ್ಲಿ ಹಾಕಲ್ಪಡದೆ ಇರುವದು ನಿನಗೆ ಪ್ರಯೋಜನವಾಗಿದೆ. (ಮತ್ಥ. ೫, ೨೯. ೩೦)

ಅದುಕಾರಣ ನಾವು ವಿಶ್ವಾಸದಿಂದ ಯೆದುರಾಡ ಬೇಕು ಯಾರಿಗಂದರೆ:
೧. ಪಿಶಾಚನಿಗೆ.

೮. ನೀವು ಪಿಶಾಚನ ಉಪಾಯಗಳಿಗೆ ಯೆದುರು ನಿಲ್ಲ ಶಕ್ತರಾಗುವ ಹಾಗೆ ದೇವರ ಸರ್ವಾಯುಧಗಳನ್ನು ಧರಿಸಿ ಕೊಳ್ಳಿರಿ, ಯಾಕಂದರೆ ರಕ್ತ ಮಾಂಸಕ್ಕೆ ವಿರೋಧವಾಗಿ ಅಲ್ಲಾ, ದೊರೆತನಗಳಿಗೂ, ಅಧಿಕಾರಗಳಿಗೂ, ಈ ಯುಗದ ಅಂಧಕಾರದ ಲೋಕಾಧಿಪತಿಗಳಿಗೂ, ಆಕಾಶಗಳಲ್ಲಿರುವ ದುಷ್ಟತನದ ಆತ್ಮಗಳಿಗೂ ವಿರೋಧವಾಗಿ, ನಮಗೆ ಹೋರಾಟ ಉಂಟು. (ಎಫ್. ೬, ೧೧. ೧೨.)

೯. ಮಿತಿಯಾಗಿರಿ. ಯೆಚ್ಚರಿಕೆಯಾಗಿರಿ. ಯಾಕಂದರೆ ನಿಮ್ಮ ವಿರೋಧಿಯಾದ ಪಿಶಾಚನು ಗರ್ಜಿಸುವ ಸಿಂ

ಹದ ಹಾಗೆ, ಯಾರನ್ನು ನುಂಗಿ ಬಿಡಲೆಂದು ಹುಡುಕುತ್ತಾ ತಿರುಗುತ್ತಾನೆ. ವಿಶ್ವಾಸದಲ್ಲಿ ದೃಢವಾಗಿದ್ದು, ಅವನನ್ನು ಯೆದುರಿಸಿರಿ. (೧ ಪೇತ್ರ. ೫, ೮. ೯.)

೨. ಪಾಪಕ್ಕೆ.

೧೦. ನೀನು ಒಳ್ಳೆಯವನಾದರೆ ಅಂಗೀಕಾರವಲ್ಲವೋ? ನೀನು ಒಳ್ಳೆಯವನಾಗದೆ ಹೋದರೆ, ಬಾಗಲಲ್ಲಿ ಪಾಪವು ಮಲಗಿ ಅದೆ; ಮತ್ತು ನಿನ್ನ ಬಳಿಯಲ್ಲಿ ಅದರ ಚಿತ್ತ ಉಂಟು; ನೀನು ಅದರ ಮೇಲೆ ಆಳುವಿ. (ಉತ್ಪತಿ. ೪, ೭.)

೧೧. ಸಕಲ ಭಾರವನ್ನೂ ನಮ್ಮನ್ನು ಮುತ್ತಿಕೊಳ್ಳುವ ಪಾಪವನ್ನೂ ತೆಗೆದು ಹಾಕೋಣ. (ಇಬ್ರಿ. ೧೨, ೧.)

೧೨. ನಾನು ಈ ದೊಡ್ಡ ಕೇಡನ್ನು ಮಾಡಿ ದೇವರಿಗೆ ಪಾಪ ಮಾಡುವದು ಹೇಗೆ. (ಉತ್ಪತಿ. ೩೯, ೯.)

೩. ಲೋಕದ ದುರಾಚಾರಗಳಿಗೆ.

೧೩. ಲೋಕವನ್ನಾದರೂ ಲೋಕದಲ್ಲಿರುವವುಗಳನ್ನಾದರೂ ಪ್ರೀತಿ ಮಾಡಬೇಡಿರಿ. ಯಾವನಾದರೂ ಲೋಕವನ್ನು ಪ್ರೀತಿ ಮಾಡಿದರೆ, ಅವನಲ್ಲಿ ತಂದೆಯ ಪ್ರೀತಿಯು ಇಲ್ಲ. ಯಾಕಂದರೆ ಮಾಂಸದ ಆಶೆಯೂ ಕಣ್ಣುಗಳ ಆಶೆಯೂ ಬದುಕಿನ ಹೆಮ್ಮೆಯೆಂಬ ಲೋಕದಲ್ಲಿರುವಂಥಾದ್ದೆಲ್ಲಾ ತಂದೆಯಿಂದಲ್ಲಾ, ಲೋಕದಿಂದ

ಹುಟ್ಟುವದು. ಲೋಕವೂ ಅದರ ಆಶೆಯೂ ಕಳೆದು ಹೋಗುತ್ತವೆ; ಆದರೆ ದೇವರ ಚಿತ್ತವನ್ನು ಮಾಡುವವನು ಸದಾಕಾಲ ನೆಲೆಯಾಗಿರುತ್ತಾನೆ. (೧. ಯೋ. ೨, ೧೫—೧೭.)

೪. ಮಾಂಸದ ಆಶೆಗಳಿಗೂ.

೧೪. ಕ್ರಿಸ್ತನವರು ಮಾಂಸವನ್ನು, ಇಚ್ಛೆಗಳೂ ಆಶೆಗಳೂ ಸಹಿತವಾಗಿ, ಶಿಲುಬೆಗೆ ಹಾಕಿ ಇದ್ದಾರೆ. (ಗಲ್. ೫, ೨೪.)

ಇದಕ್ಕೆ ಬದಲಾಗಿ ನಾವು ಸಾಧಿಸ ತಕ್ಕದ್ದೇನಂದರೆ:
ಮೊದಲು ದೇವರ ಕ್ರಿಸ್ತನ ಕಡೆಗೆ ನಮಗಿರುವ ಹಂಗುಗಳು ಅವು ಯಾವವಂದರೆ:
೧. ದೇವಭಕ್ತಿ ವಾಟ್ಟಿಗೆ.

೧೫. ಭಕ್ತಿಯ ಅಭ್ಯಾಸ ಮಾಡಿಕೋ, ಯಾಕಂದರೆ, ಶರೀರದ ಅಭ್ಯಾಸವು ಕೊಂಚಕ್ಕೆ ಪ್ರಯೋಜನವಾದದ್ದು. ಆದರೆ ಭಕ್ತಿಯು ಯೆಲ್ಲಾಕ್ಕೂ ಪ್ರಯೋಜನವಾಗಿದೆ. ಅದಕ್ಕೆ ಇಹ ಪರಜೀವಗಳ ವಾಗ್ದತ್ತವುಂಟು. (೧ ತಿಮ್. ೪, ೭. ೮.)

೨. ದೇವರ ಕ್ರಿಸ್ತನ ಜ್ಞಾನವೂ.

೧೬. ಇದು ನಿತ್ಯ ಜೀವವು, ಅವರು ಒಬ್ಬನೇ ನಿಜವಾದ ದೇವರಾಗಿರುವ ನಿನ್ನನ್ನೂ, ನೀನು ಕಳುಹಿ

ಸಿದ ಯೇಸು ಕ್ರಿಸ್ತನನ್ನೂ ಅರಿಯುವದೇ. (ಯೋ. ೧೭, ೩.)

೧೭. ತನ್ನನ್ನು, ತಾನೇ ಕೊಂಡಾಡಿ ಕೊಳ್ಳುವವನು ತಾನು ವಿವೇಕವುಳ್ಳವನಾಗಿದ್ದು, ಭೂಮಿಯ ಮೇಲೆ ದಯ, ನಿರ್ಣಯ, ನೀತಿ ನಡಿಸುವ ಕರ್ತನಾದ ನನ್ನನ್ನು ತಿಳುಕೊಳ್ಳುವದರಲ್ಲಿ ತನ್ನನ್ನು ಕೊಂಡಾಡಿ ಕೊಳ್ಳಲಿ. ಯಾಕಂದರೆ ಇದಕ್ಕೆ ನಾನು ಮೆಚ್ಚಿ ಕೊಳ್ಳುತ್ತೇನೆಂದು ಕರ್ತನು ಹೇಳುತ್ತಾನೆ. (ಎರೆಮಿ. ೯, ೨೪.)

೩. ದೇವರ ಭಯವು.

೧೮. ದೇವರಿಗೆ ಭಯ ಪಡು; ಆತನ ಆಜ್ಞೆಗಳನ್ನು ಕೈಕೊ; ಯಾಕಂದರೆ ಇದೇ ಮನುಷ್ಯರೆಲ್ಲರ ಪಾಂಗು. ಯಾಕಂದರೆ ಒಳ್ಳೆದಾಗಲಿ, ಕೆಟ್ಟದ್ದಾಗಲಿ, ಅಂತರಂಗವಾದ ಯೆಲ್ಲಾದರ ವಿಷಯವಾಗುವ ನ್ಯಾಯತೀರ್ವಿಕೆಯಲ್ಲಿ ದೇವರು ಯೆಲ್ಲಾ ಕೆಲಸಗಳನ್ನು ತೀರಿಸುವನು. (ಪ್ರಸಂಗಿ. ೧೨, ೧೩. ೧೪.)

೧೯. ಸರ್ವಶಕ್ತನಾದ ಕರ್ತನಾಗಿರುವ ದೇವರೇ, ನಿನ್ನ ಕ್ರಿಯೆಗಳು ದೊಡ್ಡವುಗಳೂ ಆಶ್ಚರ್ಯವಾದವುಗಳೂ ಆಗಿವೆ. ಪರಿಶುದ್ಧರ ಅರಸನೇ, ನಿನ್ನ ಮಾರ್ಗಗಳು ನೀತಿಯೂ ಸತ್ಯವೂ ಆದವುಗಳೇ, ಕರ್ತನೇ ನಿನಗೆ ಭಯ ಪಡದೆ, ನಿನ್ನ ಹೆಸರನ್ನು ಮಹಿಮೆ ಪಡಿಸದೆ

ಇರುವವನ್ಯಾರು? ಯಾಕಂದರೆ ನೀನೊಬ್ಬನೇ ಪರಿಶುದ್ಧನು. (ಪ್ರಕ್. ೧೫, ೩. ೪.)

೨೦. ಕರ್ತನಿಗೆ ಭಯಪಟ್ಟು, ಆತನ ಮಾರ್ಗಗಳಲ್ಲಿ ನಡೆದು ಕೊಳ್ಳುವವರೆಲ್ಲರು ಭಾಗ್ಯವಂತರು. ನಿನ್ನ ಕೈಗಳ ಕಷ್ಟಾರ್ಜಿತವನ್ನು ನೀನು ಉಣ್ಣುವಿ. ನೀನು ಭಾಗ್ಯವಂತನು; ನಿನಗೆ ಒಳ್ಳೇದಾಗುವದು. (ಕೀರ್ತ. ೧೨೮, ೧. ೨.)

೪. ದೇವರ ಕಡೆಗೆ ದೈನ್ಯ ಮನಸ್ಸು.

೨೧. ಮನೋದೀನತ್ವವನ್ನು ಧರಿಸಿ ಕೊಳ್ಳಿರಿ. ಯಾಕಂದರೆ, ದೇವರು ಗರ್ವಿಷ್ಠರನ್ನು ಯೆದುರಿಸಿ, ದೀನರಿಗೆ ಕೃಪೆಯನ್ನು ಕೊಡುತ್ತಾನೆ. ಹೀಗಿರುವದರಿಂದ ದೇವರು ತಕ್ಕ ಕಾಲದಲ್ಲಿ ನಿಮ್ಮನ್ನು ಹೆಚ್ಚಿಸುವ ಹಾಗೆ, ಆತನ ಬಲವಾದ ಕೈಕೆಳಗೆ ನಿಮ್ಮನ್ನು ತಗ್ಗಿಸಿ ಕೊಳ್ಳಿರಿ. (೧ ಪೇತ್ರ. ೫, ೫. ೬.)

೫. ದೇವರ ಕ್ರಿಸ್ತನ ಕಡೆಗೆ ಪ್ರೀತಿಯು.

೨೨. ನಿನ್ನ ದೇವರಾದ ಕರ್ತನಿಗೆ ನಿನ್ನ ಪೂರ್ಣ ಹೃದಯದಿಂದಲೂ ನಿನ್ನ ಪೂರ್ಣ ಪ್ರಾಣದಿಂದಲೂ ನಿನ್ನ ಪೂರ್ಣ ಬುದ್ಧಿಯಿಂದಲೂ ಪ್ರೀತಿ ಮಾಡು. (ಮತ್ಥ. ೨೨, ೩೭.)

೨೩. ದೇವರು ಮೊದಲು ನಮ್ಮನ್ನು ಪ್ರೀತಿ ಮಾಡಿದದರಿಂದ, ನಾವು ಆತನನ್ನು ಪ್ರೀತಿ ಮಾಡುತ್ತೇವೆ. (ಯೋ. ೪, ೧೯.)

೨೪. ಕರ್ತನೇ ನಿನಗೆ ಯೆಲ್ಲಾ ತಿಳಿದದೆ; ನಿನ್ನನ್ನು ಸ್ನೇಹಿಸುತ್ತೇನೆಂದು ನೀನು ಬಲ್ಲಿ. (ಯೋ. ೨೧, ೧೭.)

೨೫. ನನ್ನನ್ನು ಪ್ರೀತಿ ಮಾಡಿದರೆ, ನನ್ನ ಕಟ್ಟಳೆಗಳನ್ನು ಕೈಕೊಳ್ಳಿರಿ. (ಯೋ. ೧೪, ೧೫.)

೨೬. ನನ್ನನ್ನು ಪ್ರೀತಿ ಮಾಡುವವನು ನನ್ನ ತಂದೆಗೆ ಪ್ರಿಯನಾಗಿರುವನು. ಮತ್ತು ನಾನು ಅವನನ್ನು ಪ್ರೀತಿ ಮಾಡಿ ಅವನಿಗೆ ಕಾಣಿಸಿ ಕೊಳ್ಳುವೆನು. (ಯೋ. ೧೪, ೨೧.)

೬. ಕ್ರಿಸ್ತನನ್ನು ಅರಿಕೆ ಮಾಡುವದೂ.

೨೭. ಮನುಷ್ಯರ ಮುಂದೆ ನನ್ನನು ಅರಿಕೆ ಮಾಡುವವನ್ಯಾವನೋ, ಅವನನ್ನು ಪರಲೋಕಗಳಲ್ಲಿರುವ ನನ್ನ ತಂದೆಯ ಮುಂದೆ ನಾನು ಅರಿಕೆ ಮಾಡುವೆನು. ಆದರೆ ಮನುಷ್ಯರ ಮುಂದೆ ನನ್ನನ್ನು ಅಲ್ಲಗಳೆಯುವವನ್ಯಾವನೋ, ಅವನನ್ನು ಪರಲೋಕಗಳಲ್ಲಿರುವ ನಂನ ತಂದೆಯ ಮುಂದೆ ನಾನು ಅಲ್ಲಗಳೆಯುವೆನು. (ಮತ್ಥ. ೧೦, ೩೨. ೩೩.)

೨೮. ನಿನ್ನ ಬಾಯಿಯಿಂದ ಕರ್ತನಾದ ಯೇಸುವ

ನ್ನು ಅರಿಕೆ ಮಾಡಿ, ದೇವರು ಸತ್ತವರೊಳಗಿಂದ ಆತ ನನ್ನು ಯೆಬ್ಬಿಸಿದನೆಂದು, ನಿನ್ನ ಹೃದಯದಲ್ಲಿ ವಿಶ್ವಾಸಿಸಿದರೆ, ರಕ್ಷಿಸಲ್ಪಡುವಿ. ಯಾಕಂದರೆ, ಹೃದಯದಿಂದ ನೀತಿಗಾಗಿ ವಿಶ್ವಾಸಿಸುವದೂ ಬಾಯಿಯಿಂದ ರಕ್ಷಣೆಗಾಗಿ ಅರಿಕೆ ಮಾಡುವದೂ ಉಂಟು. (ರೋಮ್. ೧೦, ೯. ೧೦.)

೭. ಯೇಸುವನ್ನು ಹಿಂಬಾಲಿಸುವದೂ.

೨೯. ಯಾವನಾದರೂ ನನ್ನ ಹಿಂದೆ ಬರ ಬೇಕೆಂದಿದ್ದರೆ, ತನ್ನನ್ನು ಅಲ್ಲಗಳೆದು, ತನ್ನ ಶಿಲುಬೆಯನ್ನು ಹೊತ್ತು ಕೊಂಡು ನನ್ನನು ಹಿಂಬಾಲಿಸಲಿ. (ಮತ್ಥ. ೧೬, ೨೪.)

೮. ಭರವಸವೂ.

೩೦. ನಿಮ್ಮ ಧೈರ್ಯವನ್ನು ಬಿಸಾಟು ಬಿಡ ಬೇಡಿರಿ, ಅದಕ್ಕೆ ದೊಡ್ಡ ಪ್ರತಿಫಲ ಉಂಟು. (ಇಬ್ರಿ. ೧೦, ೩೫.)

೩೧. ಮನುಷ್ಯರಲ್ಲಿ ಭರವಸವಿಡುವದಕ್ಕಿಂತ, ಕರ್ತನಲ್ಲಿ ಆಶ್ರಯಿಸಿ ಕೊಳ್ಳುವದು ಒಳ್ಳೇದು. (ಕೀರ್ತ. ೧೧೮, ೮.)

೩೨. ಕರ್ತನಲ್ಲಿ ಭರವಸವಿಟ್ಟು ಕರ್ತನನ್ನು ತನ್ನ ಭರವಸ ಮಾಡಿರುವ ಪುರುಷನು ಆಶೀರ್ವದಿಸಲ್ಪಟ್ಟವನು. (ಎರೆಮಿ. ೧೭, ೭.)

೯. ಅಪೇಕ್ಷೆಯು.

೩೩. ಕರ್ತನೇ ನಿನ್ನ ಕಡೆಗೆ ನನ್ನ ಪ್ರಾಣವನ್ನು ಯೆತ್ತುತ್ತೇನೆ. ನನ್ನದೇವರೇ ನಿಂನಲ್ಲಿ ಭರವಸವಿಟ್ಟಿದ್ದೇನೆ. ನಾನು ನಾಚಿಕೆ ಪಡದೆ ಇರಲಿ. ನನ್ನ ಶತ್ರುಗಳು ನಂನ ಮೇಲೆ ಉತ್ಸಾಹ ಮಾಡದೆ ಇರಲಿ. ನಿನ್ನನು ನಿರೀಕ್ಷಿಸುವವರಲ್ಲಿ ಯಾರೂ ನಾಚಿಕೆ ಪಡದೆ ಇರಲಿ. ಸುಂಮನೆ ವಂಚನೆ ಮಾಡುವವರೇ ನಾಚಿಕೆ ಪಡಲಿ. (ಕೀರ್ತ್. ೨೫, ೧—೩.)

೩೪. ದುಪ್ಪಿಯು ನೀರಿನ ಹೊಳೆಗಳನ್ನು ಹಾಗೆ ಬಯಸುವದೋ, ಹಾಗೆಯೇ ನನ್ನ ಪ್ರಾಣವು ನಿಂನಂನು ಬಯಸುತ್ತದೆ, ದೇವರೇ. ದೇವರಿಗೋಸ್ಕರ, ಜೀವವುಳ್ಳ ದೇವರಿಗೋಸ್ಕರ, ನನ್ನ ಪ್ರಾಣವು ದಾಹಗೊಳ್ಳುತ್ತದೆ. ಯಾವಾಗ ಬಂದು, ದೇವರ ಮುಂದೆ ಕಾಣಿಸಿ ಕೊಳ್ಳುವೆನು? (ಕೀರ್ತ್. ೪೨, ೧. ೨.)

೩೫. ಕರ್ತನೇ ನಿನ್ನ ರಕ್ಷಣೆಯನ್ನು ನಿರೀಕ್ಷಿಸುತ್ತೇನೆ. (ಉತ್ಪತ್ತಿ. ೪೯, ೧೮.)

೧೦. ಪ್ರಾರ್ಥನೆಯು.

೩೬. ಬೇಡಿಕೊಳ್ಳಿರಿ, ಆಗಲು ನಿಮಗೆ ಕೊಡಲ್ಪಡುವದು, ಹುಡುಕಿರಿ, ಆಗಲು ನಿಮಗೆ ಸಿಕ್ಕುವದು; ತಟ್ಟಿರಿ, ಆಗಲು ನಿಮಗೆ ತೆರೆಯಲ್ಪಡುವದು. ಯಾಕಂ

ದರೆ ಬೇಡಿ ಕೊಳ್ಳುವ ಪ್ರತಿ ಮನುಷ್ಯನು ಹೊಂದುತ್ತಾನೆ; ಹುಡುಕುವವನಿಗೆ ಸಿಕ್ಕುತ್ತದೆ; ತಟ್ಟುವವನಿಗೆ ತೆರೆಯಲ್ಪಡುವದು. (ಲೂಕ್. ೧೧, ೯. ೧೦.)

೩೭. ಆದದರಿಂದ ಯೆಲ್ಲಾದರ ಮೊದಲು, ಬಿಂನಹಾ ಪ್ರಾರ್ಥನೆ ವಿಜ್ಞಾಪನೆ ಸ್ತೋತ್ರಗಳನ್ನು, ಯೆಲ್ಲಾ ಮನುಷ್ಯರಿಗೋಸ್ಕರವೂ, ಅರಸರಿಗೋಸ್ಕರವೂ, ಅಧಿಕಾರದಲ್ಲಿರುವವರಿಗೋಸ್ಕರವೂ, ನಾವು ಸಕಲ ಭಕ್ತಿಯಿಂದಲೂ, ಮರ್ಯಾದೆಯಿಂದಲೂ, ಶಾಂತವಾಗಿಯೂ, ಸಮಾಧಾನವಾಗಿಯೂ ಕಾಲಕ್ಷೇಪ ಮಾಡುವ ಹಾಗೆ, ಮಾಡ ಬೇಕೆಂದು ಬುದ್ಧಿ ಹೇಳುತ್ತೇನೆ. (೧. ತಿಮ್. ೨, ೧. ೨.)

೧೧. ಸ್ತೋತ್ರವು.

೩೮. ನನ್ನ ಪ್ರಾಣವೇ, ಕರ್ತನನ್ನೂ ನನ್ನ ಯೆಲ್ಲಾ ಅಂತರಂಗವೇ, ಆತನ ಪರಿಶುದ್ಧವಾದ ಹೆಸರನ್ನೂ ಹರಸು. ನನ್ನ ಪ್ರಾಣವೇ ಕರ್ತನನ್ನು ಹರಸು; ಆತನ ಉಪಕಾರಗಳನ್ನೆಲ್ಲಾ ಮರೆತು ಬಿಡ ಬೇಡ. (ಕೀರ್ತ. ೧೦೩, ೧. ೨.)

೩೯. ಕರ್ತನನ್ನು ಕೊಂಡಾಡಿರಿ; ಯಾಕಂದರೆ ಆತನು ಒಳ್ಳೆಯವನು; ಯಾಕಂದರೆ ಆತನ ಕೃಪೆಯು ಯುಗಯುಗಕ್ಕೂ ಅದೆ. (೧೦೭, ೧.)

೪೦. ನಮಗಲ್ಲಾ ಕರ್ತನೇ, ನಮಗಲ್ಲಾ, ನಿನ್ನ ಹೆಸರಿ

ಗೆ ಮಾತ್ರ, ನಿನ್ನ ಕೃಪೆಯ ನಿಮಿತ್ತ, ನಿನ್ನ ಸತ್ಯದ ನಿಮಿತ್ತ, ಘನವನ್ನು ಕೊಡು. (ಕೀರ್ತ್. ೧೧೫, ೧.)

೪೧. ಯಾವಾಗಲೂ, ಯೆಲ್ಲಾದಕ್ಕೋಸ್ಕರ, ನಮ್ಮ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ತಂದೆಯಾದ ದೇವರಿಗೆ ಸ್ತೋತ್ರ ಮಾಡಿರಿ. (ಎಫ್. ೫, ೨೦.)

೧೨. ದೇವರ ವಾಕ್ಯದಲ್ಲಿಯೂ ಅದರ ಯೆಲ್ಲಾ ಅಭ್ಯಾಸದಲ್ಲಿಯೂ ಪಡುವ ಸಂತೋಷವು.

೪೨. ಕ್ರಿಸ್ತನ ವಾಕ್ಯವು ನಿಂಮಲ್ಲಿ ಸಕಲ ಜ್ಞಾನದಿಂದ ಐಶ್ವರ್ಯವಾಗಿ ವಾಸ ಮಾಡಲಿ; ಒಬ್ಬರಿಗೊಬ್ಬರು ಬೋಧಿಸುತ್ತಾ, ಬುದ್ಧಿ ಹೇಳುತ್ತಾ, ಕೀರ್ತನೆಗಳಿಂದಲೂ, ಗೀತಗಳಿಂದಲೂ, ಆತ್ಮಭಾವವಾದ ಹಾಡುಗಳಿಂದಲೂ, ನಿಮ್ಮ ಹೃದಯದೊಳಗೆ ಕರ್ತನಿಗೆ ಇಂಪಾಗಿ ಹಾಡಿರಿ. (ಕೊಲ್. ೩, ೧೬.)

೪೩. ದೇವರ ವಾಕ್ಯವನ್ನು ಕೇಳಿ ಅದನ್ನು ಕೈಕೊಳ್ಳುವವರೇ ಭಾಗ್ಯವಂತರು. (ಲೂಕ್. ೧೧, ೨೮.)

ಯೆರಡನೇದು. ತನ್ನ ಕಡೆಗೆ ಇರುವ ಹಂಗುಗಳಿಗೆ ಜಾಗ್ರತೆಯಾಗಿರ ಬೇಕು. ಅವು ಯಾವವಂದರೆ:

೧. ತನ್ನ ದೇಹ ಅದರ ಅವಯವಗಳ ವಿಷಯ ನಿರ್ಮಲತ್ವವು.

೪೪. ನಿಮ್ಮ ಶರೀರವು ದೇವರಿಂದುಂಟಾದ ನಿಮ್ಮೊಳಗಿರುವ ಪರಿಶುದ್ಧಾತ್ಮದ ಮಂದಿರವಾಗಿದೆ ಯೆಂದೂ, ನೀವು ನಿಮ್ಮ ಸ್ವಂತವಾದವರಲ್ಲವೆಂದೂ, ಅರಿಯಿರಾ?

ಯಾಕಂದರೆ ಬೆಲೆಯಿಂದ ಕೊಳ್ಳಲ್ಪಟ್ಟಿದ್ದೀರಿ; ಆದಕಾರಣ, ದೇವರವುಗಳಾಗಿರುವ ನಿಮ್ಮ ಶರೀರದಿಂದಲೂ ನಿಮ್ಮ ಆತ್ಮದಿಂದಲೂ ದೇವರನ್ನು ಮಹಿಮೆ ಪಡಿಸಿರಿ. (೧. ಕಾರ್. ೬, ೧೯. ೨೦.)

೪೫. ಯಾವ ಜಾರನಿಗಾಗಲಿ, ಅಶುದ್ಧನಿಗಾಗಲಿ, ವಿಗ್ರಹಾರಾಧಕನಾಗಿರುವ ಲೋಭಿಗಾಗಲಿ, ಕ್ರಿಸ್ತನ ದೇವರ ರಾಜ್ಯದಲ್ಲಿ ಬಾಧ್ಯವಿಲ್ಲವೆಂದು ಬಲ್ಲಿರಿ. (ಎಫ್. ೫, ೫.)

ಮಿತಿಯೂ.

೪೬. ನಿಮ್ಮ ಹೃದಯಗಳು ಹೊಟ್ಟೆಬಾಕತನದಿಂದಲೂ, ಅಮಲಿನಿಂದಲೂ ಜೀವನದ ಚಿಂತೆಗಳಿಂದಲೂ, ಭಾರವಾಗಿರಲು, ಆ ದಿವಸವು ಫಗ್ಗನೇ ನಿಮ್ಮ ಮೇಲೆ ಬಾರದ ಹಾಗೆ, ನೋಡಿ ಕೊಳ್ಳಿರಿ. ಯಾಕಂದರೆ ಸಮಸ್ತ ಭೂಮಿಯ ಮೇಲೆ ವಾಸವಾಗಿರುವವರೆಲ್ಲರ ಮೇಲೆ ಉರಲಿನ ಹಾಗೆ ಬರುವದು. (ಲೂಕ್. ೨೧, ೩೪. ೩೫.)

೨. ತನ್ನ ಪ್ರಾಣದ ಶ್ರೇಷ್ಠತ್ವದ ವಿಷಯ ವಾಟ್ಟಿಗೆ.

೪೭. ತನ್ನ ಪ್ರಾಣ ನಷ್ಟ ಪಟ್ಟು, ಲೋಕವನ್ನೆಲ್ಲಾ ಲಾಭ ಮಾಡಿ ಕೊಂಡರೂ, ಮನುಷ್ಯನಿಗೆ ಪ್ರಯೋಜನವೇನು? ಇಲ್ಲವೇ ತನ್ನ ಪ್ರಾಣಕ್ಕೆ ಬದಲಾಗಿ ಮನುಷ್ಯನು ಕೊಡ ತಕ್ಕದ್ದೇನು? (ಮತ್ಥ್. ೧೬, ೨೬.)

ಇದನ್ನು ಅಲಕ್ಷ್ಯಮಾಡಿದರೆ ಅಪಮಾನ ಬರುವದು.

೪೮. ನನ್ನನ್ನು ಮಹಿಮೆ ಪಡಿಸುವವನನ್ನು ನಾನು ಮಹಿಮೆ ಪಡಿಸುವೆನು. ಆದರೆ ನಂನಂನು ಉದಾಸೀನ ಮಾಡುವವನು ಅಪಮಾನವಾಗುವನು. (೧ ಸಾಮು. ೨, ೩೦.)

ವಿಶೇಷವಾಗಿ ಹೃದಯವು ದ್ರವ್ಯಾಶೆಗೆ ಬಿಡುಗಡೆಯಾಗಿರ ಬೇಕು.

೪೯. ನಡತೆಯು ದ್ರವ್ಯಾಶೆ ಇಲ್ಲದ್ದಾಗಿರಲಿ ನಿಮಗೆ ಉಂಟಾದವುಗಳು ಸಾಕೆಂದಿರಿ; ಯಾಕಂದರೆ ನಾನು ನಿಂನಂನು ಬಿಟ್ಟು ಬಿಡೆನೆಂದೂ, ನಿಂನಂನು ಕೈ ಬಿಡೆನೆಂದೂ, ಆತನು ಹೇಳಿದ್ಧಾನೆ. (ಇಬ್ರಿ. ೧೩, ೫.)

ಮೂರನೇದು. ನೆರೆಯವನ ಕಡೆಗೆ ಇರುವ ಪಾಂಗುಗಳಿಗೆ ಜಾಗ್ರತೆಯಾಗಿರ ತಕ್ಕದು. ಅವು ಯಾವವಂದರೆ ವಾಟ್ಟಿಗೆ ಪ್ರೀತಿಯೂ ಅದರಲ್ಲಿ ಸಾಧಾರಣ ಪ್ರೀತಿ.

೫೦. ನಿನ್ನನೆರೆಯವನನ್ನು ನಿನ್ನಂತೆ ಪ್ರೀತಿ ಮಾಡು. ಯಾಕಂದರೆ ನಾನೇ ಕರ್ತನು. (ಲೇವಿಕ್. ೧೯, ೧೮.)

೫೧. ಮನುಷ್ಯರು ನಿಮಗೆ ಮಾಡ ಬೇಕೆಂದು ನೀವು ಇಚ್ಛೈಸುವವುಗಳ್ಯಾವವೋ ಅವೆಲ್ಲವುಗಳನ್ನು ಹಾಗೆಯೇ ನೀವು ಸಹ ಅವರಿಗೆ ಮಾಡಿರಿ. ಯಾಕಂದರೆ ಇದು ನ್ಯಾಯಪ್ರಮಾಣವೂ, ಪ್ರವಾದಿಗಳೂ, (ಮತ್ಥ. ೭. ೧೨.)

ಸಹೋದರ ಸ್ನೇಹ.

೫೨. ಒಬ್ಬರನ್ನೊಬ್ಬರು ಪ್ರೀತಿ ಮಾಡ ಬೇಕೆಂಬ ಹೊಸ ಆಜ್ಞೆ ನಿಮಗೆ ಕೊಡುತ್ತೇನೆ; ನಾನು ನಿಮ್ಮನ್ನು ಪ್ರೀತಿ ಮಾಡಿದ ಹಾಗೆ, ನೀವು ಒಬ್ಬರನ್ನೊಬ್ಬರು ಪ್ರೀತಿ ಮಾಡ ಬೇಕು. (ಯೋ. ೧೩, ೩೪.)

೫೩. ದೇವರನ್ನು ಪ್ರೀತಿ ಮಾಡುವವನು ತನ್ನ ಸಹೋದರನನ್ನು ಪ್ರೀತಿ ಮಾಡ ಬೇಕೆಂಬ ಈ ಕಟ್ಟಳೆಯನ್ನು ಆತನಿಂದ ಹೊಂದಿದ್ದೇವೆ. (೧ಯೋ. ೪, ೨೧.)

ವಿಶೇಷವಾಗಿ ಮುಂದಿನ ಗುಣಗಳು.

ಸತ್ಯತ್ವ.

೫೪. ನಿಮ್ಮ ಮಾತು—ಹೌದು ಹೌದು ಅಲ್ಲ ಅಲ್ಲ, ಅಂತಿರಲಿ. ಇವುಗಳಿಗೆ ಹೆಚ್ಚಾದದ್ದು ಕೆಟ್ಟತನದಿಂದ ಉಂಟಾಗುವದು. (ಮತ್ಥ. ೫, ೩೭.)

೫೫. ಸತ್ಯದ ತುಟಿಯು ಯೆಂದೆಂದಿಗೂ ಸ್ಥಿರವಾಗಿರುವದು; ಆದರೆ ಸುಳ್ಳಾಡುವ ನಾಲಿಗೆಯು ಕ್ಷಣ ಮಾತ್ರವೇ. (ಸಾಮತಿ. ೧೨, ೧೯.)

೫೬. ನನ್ನ ದೇವರೇ ನೀನು ಹೃದಯವನ್ನು ಶೋಧಿಸುವವನು ಯಥಾರ್ಥತ್ವಕ್ಕೆ ಮೆಚ್ಚುತ್ತೀ ಯೆಂದು ಬಲ್ಲೆನು. (೧. ಸಂಗತಿ. ೨೯, ೧೭.)

ದೈನ್ಯ ಮನಸ್ಸು.

೫೭. ಜಗಳದಿಂದಾಗಲಿ, ಡಂಭಾಚಾರದಿಂದಾಗಲಿ, ಯೇನು ನಡಿಸದೆ, ದೀನ ಮನಸ್ಸಿನಿಂದ ಪಾಬ್ಬರಂಪಾಬ್ಬರು ತಮಗಿಂತ ಶ್ರೇಷ್ಟರೆಂದು ಯೆಣಿಸಿರಿ. (ಫಿಲಿಪ್ಪ. ೨, ೩.)

ಸಾತ್ವಿಕತ್ವ.

೫೮. ಶಾಂತರು ಭಾಗ್ಯವಂತರು. ಯಾಕಂದರೆ ಅವರು ಭೂಮಿಯನ್ನು ಬಾಧ್ಯವಾಗಿ ಪೊಂದುವರು. (ಮತ್ಥ. ೫, ೫.)

೫೯. ಕೇಡಿನಿಂದ ಜಯಿಸಲ್ಪಡದೆ, ಮೇಲಿನಿಂದ ಕೇಡನ್ನು ಜಯಿಸು. (ರೋಮ. ೧೨, ೨೧.)

ಅನ್ಯೋನ್ಯತ್ವ.

೬೦. ನಿನ್ನ ಕಾಣಿಕೆಯನ್ನು ಬಲಿಪೀಠದ ಮೇಲೆ ತರುವಾಗ, ನಿಂನ ಸಹೋದರನಿಗೆ ನಿನಗೆ ವಿರೋಧವಾಗಿ, ಯೇನಾದರೂ ಉಂಟೆಂದು ಅಲ್ಲಿ ನೆನಪು ಮಾಡಿ ಕೊಂಡರೆ, ನಿನ್ನ ಕಾಣಿಕೆಯನ್ನು ಅಲ್ಲಿ, ಬಲಿಪೀಠದ ಮುಂದೆ ಬಿಟ್ಟು, ಪೋಗಿ ಮೊದಲು ನಿನ್ನ ಸಹೋದರನ ಸಂಗಡ ಅನ್ಯೋನ್ಯವಾಗು; ಆ ಮೇಲೆ ಬಂದು, ನಿನ್ನ ಕಾಣಿಕೆಯನ್ನು ಅರ್ಪಿಸು. (ಮತ್ಥ. ೫, ೨೩. ೨೪.)

ಸಮಾಧಾನದ ಪ್ರೀತಿ.

೬೧. ಸಮಾಧಾನ ಮಾಡುವವರು ಭಾಗ್ಯವಂತರು; ಯಾಕಂದರೆ ಅವರು ದೇವರ ಮಕ್ಕಳೆಂದು ಕರೆಯಲ್ಪಡುವರು. (ಮತ್ಥ್. ೫, ೭.)

೬೨. ಸಾಧ್ಯವಾದರೆ, ನಿಮ್ಮಿಂದಾಗುವ ಮಟ್ಟಿಗೂ, ಯೆಲ್ಲಾ ಮನುಷ್ಯರ ಸಂಗಡ ಸಮಾಧಾನವಾಗಿರಿ. (ರೋಮ್. ೧೩, ೧೮.)

ದಯಾಳತ್ವ ಪರವುಪಕಾರ.

೬೩. ಕರುಣೆಯುಳ್ಳವರು ಭಾಗ್ಯವಂತರು; ಯಾಕಂದರೆ ಅವರು ಕರುಣಿಸಲ್ಪಡುವರು. (ಮತ್ಥ್. ೫, ೭.)

೬೪. ನಿಮಗೆ ನ್ಯಾಯತೀರ್ವಿಕೆಯಾಗದ ಹಾಗೆ, ನ್ಯಾಯತೀರಿಸ ಬೇಡಿರಿ. ಯಾಕಂದರೆ ನೀವು ನ್ಯಾಯತೀರಿಸುವ ಪ್ರಕಾರವೇ ನಿಮಗೆ ನ್ಯಾಯತೀರ್ವಿಕೆ ಆಗುವದು ಮತ್ತು ನೀವು ಅಳೆಯುವ ಅಳತೆಯಿಂದ ನಿಮಗೆ ಬದಲು ಅಳೆಯಲ್ಪಡುವದು. (ಮತ್ಥ್. ೭, ೧. ೨.)

೬೫. ಬಲಿಯನಲ್ಲಾ, ಕರುಣೆಯನ್ನು ಇಚ್ಛೈಸುತ್ತೇನೆ. (ಮತ್ಥ್. ೯, ೧೩.)

೬೬. ಹಸಿಕೊಳ್ಳುವವರಿಗೆ ನಿನ್ನ ರೊಟ್ಟಿಯನ್ನು ನೀಡು; ದರಿದ್ರರನ್ನೂ ದಿಕ್ಕಿಲ್ಲದವರನ್ನೂ ಮನೆಗೆ ಕರಕೊಂಡು ಬಾ; ಬತ್ತಲೆಯವನನ್ನು ಕಂಡರೆ, ಅವನಿಗೆ ಅರಿವೆ

ಪೊಾದ್ದಿಸು; ನಿನ್ನ ಮೂಂಸದವನ ಮುಂದೆ ಅಡಗಿ ಕಾಳ್ಳ ಬ್ಯೆಡ. (ಎಶ್. ೫೮, ೭.)

೬೭. ವಾಬ್ಬಾಬ್ಬನು ಕೃಪೆಯ ವರವನ್ನು ಪೊಾಂದಿದ ಪ್ರಕಾರವ್ಯೆ ದ್ಯೆವರ ನಾನಾ ವಿಧವಾದ ಕೃಪೆಯ ವಾಳ್ಳ್ಯೆ ಉಗ್ರಾಣಿಕರಾಗಿ ವಾಬ್ಬರಿಗಾಬ್ಬರು ಸ್ಯೆವೆ ಮಾಡಿರಿ. (೧ ಪ್ಯೆತ್ರ. ೪, ೧೦.)

ನೆರೆಯವನ ಅತ್ಮಕ್ಷ್ಯಾಸ್ಕರವಾದ ಚಿಂತೆ.

೬೮. ಸಪೊಾದರರ್ಯೆ ನಿಂಮಲ್ಲಿ ವಾಬ್ಬನು ಸತ್ಯ ಬಿಟ್ಟು ತಪ್ಪಿ ಪೊಾಗಲಾಗಿ, ಮತ್ತಾಬ್ಬನು ಅವನನ್ನು ತಿರುಗಿಸಿದರೆ, ಪಾಪಿಷ್ಟನನ್ನು ಅವನ ತಪ್ಪಾದ ಮಾರ್ಗದಿಂದ ತಿರುಗಿಸಿದವನು ಅವನ ಪ್ರಾಣವನ್ನು ಮರಣದಿಂದ ರಕ್ಷಿಸಿ ಪಾಪಗಳ ಸಮೂಪಾವನ್ನು ಅಡಗಿಸುವನೆಂದು ತಿಳಿದಿರಲಿ. (ಯಾಕ್ಯಾಬ್. ೫, ೧೯. ೨೦.)

೬೯. ನಂಮಲ್ಲಿ ವಾಬ್ಬಾಬ್ಬನು ಮ್ಯೆಲಿಗಾಗಿ ಕಟ್ಟುವಿಕೆಗ್ಯಾಸ್ಕರ, ತನ್ನ ನೆರೆಯವನನ್ನು ಮೆಚ್ಚಿಸಲಿ. (ರ್ಯಾಮ್. ೧೫, ೨.)

೭೦. ನಿನ್ನ ಆಪೊಾರದಿಂದ ನಿನ್ನ ಸಪೊಾದರನಂನು ಕೆಡಿಸ ಬ್ಯೆಡ; ಅವನಿಗ್ಯಾಸ್ಕರ ಕ್ರಿಸ್ತನು ಸತ್ತನಲ್ಲಾ? (ರ್ಯಾಮ್. ೧೪, ೧೫.)

ಈ ಪ್ರಕಾರ ಚಕ್ರಿಯಿಂದ ನಡಿಯುವದು ಅಗತ್ಯವಾದದ್ದೇನಂದರೆ:
ಸಹವಾಸದಲ್ಲಿ ಜಾಗ್ರತೆ.

೭೧. ಕೆಟ್ಟವರ ಸಂಗಡ ಇರುವದಕ್ಕೆ ಅಪೇಕ್ಷಿಸ ಬೇಡ. ಯಾಕಂದರೆ, ಅವರ ಹೃದಯವು ಸೂರೆಯಂನು ಧ್ಯಾನಿಸುತ್ತದೆ; ಅವರ ತುಟಿಗಳು ಕಷ್ಟವನ್ನು ಮಾತಾಡುತ್ತವೆ. (ಜ್ಞಾನೋ. ೨೪, ೧. ೨.)

೭೨. ಅವಿಶ್ವಾಸಿಗಳ ಕೂಡ ಇಜ್ಜ್ಯಾಡು ನೊಗದಲ್ಲಿರ ಬೇಡಿರಿ; ಯಾಕಂದರೆ ನೀತಿಗೂ ಅನೀತಿಗೂ ಗಾಡಿವೆ ಯೇನು? ಬೆಳಕಿಗೆ ಕತ್ತಲೆಯ ಸಂಗಡ ಅನ್ಯೋನ್ಯವೇನು? ಕ್ರಿಸ್ತನಿಗೂ ಬೆಲಿಯಾಳನಿಗೂ ಪಾಲ್ಪಿಗೆ ಯೇನು? ವಿಶ್ವಾಸಿಸುವವನಿಗೆ ಅವಿಶ್ವಾಸಿಯ ಸಂಗಡ ಪಾಲು ಯೇನು? (೨ ಕೊರ್. ೬, ೧೪. ೧೫.)

ಯೆಚ್ಚರಿಕೆ ಪ್ರಾರ್ಥನೆ.

೭೩. ಶೋಧನೆಯಲ್ಲಿ ಸೇರದ ಹಾಗೆ ಯೆಚ್ಚರವಾಗಿದ್ದು, ಪ್ರಾರ್ಥಿಸಿರಿ. ಆತ್ಮವು ಸಿದ್ಧವಾಗಿದೆ, ಆದರೆ ಮಾಂಸವು ಬಲಹೀನವಾಗಿದೆ. (ಮತ್ತ್. ೨೬, ೪೧.)

೭೪. ಪ್ರಿಯರೇ, ನೀವು ನಿಮ್ಮ ಅತಿ ಪರಿಶುದ್ಧವಾದ ವಿಶ್ವಾಸದ ಮೇಲೆ ನಿಮ್ಮನ್ನು ಕಟ್ಟಿ ಕೊಂಡು, ಪರಿಶುದ್ಧಾತ್ಮದಲ್ಲಿ ಪ್ರಾರ್ಥಿಸಿರಿ. (ಯೂದ. ೨೦.)

ದೇವರ ವಾಕ್ಯದ ಬಳಕೆ.

೭೫. ನಿನ್ನ ವಾಕ್ಯವು ನನ್ನ ಪಾದಕ್ಕೆ ದೀಪವೂ, ನನ್ನ ದಾರಿಗೆ ಬೆಳಕೂ, ಆಗಿದೆ. (ಕೀರ್ತ. ೧೧೯, ೧೦೫.)

೭೬. ಕರ್ತನ ನ್ಯಾಯಪ್ರಮಾಣದಲ್ಲಿ ಸಂತೋಷಿಸಿ, ಆತನ ನ್ಯಾಯಪ್ರಮಾಣವನ್ನೇ ರಾತ್ರಿ ಹಗಲು ಧ್ಯಾನಿಸುವ ಮನುಷ್ಯನೇ ಭಾಗ್ಯವಂತನು. ತನ್ನ ಕಾಲದಲ್ಲಿ ತನ್ನ ಫಲ ಕೊಡುವಂಥಾ, ಯೆಲೆ ಬಾಡದಂಥ, ನೀರಿನ ಕಾಲುವೆಗಳ ಬಳಿಯಲ್ಲಿ ನೆಟ್ಟ ಮರದ ಹಾಗಿರುವನು; ಅವನು ಮಾಡುವದೆಲ್ಲಾ ಸಫಲವಾಗುವದು. (ಕೀರ್ತ. ೧, ೨. ೩.)

ಯೆರಡನೇ ಕ್ರಮದ ವುಪಭಾಗ.

ಉಳಿದ ಪ್ರಾಣಿಗಳ ಕಡೆಗೆ ನಮಗಿರುವ ಹಂಗಿನ ವಿಷಯ.

ದೇವರು ಪಶು ಮೃಗಾದಿಗಳಿಗೆ ಸಹಾ ಸಂರಕ್ಷಣೆ ಮಾಡುತ್ತಾನೆ.

೭೭. ಕರ್ತನು ಸರ್ವಕ್ಕೆ ವೊಳ್ಳೆಯವನು, ಆತನ ಅಂತಃಕರಣವು ಆತನ ಯೆಲ್ಲಾ ಕೆಲಸಗಳ ಮೇಲೆ ಅದೆ. (ಕೀರ್ತ. ೧೪೫, ೯.)

೭೮. ಮನುಷ್ಯರನ್ನೂ ಮೃಗಗಳನ್ನೂ ಸಂರಕ್ಷಿಸುತ್ತೀ ಕರ್ತನೇ. (ಕೀರ್ತ. ೩೬, ೬.)

೭೯. ಐದು ಗುಬ್ಬಿಗಳನ್ನು ಯೆರಡು ಕಾಸಿಗೆ ಮಾರುವದಿಲ್ಲವೋ? ಆದಾಗ್ಯೂ ಅವುಗಳಲ್ಲಿ ವೊಂದಾದ

ರೂ ದೇವರ ಸಂನಿಧಿಯಲ್ಲಿ ಮರತು ಹೋದದಲ್ಲ. (ಲೂಕ್. ೧೨, ೬.)

ಮೃಗಾದಿಗಳಿಗೆ ಸುದಾ ಸುಖ ದುಖ್ಖದ ಅರುವು ಉಂಟು.

೮೦. ಅಲ್ಲಿ ಸಮುದ್ರವದೆ, ದೊಡ್ಡದು, ಇಕ್ಕಡೆಗೆ ಅಗಲವಾದದ್ದು; ಅದರಲ್ಲಿ ಲೆಖ್ಖವಿಲ್ಲದ ಜೀವ ಜಂತುಗಳೂ, ಸಂಣ ದೊಡ್ಡ ಪ್ರಾಣಿಗಳೂ ಅವೆ. ಅದರಲ್ಲಿ ಹಡಗಗಳು ಹೋಗುತ್ತವೆ. ಅದರಲ್ಲಿ ಆಡುವದಕ್ಕೆ ನೀನು ರೂಪಿಸಿದ ಲೇವಿಯಾತಾನವು ಅದೆ. (ಕೀರ್ತ್. ೧೦೪, ೨೫. ೨೬.)

೮೧. ಸರ್ವ ಸೃಷ್ಟಿಯು ಈಗಿನ ಮಟ್ಟಿಗೂ ಕೂಡ ನರಳಿ ಪ್ರಸವವೇದನೆ ಪಡುತ್ತದೆ. (ರೋಮ್. ೮. ೨೨.)

ಜೀವರಾಶಿಗಳಿಗೆ ಈಗಿನ ಗತಿಗಿಂತ ಚಲೋದು ಮುಂದೆ ಬರುವದು.

೮೨. ಸೃಷ್ಟಿಯೂ ತಾನೇ ಕ್ಷಯದ ದಾಸತ್ವದೊಳಗಿಂದ ದೇವರ ಮಕ್ಕಳ ಮಹಿಮೆಯಾದ ಬಿಡುಗಡೆಗೋಸ್ಕರ ಬಿಡುಗಡೆ ಮಾಡಲ್ಪಡುವದು. (ರೋಮ್. ೮, ೨೧.)

ಅದುಕಾರಣ ನಾವು ಅವುಗಳನು ಪೀಡಿಸ ಬಾರದು.

೮೩. ನೀತಿವಂತನು ತನ್ನ ಪಶುವಿನ ಪ್ರಾಣವನ್ನು ಪರಾಮರಿಸುತ್ತಾನೆ; ಆದರೆ ದುಷ್ಟರ ಅತಃಕರಣಗಳು ಕ್ರೂರವಾಗಿವೆ. (ಸಾಮತಿ. ೧೨, ೧೦.)

೮೪. ನೀನು ನಿನ್ನ ಶತ್ರುವಿನ ಕತ್ತೆ ತನ್ನ ಹೊರೆಯ ಕೆಳಗೆ ಬಿದ್ದಿರುವದನ್ನು ಕಂಡರೆ, ಅದನ್ನು ಬಿಡ ಬಾರದು, ಅವನ ಸಂಗಡ ಬಿಡಬೇಕು. (ಹೊರಡೋಣ. ೨೩, ೫.)

೮೫. ನಿನ್ನ ಮುಂದೆ ದಾರಿಯಲ್ಲಿ ಪಕ್ಷಿ ಗೂಡು ಸಿಕ್ಕಿದರೆ, ಮರಿಗಳ ಸಂಗಡ ತಾಯಿಯಂನು ತೆಗೆಯ ಬೇಡ. (ದ್ವಿತೀಯನ್ಯಾಯ. ೨೨, ೬.)

ಮೂರನೆ ಕ್ರಮ.

ತಾಳ್ಮೆಯಿಂದ ಶ್ರಮೆ ಪಡುವದನ್ನು ಕಲಿಸುವಂಥ ವಚನಗಳು.

ಯೆಲ್ಲಾವೂ ಕೇಡೂ ಸುದಾ ದೇವರಿಂದ ಬರುತ್ತದೆ.

೧. ಕರ್ತನು ಮಾಡದ ಕೇಡು ಊರಲ್ಲಿ ಉಂಟೀತೋ? (ಆಮೋಸ್. ೩, ೬.)

ದುಷ್ಕಾಲದಲ್ಲಿ ದೇವರ ಕೃಪೆಯುಳ್ಳ ಆಲೋಚನೆಗಳ ಜ್ಞಾನವೂ ಆತನಲ್ಲಿ ಇಡುವ ಭರವಸವೂ ಆತನ ಚಿತ್ತಕ್ಕೆ ಒಪ್ಪುವ ತಾಳ್ಮೆಯೂ ಅಗತ್ಯವಾದದ್ದು.

೨. ದೇವರನ್ನು ಪ್ರೀತಿಮಾಡುವವರಿಗೆ ಮೇಲಿಗಾಗಿ ಯೆಲ್ಲಾವುಗಳು ಕೈಕೂಡಿ ಬರುತ್ತವೆಂದು ಬಲ್ಲೆವು. (ರೋಮ್. ೮, ೨೮.)

೩. ಬೆಳ್ಳಿಗೆ ಮೂಸೆ, ಚಿಂನಕ್ಕೆ ಕೋವೆ; ಆದರೆ ಹೃದಯ

ಗಳನ್ನು ಶೋಧಿಸುವವನು ಕರ್ತನೇ. (ಸಾಮತಿ. ೧೭, ೩.)

೪. ನನ್ನ ಮಗನೇ, ಕರ್ತನ ಶಿಕ್ಷೆಯನ್ನು ಅಲ್ಪವಾಗಿ ಯೆಣಿಸದೆ, ಆತನಿಂದ ಗದರಿಸಲ್ಪಡುವಾಗ ಆಯಾಸ ಪಡದೆ ಇರು. ಯಾಕಂದರೆ ಕರ್ತನು ಪ್ರೀತಿ ಮಾಡುವವನನ್ನು ಶಿಕ್ಷಿಸುತ್ತಾನೆ. ಮತ್ತು ತಾನು ಶೇರಿಸಿ ಕೊಳ್ಳುವ ಒಬ್ಬೊಬ್ಬ ಮಗನನ್ನು ಹೊಡೆಯುತ್ತಾನೆ. ಆದರೆ ಯೆಲ್ಲಾ ಶಿಕ್ಷೆಯು ತತ್ಕಾಲಕ್ಕೆ ಸಂತೋಷಕರವಾದದ್ದಲ್ಲಾ, ದುಃಖಕರವಾದದ್ದೆಂದು ತೋಚುತ್ತದೆ. ಆದರೆ ತರುವಾಯ ಅದರಿಂದ ಸಾಧಿಸಲ್ಪಟ್ಟಿರುವವರಿಗೆ ಸಮಾಧಾನ ಉಳ್ಳ ನೀತಿಫಲವನ್ನು ಕೊಡುವದು. (ಇಬ್ರಿ. ೧೨, ೫. ೬. ೧೧.)

೫. ನನ್ನ ಸಹೋದರರೇ, ನಿಮ್ಮ ವಿಶ್ವಾಸದ ಪರೀಕ್ಷೆಯು ತಾಳ್ಮೆಯನ್ನು ಉಂಟು ಮಾಡುತ್ತದೆಂದು ತಿಳಿದು, ನಾನಾ ಶೋಧನೆಗಳಲ್ಲಿ ಬಿದ್ದರೆ, ಪೂರ್ಣ ಸಂತೋಷವೆಂದೆಣಿಸಿರಿ. ಆದರೆ ನೀವು ಸಿದ್ಧವಾದವರೂ ಸಂಪೂರ್ಣರೂ ಯಾವದರಲ್ಲಿಯೂ ಕಡಿಮೆ ಇಲ್ಲದವರೂ ಆಗಿರುವ ಹಾಗೆ, ತಾಳ್ಮೆಗೆ ಸಂಪೂರ್ಣ ಕೆಲಸವಿರಲಿ. (ಯಾಕೋಬ್. ೧, ೨—೪.)

೬. ದೇವರ ಚಿತ್ತವನ್ನು ಮಾಡಿ ವಾಗ್ದತ್ತವನ್ನು ಸಂಪಾದಿಸುವ ಹಾಗೆ ತಾಳ್ಮೆಯು ನಿಮಗೆ ಬೇಕಾಗಿದೆ. (ಇಬ್ರಿ. ೧೦, ೩೬.)

೭. ವಿಶ್ವಾಸದ ನಾಯಕನೂ ಪೂರೈಸುವವನೂ ಆದಂಥ ಯೇಸುವಿನ ಮೇಲೆ ಕಣ್ಣಿಟ್ಟು, ನಮ್ಮ ಮುಂದೆ ಇಟ್ಟಿರುವ ಓಟವನ್ನು ತಾಳ್ಮೆಯಿಂದ ಓಡೋಣ. (ಇಬ್ರಿ. ೧೨, ೧.)

೮. ಉಪದ್ರವು ತಾಳ್ಮೆಯನ್ನೂ, ತಾಳ್ಮೆಯು ಪರೀಕ್ಷೆಯನ್ನೂ, ಪರೀಕ್ಷೆಯು ನಿರೀಕ್ಷೆಯನ್ನೂ ಉಂಟು ಮಾಡುತ್ತದೆ. ನಿರೀಕ್ಷೆಯಾದರೆ ನಾಚಿಸುವದಿಲ್ಲ. (ರೋಮ್. ೫, ೪.)

೯. ಕರ್ತನ ಸಹಾಯಕ್ಕೆ ಯೆದುರು ನೋಡಿ, ಸುಮ್ಮನೆ ಇರುವದು ಒಳ್ಳೇದು. ಮನುಷ್ಯನು ತನ್ನ ಚಿಕ್ಕತನದಲ್ಲಿ ತನ್ನ ನೊಗವನ್ನು ತಾಳುವದು ಒಳ್ಳೇದು. (ಪ್ರಲ್. ೩, ೨೬. ೨೭.)

ದುಷ್ಕಾಲಗಳಲ್ಲಿ ಒಾಟಿಗೆ.

೧೦. ದಿನಗಳು ಕೆಟ್ಟವುಗಳಾಗಿರುವದರಿಂದ, ಕಾಲವನ್ನು ಕಾಂಡು ಕಾಂಡು ಜಾಗ್ರತೆಯಿಂದ ನಡೆದು ಕೊಳ್ಳುವ ಹಾಗೆ ನೋಡಿ ಕೊಳ್ಳಿರಿ. (ಎಫ್. ೫, ೧೬.)

೧೧. ನಿರೀಕ್ಷೆಯಲ್ಲಿ ಸಂತೋಷ ಪಟ್ಟು, ಉಪದ್ರದಲ್ಲಿ ತಾಳಿ ಕಾಂಡು, ಪ್ರಾರ್ಥನೆಯಲ್ಲಿ ನೆಲೆಗೊಳ್ಳಿರಿ. (ರೋಮ್. ೧೨, ೧೨.)

ದೊಡ್ಡ ಭಾರವಾದ ಶ್ರಮೆಗಳಲ್ಲಿ.

೧೨. ಕರ್ತನೇ ನನ್ನನ್ನು ನಾಶನ ಮಾಡದ ಹಾಗೆ

ನಿನ್ನ ಕೋಪದಿಂದಲ್ಲ ನ್ಯಾಯದಿಂದ ನನ್ನನ್ನು ಶಿಕ್ಷಿಸು. (ಎರೆಮಿ. ೧೦, ೨೪.)

೧೩. ದೇವರಿಗೆ ದಿನ ದಿನಕ್ಕೆ ಆಶೀರ್ವಾದವಾಗಲಿ; ನಂಮ ಮೇಲೆ ಭಾರ ಹೋರುತ್ತಾನೆ; ದೇವರು ನಮ್ಮ ರಕ್ಷಣೆಯಾಗಿದ್ದಾನೆ. ಸೇಲಾ. ದೇವರು ನಮಗೆ ರಕ್ಷಣೆಗಳ ದೇವರಾಗಿದ್ದಾನೆ. ನಮ್ಮ ಕರ್ತನಾದ ಯೆಹೋವನಿಗೆ ಮರಣದಿಂದ ಹೊರಡೋಣಗಳು ಉಂಟು. (ಕೀರ್ತ. ೬೮, ೧೯. ೨೦.)

೧೪. ದೇವರು ನಂಬಿಕೆಯುಳ್ಳವನು; ಆತನು ನಿಂಮ ಬಲಕ್ಕಿಂತ ಹೆಚ್ಚಾಗಿ ನಿಮ್ಮನ್ನು ಶೋಧಿಸಲ್ಪಡಗೊಡಿಸುವದಿಲ್ಲ; ಆದರೆ ನೀವು ಸಹಿಸ ಕೂಡುವ ಹಾಗೆ, ಶೋಧನೆಯ ಸಂಗಡ ತಪ್ಪಿಸಿ ಕೊಳ್ಳುವ ಮಾರ್ಗವನ್ನು ಮಾಡುವನು. (೧ ಕೊರಿ. ೧೦, ೧೩. ೧೪.)

ನಾನಾ ತರದ ಶ್ರಮೆಗಳಲ್ಲಿ.

೧೫. ಕ್ರಿಸ್ತನ ಶ್ರಮೆಗಳು ಹ್ಯಾಗೆ ನಂಮಲ್ಲಿ ಹೆಚ್ಚುತ್ತವೋ, ಹಾಗೆಯೇ ನಮ್ಮ ಆದರಣೆಯು ಕ್ರಿಸ್ತನ ಮುಖಾಂತರ ಹೆಚ್ಚುತ್ತದೆ. (೨ ಕೊರಿ. ೧, ೫.)

ಬಹು ದಿವಸದ ಶ್ರಮೆಗಳಲ್ಲಿ.

೧೬. ಕರ್ತನು ಯೆಂದೆಂದಿಗೂ ಅಸಂಹಿಸಿ ಬಿಡುವದಿಲ್ಲ ಆತನು ದುಃಖ ಪಡಿಸಿದರೂ ತನ್ನ ಕೃಪೆಯ

ಬಹುಳ್ಯದ ಪ್ರಕಾರ ಕರುಣಿಸುತ್ತಾನೆ. ಯಾಕಂದರೆ ಆತನು ತನ್ನ ಹೃದಯದಿಂದ ಮನುಷ್ಯಮಕ್ಕಳನ್ನು ಕಷ್ಟ ಪಡಿಸಿ ದುಃಖ ಪಡಿಸುವವನಲ್ಲಾ. (ಪ್ರಲ್. ೩, ೩೧—೩೩.)

೧೭. ಕರ್ತನ ಮೇಲೆ ನಿನ್ನ ಭಾರವನ್ನು ಹಾಕು; ಆತನು ನಿನಗೆ ಆಸ್ಪದವಾಗಿರುವನು; ಯುಗ ಯುಗಕ್ಕೂ ನೀತಿವಂತನನು ಕದಲಿಸನು. (ಕೀರ್ತ್. ೫೫, ೨೨.)

೧೮. ಕ್ಷಣ ಮಾತ್ರದ ಹಗುರವಾದ ನಮ್ಮ ಉಪದ್ರವು ಹೆಚ್ಚಿಗಿಂತ ಹೆಚ್ಚಾದ ನಿತ್ಯಮಹಿಮೆಯ ಭಾರವನ್ನು ನಮಗೆ ಉಂಟು ಮಾಡುತ್ತದೆ; ಕಾಣುವವುಗಳನ್ನಲ್ಲಾ, ಕಾಣದವುಗಳನ್ನೇ ದೃಷ್ಟಿಸುತ್ತೇವಲ್ಲಾ? ಯಾಕಂದರೆ ಕಾಣುವವುಗಳು ತಾತ್ಕಾಲಿಕವು, ಕಾಣದವುಗಳು ನಿತ್ಯವು. (೨ ಕೊರ್. ೪, ೧೭. ೧೮.)

ವಿಶೇಷವಾಗಿ ದುಃಖ ಶೋಕಗಳಲ್ಲಿ.

೧೯. ನನ್ನ ಪ್ರಾಣವೇ! ಯಾಕೆ ಕುಗ್ಗುತ್ತಿ? ಯಾಕೆ ನಂನಲ್ಲಿ ಕುದಿಯುತ್ತಿ? ದೇವರನ್ನು ಯೆದುರು ನೋಡು; ಯಾಕಂದರೆ ನನ್ನ ಮುಖದ ರಕ್ಷಣೆಯೂ ನನ್ನ ದೇವರೂ ಆಗಿರುವವನನ್ನು ಇನ್ನು ಕೊಂಡಾಡುವೆನು. (ಕೀರ್ತ್. ೪೨, ೧೧.)

ಪಾಪದ ವಿಷಯವಾದ ಚಿಂತೆಗಳಲ್ಲಿ.

೨೦. ಕರ್ತನು ನಮ್ಮ ಪಾಪಗಳ ಪ್ರಕಾರ ನಮಗೆ ಮಾಡದೆ, ನಮ್ಮ ಅಕ್ರಮಗಳ ಪ್ರಕಾರ ನಮಗೆ ಮುಯ್ಯಿಗೆ ಮುಯ್ಯಿ ಕೊಡುವದಿಲ್ಲಾ. ಯಾಕಂದರೆ ಭೂಮಿಯ ಮೇಲೆ ಆಕಾಶವು ಯೆಷ್ಟು ಯೆತ್ತರವೋ ಆತನ ಕೃಪೆಯು ಆತನಿಗೆ ಭಯ ಪಡುವವರ ಮೇಲೆ ಅಷ್ಟು ಪ್ರಬಲವಾಗಿದೆ. (ಕೀರ್ತ. ೧೦೩, ೧೦. ೧೧.)

೨೧. ನನ್ನ ಯೆಳೆ ಮಕ್ಕಳೇ ನೀವು ಪಾಪ ಮಾಡದ ಹಾಗೆ, ಇವುಗಳನ್ನು ನಿಮಗೆ ಬರೆಯುತ್ತೇನೆ; ಮತ್ತು ಯಾರಾದರೂ ಪಾಪ ಮಾಡಿದರೆ, ತಂದೆಯ ಹತ್ತರ ನಮಗೆ ನೀತಿವಂತನಾದ ಯೇಸು ಕ್ರಿಸ್ತನೆಂಬ ಕಾರ್ಯಕರ್ತನು ಇದ್ದಾನೆ. ಈತನು ನಮ್ಮ ಪಾಪಗಳಿಗೋಸ್ಕರ ಶಾಂತಕರವಾದ ಬಲಿಯಾಗಿದ್ದಾನೆ; ನಮ್ಮವುಗಳಿಗೋಸ್ಕರ ಮಾತ್ರವಲ್ಲಾ, ಸಮಸ್ತ ಲೋಕದವುಗಳಿಗೋಸ್ಕರ ಸಹಾ. (೧ ಯೋ. ೨, ೧. ೨.)

ಪಾಪಗಳ ಸಂಬಳವಾದ ಶಿಕ್ಷೆಗಳಲ್ಲಿ.

೨೨. ಕರ್ತನು ಹೇಳುವದೇನಂದರೆ ನನ್ನ ಜೀವದ ಆಣೆ, ದುಷ್ಟನ ಮರಣದಲ್ಲಿ ಅಲ್ಲಾ, ಅವನು ತಂನ ಮಾರ್ಗ ಬಿಟ್ಟು ತಿರುಗಿ ಕೊಂಡು ಬದುಕುವದರಲ್ಲಿ ನಾನು ಸಂತೋಷ ಪಡುತ್ತೇನೆ. (ಎಸೆಕಿಯೇಲ್. ೩೩, ೧೧.)

ಮನೋಸಾಕ್ಷಿಯ ಜಯದಲ್ಲಿ.

೨೩. ನಿಮ್ಮ ಪಾಪಗಳು ರಕ್ತಾಂಬರದ ಹಾಗೆ ಇದ್ದರೂ ಹಿಮದ ಹಾಗೆ ಬಿಳುಪು ಆಗುವವು; ಅವುಗಳು ಕಿರಿಮಂಜಿಯ ಹುಳದ ಹಾಗೆ ಕೆಂಪಾಗಿದ್ದರೂ ಉಣ್ಣೆಯ ಹಾಗೆ ಆಗುವವು. (ಎಶ್. ೧, ೧೮.)

೨೪. ನಿನ್ನ ಅಪರಾಧಗಳನ್ನು ಮೋಡದಂತೆ, ನಿಂನ ಪಾಪಗಳನ್ನು ಮಂಜಿನಂತೆ ಪರಿಹರಿಸುವೆನು. ನನ್ನ ಬಳಿಗೆ ತಿರುಗಿಕೊ. ಯಾಕಂದರೆ ನಿಂನಂನು ಬಿಡುಗಡೆ ಮಾಡುವೆನು. (ಎಶ್. ೪೪, ೨೨.)

ಬೇರೆ ಮನುಷ್ಯರೂ ಸೈತಾನನೂ ಹಾಕುವ ದೂರುಗಳಲ್ಲಿ.

೨೫. ದೇವರು ನಂಮ ಕಡೆಯವನಾದರೆ, ನಮಗೆದುರು ಯಾರು? ಸ್ವಂತ ಮಗನನ್ನು ಕನಿಕರಿಸದೆ, ಆತನನ್ನು ನಂಮೆಲ್ಲರಿಗೋಸ್ಕರ ಒಪ್ಪಿಸಿ ಕೊಟ್ಟವನು ಆತನ ಸಂಗಡ ನಮಗೆ ಯೆಲ್ಲಾ ದಯ ಪಾಲಿಸದೆ ಇರುವದು ಹ್ಯಾಗೆ? ದೇವರು ಆದು ಕೊಂಡವರ ಮೇಲೆ ತಪ್ಪು ಹೊರಿಸುವವನ್ಯಾರು? ನೀತಿನಿರ್ಣಯಿಸುವವನು ದೇವರೇ. ಆಜ್ಞೆನಿರ್ಣಯಿಸುವವನ್ಯಾರು? ಸತ್ತವನೂ, ಅದಲ್ಲದೆ ಯೆದ್ದವನೂ, ದೇವರ ಬಲಪಾರ್ಶ್ವದಲ್ಲಿ ಇರುವವನೂ ನಮಗೋಸ್ಕರ ನಡುವೆ ಬರುವವನೂ, ಕ್ರಿಸ್ತನೇ. (ರೋಮ್. ೮, ೩೧—೩೪.)

ಆಯುವಿಕೆಯ ವಿಷಯವಾದ ಸಂಶಯದಲ್ಲಿ.

೨೬. ದೇವರು ನಂಮನ್ನು ಕ್ರೋಪಕ್ಕೆ ಅಲ್ಲ, ನಾವು ಯೆಚ್ಚತ್ತಿದ್ದರೂ ನಿದ್ರೆ ಮಾಡಿದರೂ ಆತನ ಸಂಗಡ ಬದುಕುವ ಹಾಗೆ, ನಮಗೋಸ್ಕರ ಸತ್ತ ನಂಮ ಕರ್ತನಾದ ಯೇಸು ಕ್ರಿಸ್ತನ ಮುಖಾಂತರ ರಕ್ಷಣೆಯನ್ನು ಸಂಪಾದಿಸುವದಕ್ಕೆ ನೇಮಿಸಿದ್ಧಾನೆ. (೧ ಥೆಸ್ಸ. ೫, ೯. ೧೦.)

ವಿಶ್ವಾಸದ ಬಲಹೀನತ್ವದಲ್ಲಿ.

೨೭. ಇಗೋ ನನ್ನ ಪ್ರಾಣ ಮೆಚ್ಚಿ ಕೊಳ್ಳುವ, ನಾನು ಆದು ಕೊಂಡಿರುವವನು, ನಲಿಗಿದ ದಂಟನ್ನು ಮುರಿಯುವದಿಲ್ಲಾ; ಹೊಗೆಯುವ ಬತ್ತಿಯನ್ನು ಆರಿಸುವದಿಲ್ಲಾ. (ಎಶ್. ೪೨, ೧. ೩.)

ಪ್ರಾರ್ಥನೆ ಮಾಡಲಾರದ ಅಶಕ್ತಿಯಲ್ಲಿ.

೨೮. ಆತ್ಮವು ಸಹಾ ನಮ್ಮ ಅಶಕ್ತಿಗಳಿಗೆ ಕೂಡ ಸಹಾಯ ಮಾಡುತ್ತದೆ. ಹ್ಯಾಗಂದರೆ, ನಾವು ಯುಕ್ತವಾಗಿ ಯೇನು ಬೇಡಿ ಕೊಳ್ಳ ಬೇಕೋ ಅರಿಯೆವು. ಆದರೆ ಆತ್ಮವು ತಾನೇ ಉಚ್ಚರಿಸಲಾರದ ನರಳುವಿಕೆಗಳಿಂದ ನಮಗೋಸ್ಕರ ನಡುವೆ ಬರುತ್ತದೆ. (ರೋಮ್. ೮, ೨೬.)

ಶರೀರದ ಉಪದ್ರಗಳಲ್ಲಿ ಅಂದರೆ ಬರದಲ್ಲಿ.

೨೯. ಇಗೋ ಕರ್ತನ ಕಣ್ಣು ಆತನಿಗೆ ಭಯ ಪ

ಟ್ಟು, ಆತನ ಕೃಪೆಯನ್ನು ಯೆದುರು ನೋಡುವವರ ಮೇಲೆ ಅದೆ. ಅವರ ಪ್ರಾಣವನ್ನು ಮರಣದಿಂದ ಬಿಡಿಸಿ, ಬರದಲ್ಲಿ ಅವರ ಜೀವವನ್ನು ಉಳಿಸುವದಕ್ಕಾಗಿಯೇ. (ಕೀರ್ತ. ೩೪, ೧೮. ೧೯.)

ದೇಶದ ಮೇಲೆ ರೋಗಗಳೂ ಜಾಡ್ಯವು ಬಂದ ಕಾಲದಲ್ಲಿ.

೩೦. ಮಹೋನ್ನತನ ಮರೆಯಲ್ಲಿ ವಾಸಿಸುವವನು ಸರ್ವಶಕ್ತನ ನೆರಳಿನಲ್ಲಿ ತಂಗುವವನು — ನನ್ನ ಆಶ್ರಯವೂ, ನನ್ನ ಕೋಟೆಯೂ, ನಾನು ಭರವಸವಿಡುವ ನನ್ನ ದೇವರೂ ಯೆಂದು ಕರ್ತನಿಗೆ ಹೇಳುತ್ತಾನೆ. ಯಾಕಂದರೆ ಆತನು ನಿನ್ನನ್ನು ಬೇಡನ ಉರ್ಲಿನಿಂದಲೂ, ನಷ್ಟದ ಜಾಡ್ಯದಿಂದಲೂ ಬಿಡಿಸುವನು. ಅಂಧಕಾರದಲ್ಲಿ ನಡೆಯುವ ಜಾಡ್ಯಕ್ಕೂ, ಮಧ್ಯಾಹ್ನದಲ್ಲಿ ಹಾಳು ಮಾಡುವ ನಾಶನಕ್ಕೂ, ಭಯ ಪಡದೆ ಇರುವಿ. ನಿನ್ನ ಕಡೆಯಲ್ಲಿ ಸಾವಿರ ಜನರೂ, ನಿನ್ನ ಬಲಕಡೆಯಲ್ಲಿ ಹತ್ತು ಸಾವಿರ ಜನರೂ ಬಿದ್ದರೂ, ನಿನಗೆ ತಾಗದು, ನಿನಗೆ ಕೇಡು ಮುಟ್ಟದು; ಬಾಧೆಯು ನಿನ್ನ ಗುಡಾರಕ್ಕೆ ಸಮೀಪಿಸದು. (ಕೀರ್ತ. ೯೧, ೧—೩. ೬. ೭. ೧೦.)

ಯುದ್ಧದ ಭಯದಲ್ಲಿ.

೩೧. ಕರ್ತನು ನನ್ನ ಬೆಳಕೂ ನನ್ನ ರಕ್ಷಣೆಯೂ ಆಗಿದ್ದಾನೆ; ಯಾರಿಗೆ ಭಯ ಪಡುವೆನು? ಕರ್ತನು ನನ್ನ

ಜೀವ ಪ್ರಾಣ ಸ್ಥಾನವು; ಯಾರಿಗೆ ಹೆದರುವೆನು? ನನಗೆ ವಿರೋಧವಾಗಿ ದಂಡು ಇಳಿದರೂ ನನ್ನ ಹೃದಯವು ಭಯ ಪಡದು. ಯುದ್ಧವು ನನ್ನಮೇಲೆ ಯೆದ್ದರೂ, ಇದರಲ್ಲಿ ಸುದಾ ನಾನು ಭರವಸವಾಗಿರುವೆನು. (ಕೀರ್ತ್. ೨೭, ೧. ೩.)

೩೨. ಕರ್ತನ ದೂತನು ಆತನಿಗೆ ಭಯ ಪಡುವವರ ಸುತ್ತಲೂ ಇಳುಕೊಳ್ಳುತ್ತಾನೆ, ಅವರನ್ನು ತಪ್ಪಿಸಿ ಬಿಡುತ್ತಾನೆ. (ಕೀರ್ತ್. ೩೪, ೭.)

ಬಡತನದಲ್ಲಿ.

೩೩. ಹುಡುಗನಾಗಿದ್ದೆನು, ಮುದುಕನಾಗಿದ್ದೇನೆ, ಆದರೆ, ನೀತಿವಂತನು ಬಿಡಲ್ಪಟ್ಟದ್ದನ್ನೂ, ಅವನ ಬೀಜವು ರೊಟ್ಟಿ ಹುಡುಕುವದನ್ನೂ, ನೋಡಲಿಲ್ಲಾ. (ಕೀರ್ತ್. ೩೭, ೨೫.)

೩೪. ಯೇನು ಉಣ್ಣುವ, ಇಲ್ಲವೆ ಯೇನು ಕುಡಿಯುವ, ಇಲ್ಲವೆ ಯೇನು ಹೊದ್ದು ಕೊಳ್ಳುವ ಯೆಂದು ಚಿಂತೆ ಪಡ ಬೇಡಿರಿ. ಯಾಕಂದರೆ ಇವುಗಳಂನೆಲ್ಲಾ ಜನಾಂಗಗಳು ಹುಡುಕುತ್ತಾರೆ. ಆದರೆ ಇವುಗಳೆಲ್ಲಾ ನಿಮಗೆ ಬೇಕು ಯೆಂದು ಪರಲೋಕದವನಾದ ನಿಮ್ಮ ತಂದೆಯು ಬಲ್ಲನು. (ಮತ್ಥ್. ೬, ೩೧. ೩೨.)

೩೫. ನಾಳೆಗೋಸ್ಕರ ಚಿಂತೆ ಪಡ ಬೇಡಿರಿ. ಯಾಕಂದ

ರೆ ನಾಳೆ ದಿವಸವು ತನ್ನವುಗಳಿಗೋಸ್ಕರ ಚಿಂತೆ ಪಡು ವದು ದಿವಸಕ್ಕೆ ಅದರ ಕಾಟವೇ ಸಾಕು. (ಮತ್ಥ್. ೬, ೩೪.)

ಹಿಂಸೆಗಳಲ್ಲಿ.

೩೬. ಕ್ರಿಸ್ತ ಯೇಸುವಿನಲ್ಲಿ ಭಕ್ತಿಯಾಗಿ ಬದುಕ ಮನಸ್ಸುಳ್ಳವರೆಲ್ಲರು ಹಿಂಸೆ ಪಡುವರು. (೨ ತಿಮ್. ೩, ೧೨.)

೩೭. ಲೋಕವು ನಿಮ್ಮನ್ನು ಹಗೆ ಮಾಡಿದರೆ, ನಿಮಗೆ ಮುಂಚೆ ನನ್ನನ್ನು ಹಗೆ ಮಾಡಿತೆಂದು ತಿಳು ಕೊಳ್ಳಿರಿ. ನೀವು ಲೋಕದವರಾಗಿದ್ದರೆ, ಲೋಕವು ಸ್ವಂತವಾದದ್ದನ್ನು ಸ್ನೇಹಿಸುವದು; ಆದರೆ ನೀವು ಲೋಕದವರಲ್ಲದ ಕಾರಣದಿಂದಲೂ, ನಾನು ಲೋಕದೊಳಗಿಂದ ನಿಮ್ಮನ್ನು ಆದುಕೊಂಡ ಕಾರಣದಿಂದಲೂ, ಲೋಕವು ನಿಮ್ಮನ್ನು ಹಗೆ ಮಾಡುತ್ತದೆ. (ಯೋ. ೧೫. ೧೮. ೧೯.)

೩೮. ದಾಸನು ತನ್ನ ಯಜಮಾನನಿಗಿಂತ ದೊಡ್ಡವನಲ್ಲವೆಂದು, ನಾನು ನಿಮಗೆ ಹೇಳಿದ ಮಾತು ನೆನಸಿಕೊಳ್ಳಿರಿ, ಅವರು ನನ್ನನ್ನು ಹಿಂಸಿಸಿದ್ದರೆ ನಿಮ್ಮನ್ನು ಹಿಂಸಿಸುವರು, ನನ್ನ ಮಾತು ಕೈಕೊಂಡಿದ್ದರೆ, ನಿಮ್ಮದನ್ನು ಕೈಕೊಳ್ಳುವರು. (ಯೋ. ೧೫, ೨೦)

ಪ್ರಪಂಚದ ಬದುಕಿನ ನಷ್ಟ ಪಡುವದರಲ್ಲಿ.

೩೯. ಬತ್ತಲೆಯಾಗಿ ನಾನು ನನ್ನ ತಾಯಿಯ ಗರ್ಭದಿಂದ ಹೊರಟೆನು, ಬತ್ತಲೆಯಾಗಿ ನಾನು ತಿರಿಗಿ ಹೋಗುವೆನು. ಕರ್ತನು ಕೊಟ್ಟನು, ಕರ್ತನು ತಕ್ಕೊಂಡನು; ಕರ್ತನ ಹೆಸರು ಸ್ತುತಿಸಲ್ಪಡಲಿ. (ಇಯೋಬ್. ೧, ೨೧.)

೪೦. ನಾವು ದೇವರಿಂದ ಮೇಲನ್ನು ಹೊಂದಿದ ಮೇಲೆ ಕೇಡನ್ನು ತಕ್ಕೊಳ್ಳ ಬಾರದೋ? (ಇಯೋಬ್. ೨, ೧೦.)

ಅನ್ಯಾಯ ಪಡುವದರಲ್ಲಿ.

೪೧. ನಿನ್ನ ಮಾರ್ಗವನ್ನು ಕರ್ತನ ಮೇಲೆ ಹೊರಿಸು; ಆತನಲ್ಲಿ ಭರವಸವಿಡು; ಆಗಲಾತನು ನಡಿಸುವನು. ನಿನ್ನ ನೀತಿಯನ್ನು ಬೆಳಕಿನ ಹಾಗೆಯೂ, ನಿನ್ನ ನ್ಯಾಯಗಳನ್ನು ಮಧ್ಯಾಹ್ನದ ಹಾಗೆಯೂ ಹೊರಗೆ ಬರ ಮಾಡುವನು. (ಕೀರ್ತ. ೩೭, ೫. ೬.)

೪೨. ಯಾಕಂದರೆ ನ್ಯಾಯವು ನೀತಿಗೆ ತಿರುಗಿ ಕೊಳ್ಳುವದು; ನೆಟ್ಟಾನ ಹೃದಯದವರೆಲ್ಲರು ಅದನ್ನು ಹಿಂಬಾಲಿಸುವರು. (ಕೀರ್ತ. ೯೪, ೧೫.)

ನಿಂದೆ ದೂಷಣೆ ಪಡುವದರಲ್ಲಿ.

೪೩. ನನ್ನ ನಿಮಿತ್ತವಾಗಿ ನಿಮ್ಮನ್ನು ನಿಂದಿಸಿ ಹಿಂಸಿ

ಸಿ, ಸುಳ್ಳಾಗಿ ನಿಮಗೆ ವಿರೋಧವಾಗಿ ಯೆಲ್ಲಾ ಕೆಟ್ಟ ಮಾತುಗಳನ್ನು ಹೇಳಿದರೆ, ನೀವು ಭಾಗ್ಯವಂತರಾಗಿದ್ದೀರಿ. ಸಂತೋಷಿಸಿರಿ, ಹರ್ಷಿಸಿರಿ, ಯಾಕಂದರೆ ಪರಲೋಕಗಳಲ್ಲಿ ನಿಂಮ ಸಂಬಳ ಬಹಳ. (ಮತ್ಥ. ೫, ೧೧. ೧೨.)

ತಬಲಿ ಮಕ್ಕಳ ವಿಧವೆಗಳ ಸ್ಥಿತಿಯಲ್ಲಿ.

೪೪. ದೇವರು ತನ್ನ ಪರಿಶುದ್ಧ ಸ್ಥಾನದಲ್ಲಿ ದಿಕ್ಕಿಲ್ಲದವರಿಗೆ ತಂದೆಯೂ ವಿಧವೆಗಳಿಗೆ ನ್ಯಾಯಾಧಿಪತಿಯೂ, ಆಗಿದ್ದಾನೆ. (ಕೀರ್ತ. ೬೮, ೬.)

ಮುಪ್ಪಿನ ಕಾಲದಲ್ಲಿ.

೪೫. ನಿಮ್ಮ ಮುಪ್ಪಿನ ತನಕಾ ನಾನು ಆತನೇ, ಕೂದಲು ಬಿಳುಪಾಗುವ ಮಟ್ಟಿಗೂ ನಾನು ಹೊತ್ತು ಕೊಳ್ಳುವೆನು; ಮಾಡಿದವನೂ ಯೆತ್ತುವವನೂ ನಾನೇ; ಹೊತ್ತುಕೊಳ್ಳುವೆನು, ಬಿಡಿಸುವೆನು. (ಎಶ. ೪೬, ೪.)

ನಮ್ಮವರು ಸಾಯುವದರಲ್ಲಿ.

೪೬. ತಂದೆಯೇ ನೀನು ನನಗೆ ಕೊಟ್ಟವರು, ನೀನು ಜಗದುತ್ಪತಿಗೆ ಮುಂಚೆ ನನಗೆ ಪ್ರೀತಿ ಮಾಡಿದದರಿಂದ, ನನಗೆ ಕೊಟ್ಟ ನನ್ನ ಮಹಿಮೆಯನ್ನು ನೋಡುವ ಹಾಗೆ, ನಾನು ಇರುವಲ್ಲಿ ಅವರು ಸಹ ನನ್ನ ಸಂಗಡ ಇರಬೇಕೆಂದು ಇಚ್ಛೈಸುತ್ತೇನೆ. (ಯೋ. ೧೭, ೨೪.)

ರೋಗದಲ್ಲಿ.

೪೭. ನಮ್ಮ ಹೊರಗಿನ ಮನುಷ್ಯನು ನಾಶವಾದರೂ ಒಳಗಿನವನು ದಿನ ದಿನಕ್ಕೆ ಹೊಸಬನಾಗುತ್ತಾನೆ. (೨ ಕೊರಿ. ೪, ೧೬.)

ಯೆಲ್ಲಾವು ತೀರಿದಂತೆ ತೋರುವಾಗ.

೪೮. ನನ್ನ ಮಾಂಸವೂ ನನ್ನ ಹೃದಯವೂ ತೀರಿ ಹೋಗುತ್ತವೆ. ದೇವರು ಯುಗ ಯುಗಕ್ಕೂ ನಂನ ಹೃದಯದ ಬಂಡೆಯೂ ನನ್ನ ಪಾಲೂ ಆಗಿದ್ದಾನೆ. (ಕೀರ್ತ. ೭೩, ೨೬.)

೪೯. ಸ್ವಲ್ಪ ಕ್ಷಣಕ್ಕೆ ನಿನ್ನನ್ನು ಬಿಟ್ಟು ಬಿಟ್ಟೆನು, ಆದರೆ ದೊಡ್ಡ ಅಂತಃಕರಣದಿಂದ ನಿನ್ನನ್ನು ಕೂಡಿಸುವೆನು. ಶಿಟ್ಟಿನ ಅವಸರದಲ್ಲಿ ನನ್ನ ಮೋರೆ ಕ್ಷಣಕ್ಕೆ ನಿನ್ನ ಮುಂದೆ ಅಡಗಿಸಿ ಕೊಂಡೆನು, ಆದರೆ ನಿತ್ಯವಾದ ಕೃಪೆಯಿಂದ ನಿನ್ನನ್ನು ಕರುಣಿಸುವೆನು ಯೆಂದು ನಿನ್ನ ವಿಮೋಚಕನಾದ ಕರ್ತನು ಹೇಳುತ್ತಾನೆ. (ಯೆಶ. ೫೪, ೭. ೮.)

೫೦. ದೇವರು ರಾತ್ರಿ ಹಗಲು ತನಗೆ ಮೊರೆ ಇಡುವ, ತಾನು ಆದು ಕೊಂಡವರಿಗೆ ದೀರ್ಘಶಾಂತನಾಗಿದ್ದು ಅವರಿಗೆ ನ್ಯಾಯತೀರಿಸನೋ? ನಿಮಗೆ ಹೇಳುತ್ತೇನೆ— ಅವರಿಗೆ ಬೇಗ ನ್ಯಾಯತೀರಿಸುವನು. (ಲೂಕ್. ೧೮, ೭. ೮.)

೫೧. ಸ್ತ್ರೀಯು ತನ್ನ ಗರ್ಭದ ಮಗನಿಗೆ ಅಂತಃಕರಣ ಪಡದ ಹಾಗೆ ತನ್ನ ಕೂಸನ್ನು ಮರತು ಬಿಟ್ಟಾಳ್ಯಾ? ಅವಳು ಮರತು ಬಿಟ್ಟರೂ ಕರ್ತನು ನಿನ್ನನ್ನು ಮರತು ಬಿಡನು. (ಎಶ್. ೪೯, ೧೫.)

೫೨. ಬೆಟ್ಟಗಳು ಹಿಂಜರಿದರೂ ಗುಡ್ಡಗಳು ಕದಲಿದರೂ ನನ್ನ ಕೃಪೆಯು ನಿನ್ನ ಕಡೆಯಿಂದ ಹಿಂಜರಿಯುವದಿಲ್ಲಾ, ನನ್ನ ಸಮಾಧಾನದ ಒಡಂಬಡಿಕೆಯು ಕದಲುವದಿಲ್ಲಾ ಯೆಂದು ನಿನ್ನನ್ನು ಕರುಣಿಸುವ ಕರ್ತನು ಹೇಳುತ್ತಾನೆ. (ಎಶ್. ೫೪, ೧೦.)

ನಾಲ್ಕನೇ ಕ್ರಮ.

ಭರವಸದಿಂದ ಸಾಯುವದನ್ನು ಕಲಿಸುವಂಥ ವಚನಗಳು.

ಮನುಷ್ಯರು ಪಾಪದಲ್ಲಿ ಬಿದ್ದಂದಿನಿಂದ ಸಾವು ಯೆಲ್ಲರ ಗತಿಯಾಗಿದೆ.

೧. ಒಂದೇ ಸಾರಿ ಸಾಯುವದೂ ಇದರ ತರುವಾಯ ನ್ಯಾಯತೀರ್ಪಿಕೆಯೂ ಮನುಷ್ಯರಿಗೆ ನೇಮಕವಾಗಿದೆ. (ಇಬ್ರಿ. ೯, ೨೭.)

೨. ಮರಣವನ್ನು ನೋಡದೆ ಬದುಕುವ ಪುರುಷನು ಯಾರು? (ಕೀರ್ತ. ೮೯, ೪೮.)

ದೇವರ ಚಿತ್ತದ ಪ್ರಕಾರ ಹೀಗೆ ಇರುತ್ತದೆ.

೩. ನೀನು ಮನುಷ್ಯನನ್ನು ಧೂಳಿಗೆ ತಿರುಗಿಸಿ,— ಮನುಷ್ಯನ ಮಕ್ಕಳೇ ತಿರುಗಿರಿ ಯೆಂದು ಹೇಳುತ್ತೀ. (ಕೀರ್ತ. ೯೦, ೩.)

೪. ನಂಮಲ್ಲಿ ಯಾವನು ತನಗೆ ಬದುಕುವದಿಲ್ಲ, ಮತ್ತು ಯಾವನಾದರೂ ತನಗೆ ಸಾಯುವದಿಲ್ಲ. ಹ್ಯಾಗಂದರೆ ಬದುಕಿದರೆ ಕರ್ತನಿಗೆ ಬದುಕುತ್ತೇವೆ; ಸತ್ತರೆ ಕರ್ತನಿಗೆ ಸಾಯುತ್ತೇವೆ. ಹಾಗಾದರೆ, ಬದುಕಿದರೂ ಸತ್ತರೂ ಕರ್ತನವರಾಗಿದ್ದೇವೆ. (ರೋಮ. ೧೪, ೭. ೮.)

ಅದರಲ್ಲಿ ನಮಗೆ ಅನ್ಯಾಯವಾಗುವದಿಲ್ಲ.

೫. ಪಾಪದ ಸಂಬಳವು ಮರಣವೇ; ಆದರೆ ದೇವರ ಕೃಪೆಯ ವರವು ನಂಮ ಕರ್ತನಾದ ಯೇಸುವಿನಲ್ಲಿರುವ ನಿತ್ಯಜೀವವೇ. (ರೋಮ. ೬, ೨೩.)

ಆದಾಗ್ಯೂ ಮರಣದ ಅಧಿಕಾರ ಮುರಿದದೆ.

೬. ಮರಣವು ಜಯದಲ್ಲಿ ನುಂಗಲ್ಪಟ್ಟದೆ; ಮರಣವೇ ನಿನ್ನ ಕೊಂಡಿಯು ಯೆಲ್ಲಿ? ಪಾತಾಳವೇ ನಿನ್ನ ಜಯವು ಯೆಲ್ಲಿ? ಆದರೆ ನಂಮ ಕರ್ತನಾದ ಯೇಸು ಕ್ರಿಸ್ತನ ಮುಖದಿಂದ ನಮಗೆ ಜಯವನ್ನು ಕೊಡುವ ದೇವರಿಗೆ ಸ್ತೋತ್ರವು. (೧ ಕೊರ್ ೧೫, ೫೫. ೫೬.)

೭. ಯೇಸುವಿನ ಜೀವವು ನಂಮ ಶರೀರದಲ್ಲಿ ಪ್ರತ್ಯಕ್ಷವಾಗುವ ಹಾಗೆ, ಯೆಂದಿಗೂ ಕರ್ತನಾದ ಯೇಸುವಿನ ಸಾಯುವಿಕೆಯನ್ನು ಶರೀರದಲ್ಲಿ ಹೊತ್ತು ತಿರುಗುತ್ತೇವೆ. (೨ ಕೊರ್. ೪, ೧೦.)

೮. ಪ್ರಭುವೇ! ಈಗ ನಿನ್ನ ವಾಕ್ಯದ ಪ್ರಕಾರ ನಿನ್ನ ದಾಸನನ್ನು ಸಮಾಧಾನವಾಗಿ ಕಳುಹಿಸಿ ಬಿಡುತ್ತೀ; ಯಾಕಂದರೆ ನಿನ್ನ ರಕ್ಷಣೆಯನ್ನು ನನ್ನ ಕಂಣುಗಳು ಕಂಡವೆ. (ಲೂಕ್. ೨, ೨೯. ೩೨.)

೯. ಮರಣವಾದರೂ, ಜೀವವಾದರೂ, ದೂತರಾದರೂ, ಅಧಿಕಾರಗಳಾದರೂ, ಬಲಗಳಾದರೂ, ಇರುವವುಗಳಾದರೂ, ಬರುವವುಗಳಾದರೂ, ಯೆತ್ತರವಾದರೂ, ಆಳವಾದರೂ, ಬೇರೆ ಯಾವ ಸೃಷ್ಟಿಯಾದರೂ, ನಂಮನ್ನು ನಂಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ದೇವರ ಪ್ರೀತಿಯಿಂದ ಅಗಲಿಸಲಾರದೆಂದು, ನಿಶ್ಚಯಿಸಿಕೊಂಡಿದ್ದೇನೆ. (ರೋಮ್. ೮, ೩೮. ೩೯.)

ಇದಲ್ಲದೆ ವಿಶ್ವಾಸಿಗಳಿಗೆ ಮರಣವು ಲಾಭವಾಗಿದೆ.

೧೦. ನನಗೆ ಜೀವಿಸುವದು ಕ್ರಿಸ್ತನೇ, ಸಾಯುವದು ಲಾಭವೆ. ಬಿಟ್ಟು ಹೋಗಿ ಕ್ರಿಸ್ತನ ಸಂಗಡ ಇರ ನನಗೆ ಅಪೇಕ್ಷೆ ಉಂಟು. (ಫಿಲಿಪ್ಪ್. ೧, ೨೧. ೨೩.)

ಬಲಾತ್ಕಾರವಾದ ಮರಣವು ಸುದಾ.

೧೧. ಆತನ ಭಕ್ತರ ಮರಣವು ಕರ್ತನ ದೃಷ್ಟಿಯಲ್ಲಿ ಅಮೂಲ್ಯವಾಗಿದೆ. (ಕೀರ್ತ. ೧೧೬, ೧೫.)

ಯಾಕಂದರೆ ಅದು ಅವರಿಗೆ ವಿಮೋಚನೆಯಾಗುವದು.

೧೨. ಕರ್ತನು ಸಕಲ ದುಷ್ಕ್ರಿಯೆಗಳಿಂದ ನನ್ನನ್ನು ತಪ್ಪಿಸಿ, ಪರಲೋಕದಲ್ಲಿರುವ ತನ್ನ ರಾಜ್ಯದ ವರೆಗೆ ರಕ್ಷಿಸುವನು. ಆತನಿಗೆ ಯುಗಯುಗಾಂತರಗಳಿಗೂ ಮಹಿಮೆಯು. ಆಮೆನ್. (೨ ತಿಮ್. ೪, ೧೮.)

ಆತ್ಮವು ದೇವರ ಬಳಿಗೆ ಬರುವದು.

೧೩. ಧೂಳಿಯು ತನ್ನ ಭೂಮಿಗೆ ತಿರುಗುವದು ಆತ್ಮವು ಅದನ್ನು ಕೊಟ್ಟ ದೇವರ ಬಳಿಗೆ ತಿರುಗುವದು. (ಪ್ರಸಂಗಿ. ೧೨, ೭.)

ಅಲ್ಲಿ ಮಂಗಳವಂನು ಹೊಂದುವದು.

೧೪. ದೇವರ ಪ್ರಜೆಗೆ ವಿಶ್ರಾಂತಿ ಇಂನು ಉಂಟು. ಆದದರಿಂದ ಆ ವಿಶ್ರಾಂತಿಯಲ್ಲಿ ಪ್ರವೇಶಿಸ ಜಾಗ್ರತೆ ಪಡೋಣ. (ಇಬ್ರಿ. ೪, ೯—೧೧.)

ವಿಶೇಷವಾಗಿ ಕಡೇ ಉಪದ್ರದಲ್ಲಿ ಸತ್ತವರ ಪ್ರಾಣಗಳು ಆಗಲೇ.

೧೫. ಇನ್ನು ಮೇಲೆ ಕರ್ತನಲ್ಲಿ ಸಾಯುವ ಮರಣಸ್ಥರು ಭಾಗ್ಯವಂತರು, ಹೌದು, ಅವರು ತಂಮ ಕಷ್ಟಗಳಿಂದ ವಿಶ್ರಾಂತಿಯಾಗುವರೆಂದು ಆತ್ಮವು ಹೇಳು

ತ್ತದೆ; ಮತ್ತು ಅವರ ಕ್ರಿಯೆಗಳು ಅವರನ್ನು ಹಿಂಬಾಲಿಸುವವು. (ಪ್ರಕ್. ೧೪, ೧೩.)

ಅವರು ನ್ಯಾಯತೀರ್ವಿಕೆಗೆ ಅಂಜಿ ಕೊಳ್ಳುವ ಕಾರಣವಿಲ್ಲ.

೧೬. ನಿಶ್ಚಯವಾಗಿ ನಿಶ್ಚಯವಾಗಿ ನಿಮಗೆ ಹೇಳುತ್ತೇನೆ—ನನ್ನ ವಾಕ್ಯವನ್ನು ಕೇಳಿ ನನ್ನನ್ನು ಕಳುಹಿಸಿದವನಲ್ಲಿ ವಿಶ್ವಾಸವಿಡುವವನಿಗೆ ನಿತ್ಯಜೀವ ಉಂಟು ಅವನು ಆಗ್ನೆನಿರ್ಣಯದೊಳಗೆ ಬರುವದಿಲ್ಲಾ; ಆದರೆ ಮರಣದೊಳಗಿಂದ ಜೀವಕ್ಕೆ ದಾಟಿ ಹೋಗಿದ್ದಾನೆ. (ಯೋ. ೫, ೨೪.)

ದೇಹಕ್ಕೆ ಅಷ್ಟರಲ್ಲಿ ವಿಶ್ರಾಂತಿ ಉಂಟು.

೧೭. ನೀತಿವಂತರು ಕೇಡಿನ ಮುಂದೆ ಕೂಡಿಸಲ್ಪಡುತ್ತಾರೆ; ನೆಟ್ಟಗೆ ನಡಿದವರು ಸಮಾಧಾನಕ್ಕೆ ಸೇರಿ, ತಮ್ಮ ಹಾಸಿಕೆಗಳ ಮೇಲೆ ವಿಶ್ರಾಂತಿ ಪಡುತ್ತಾರೆ. (ಎಶ. ೫೭, ೨.)

ಆದರೆ ಅದು ತಿರಿಗಿ ಯೆಬ್ಬಿಸಲ್ಪಡುವದು.

೧೮. ನನ್ನನ್ನು ಕಳುಹಿಸಿದವನ ಚಿತ್ತವು ಇದೇ ಮಗನನ್ನು ನೋಡಿ, ಆತನಲ್ಲಿ ವಿಶ್ವಾಸವಿಡುವವರೆಲ್ಲರಿಗೆ ನಿತ್ಯಜೀವವು ಇರಬೇಕೆಂಬುವದು. ಮತ್ತು ನಾನು ಕಡೇ ದಿನದಲ್ಲಿ ಅವನನ್ನು ಯೆಬ್ಬಿಸುವೆನು. (ಯೋ. ೬, ೪೦.)

ಬೇರೊಂದು ದೇಹವು ಅಲ್ಲಾ ಅದೇ ಶರೀರವು.

೧೯. ಯೇನಂದರೆ ನನ್ನ ರಕ್ಷಕನು ಬದುಕುತ್ತಾನೆಂದೂ ಆತನು ಅಂತ್ಯದ ದಿವಸದಲ್ಲಿ ಭೂಮಿಯ ಮೇಲೆ ನಿಲ್ಲುವನೆಂದೂ ನಾನು ತಿಳಿದಿದ್ದೇನೆ. ಇದಲ್ಲದೆ ನನ್ನ ಚರ್ಮ ಮೊದಲಾದದ್ದು ರೋಗದಿಂದ ಕೆಟ್ಟು ಹೋದರೂ ನಾನು ಶರೀರದಿಂದ ದೇವರನ್ನ ನೋಡುವೆನು. ಆತನ್ನ ನಾನು ನನಗೆಂದು ನೋಡುವೆನು. ಅಂನ್ಯನ ಕಂಣುಗಳಲ್ಲ ನನ್ನ ಕಂಣುಗಳೇ ಆತನ್ನ ನೋಡುವವು. ಈ ಆಶೆಯಿಂದ ಇಂದ್ರಿಯಂಗಳು ನನ್ನ ಒಳಗೆ ದಣಿದು ಹೋಗುತ್ತವೆ. (ಇಯೊಬ್. ೧೯, ೨೫. ೨೭.)

೨೦. ಲಯವಾಗಿ ಬಿತ್ತಲ್ಪಡುವದು, ನಿರ್ಲಯವಾಗಿ ಯೆಬ್ಬಿಸಲ್ಪಡುವದು; ಅಪಮಾನದಲ್ಲಿ ಬಿತ್ತಲ್ಪಡುವದು, ಮಹಿಮೆಯಲ್ಲಿ ಯೆಬ್ಬಿಸಲ್ಪಡುವದು; ಅಶಕ್ತಿಯಲ್ಲಿ ಬಿತ್ತಲ್ಪಡುವದು, ಬಲದಲ್ಲಿ ಯೆಬ್ಬಿಸಲ್ಪಡುವದು; ಪ್ರಾಣಭಾವದ ಶರೀರವು ಬಿತ್ತಲ್ಪಡುವದು, ಆತ್ಮಭಾವದ ಶರೀರವು ಯೆಬ್ಬಿಸಲ್ಪಡುವದು. (೧ ಕೊರ್. ೧೫, ೪೨—೪೪.)

ಆದಾಗ್ಯೂ ಅಧಿಕ ಮಹಿಮೆಯಲ್ಲಿ.

೨೧. ನಮ್ಮ ಪಟ್ಟವಾಸವು ಪರಲೋಕಗಳಲ್ಲಿ ಉಂ

ಟು; ಅಲ್ಲಿಂದಲ್ಲೇ ಕರ್ತನಾದ ಯೇಸು ಕ್ರಿಸ್ತನೆಂಬ ರಕ್ಷಕನು ಬರುವದನ್ನು ಯೆದುರು ನೋಡುತ್ತೇವೆ. ಆತನು ತನಗೆ ಯೆಲ್ಲವನ್ನು ಅಧೀನ ಮಾಡ ಬಹುದಾದ ಯತ್ನದ ಪ್ರಕಾರ ನಮ್ಮ ನೀಚತನದ ಶರೀರವನ್ನು ತನ್ನ ಮಹಿಮೆಯ ಶರೀರಕ್ಕೆ ಸಾರೂಪ್ಯವಾಗುವ ಹಾಗೆ, ಮಾರ್ಪಡಿಸುವನು. (ಫಿಲಿಪ್ಪ. ೩, ೨೦. ೨೧.)

ಆವಾಗ ನೀತಿವಂತರು ಮಾನದಲ್ಲಿ ನಿಲ್ಲುವರು.

೨೨. ಆಗಲು ನೀತಿವಂತರು ಸೂರ್ಯನ ಹಾಗೆ ತಮ್ಮ ತಂದೆಯ ರಾಜ್ಯದಲ್ಲಿ ಪ್ರಕಾಶಿಸುವರು. (ಮತ್ಥ. ೧೩, ೪೩.)

ಪರಲೋಕದಲ್ಲಿ ಶೇರಿ ಕಾಂಡು.

೨೩. ಆಗಲು ಅರಸನು ತನ್ನ ಬಲಪಾರ್ಶ್ವದಲ್ಲಿ ಇರುವವರಿಗೆ—ನನ್ನ ತಂದೆಯಿಂದ ಆಶೀರ್ವದಿಸಲ್ಪಟ್ಟವರೇ, ಬನ್ನಿ; ಜಗದುತ್ಪತ್ತಿಯಿಂದ ನಿಮಗೆ ಸಿದ್ಧ ಮಾಡಲ್ಪಟ್ಟ ರಾಜ್ಯವಂನು ಬಾಧ್ಯವಾಗಿ ಹೊಂದಿರಿ—ಯೆಂದು ಹೇಳುವನು. (ಮತ್ಥ. ೨೬, ೩೪.)

ಮಹಿಮೆಯ ಕಿರೀಟ ಹೊಂದಿ.

೨೪. ನಾಳ್ಳೇ ಹೋರಾಟವಂನು ಹೋರಾಡಿದ್ದೇನೆ; ಓಟವಂನು ತೀರಿಸಿದ್ದೇನೆ; ವಿಶ್ವಾಸವಂನು ಕೈಕೊಂಡಿ

ದ್ದೇನೆ. ಇಂನು ಮೇಲೆ ನೀತಿಯ ಕಿರೀಟವು ನನಗಾಗಿ ಸ್ಥಿರ ಇಟ್ಟದೆ; ಆ ದಿನದಲ್ಲಿ ನೀತಿಯುಳ್ಳ ನ್ಯಾಯಾಧಿಪತಿಯಾದ ಕರ್ತನು ಅದಂನು ನನಗೆ ಕಾಡುವನು; ನನಗೆ ಮಾತ್ರವಲ್ಲ ಆತನ ಪ್ರತ್ಯಕ್ಷತೆಯಂನು ಪ್ರೀತಿ ಮಾಡುವವರೆಲ್ಲರಿಗೂ ಕಾಡುವನು. (೨ ತಿಮ್. ೪, ೭. ೮.)

ಸಂಪೂರ್ಣವಾದ ಆನಂದ ಪಡುವರು.

೨೫. ಅವರು ದೇವರ ಸಿಂಹಾಸನದ ಮುಂದೆ ಇದ್ದು, ಆತನ ಮಂದಿರದಲ್ಲಿ ರಾತ್ರಿ ಹಗಲು ಆತನನ್ನು ಸೇವಿಸುತ್ತಾರೆ. ಮತ್ತು ಸಿಂಹಾಸನದ ಮೇಲೆ ಕೂತವನು ಅವರ ಮೇಲೆ ತನ್ನ ಗುಡಾರ ಹಾಕಿ ಕೊಳ್ಳುವನು. ಇನ್ನು ಮೇಲೆ ಅವರಿಗೆ ಹಸಿವೆಯಾದರೂ ದಾಹವಾದರೂ ಆಗದೆ, ಸೂರ್ಯನ ಬಿಸಿಲಾದರೂ ಯಾವ ಕಾವಾದರೂ ತಗಲದೆ ಇರುವದು. ಯಾಕಂದರೆ ಸಿಂಹಾಸನದ ಮಧ್ಯದಲ್ಲಿರುವ ದೇವರ ಕುರಿಮರಿಯು ಅವರನ್ನು ಮೇಯಿಸಿ ಜೀವವುಳ್ಳ ನೀರು ಬುಗ್ಗೆಗಳಿಗೆ ನಡಿಸುವದು; ಮತ್ತು ದೇವರು ಕಂಣೀರೆಲ್ಲಾ ಅವರ ಕಂಣುಗಳಿಂದ ವರಸುವನು. (ಪ್ರಕ್. ೭, ೧೫—೧೭.)

ಹೀಗೆ ಯುಗಯುಗಾಂತರಗಳ ವರಿಗೂ ಇರುವದು.

೨೬. ಆತನ ದಾಸರು ಆತನನ್ನು ಸೇವಿಸುವರು;

ಆತನ ಮುಖವನ್ನು ನ್ಯಾಡುವರು; ಆತನ ಹೆಸರು ಅವರ ಹಣೆಗಳ ಮೇಲೆ ಇರುವದು. ರಾತ್ರಿಯು ಅಲ್ಲಿ ಇರುವದಿಲ್ಲಾ, ಮತ್ತು ದೀಪವೂ, ಸೂರ್ಯನ ಬೆಳಕೂ ಅವರಿಗೆ ಅಗತ್ಯವಿಲ್ಲಾ; ಯಾಕಂದರೆ ಕರ್ತನಾದ ದೇವರು ಅವರಿಗೆ ಬೆಳಕು ಕಾಡುತ್ತಾನೆ. ಯುಗಯು ಗಾಂತರಗಳ ವರಿಗೂ ಆಳುವರು. (ಪ್ರಕ್. ೨೨, ೪. ೫.)

ಬಾಲ ಬ್ಯಾಧನೆಗೆ ಆಧಾರವಾಗಿರುವ ವಿಶೇಷವಾದ ವಚನಗಳು.

ಪರಿಶುದ್ಧ ಬರಹದ ವಿಷಯ.

ಅನೇಕ ಭಾಗವಾಗಿಯೂ, ಅನೇಕ ವಿಧವಾಗಿಯೂ, ಪೂರ್ವದಲ್ಲಿ ಪಿತೃಗಳಿಗೆ ಪ್ರವಾದಿಗಳಿಂದ ಮಾತಾಡಿದ ದೇವರು, ಈ ಅಂತ್ಯ ದಿವಸಗಳಲ್ಲಿ ನಮಗೆ ಮಗನಿಂದ ಮಾತಾಡಿದನು. ಈತನನ್ನು ಸರ್ವಕ್ಕೆ ಬಾಧ್ಯಸ್ತನಾಗಿ ನೇಮಿಸಿದನು, ಈತನ ಮುಖದಿಂದ ಯುಗಗಳನ್ನು ಉಂಟು ಮಾಡಿದನು. (ಇಬ್ರಿ. ೧, ೧. ೨.)

ಬರಹಗಳನ್ನು ಶ್ಯಾಧಿಸಿರಿ, ಯಾಕಂದರೆ ಅವುಗಳಲ್ಲಿ ನಿತ್ಯಜೀವ ನಿಮಗುಂಟೆಂದು, ನೆನಸುತ್ತೀರಿ. ಮ

ತ್ತು ಅವ್ಯೇ ನನ್ನನ್ನು ಕುರಿತು ಸ್ಸಾಕ್ಷಿ ಕಾಡುತ್ತವೆ. (ಯೋ. ೫, ೩೯.)

ಮುಂಬರೆದವುಗಳಷ್ಟು ನಂಮ ಬ್ಯಾಧನೆಗ್ಯಾಸ್ಕರ ಮುಂಬರೆಯಲ್ಪಟ್ಟವು; ತಾಳ್ಮೆಯಿಂದಲೂ ಬರಪಾಗಳ ಆದರ್ಶೆಯಿಂದಲೂ ನಮಗೆ ಕ್ಯಾರಿಕೆ ಉಂಟಾಗುವ ಪಾಗೆಯ್ಯೇ. (ರ್ಯಾಮ್. ೧೫, ೪.)

ಬರಪಾವೆಲ್ಲಾ ದ್ಯೆವ ಪ್ರ್ಯೇರಿತವಾದದ್ದು, ಬ್ಯಾಧನೆಗೂ, ಶಿಕ್ಷೆಗೂ ತಿದ್ದುಪಾಟಿಗೂ, ನ್ಯೀತಿಯ ಉಪದ್ಯೇಶಕ್ಕೂ, ದ್ಯೇವರ ಮನುಷ್ಯನು ಯೆಲ್ಲಾ ಸತ್‍ಕ್ರಿಯೆಗೆ ಸಿದ್ಧವಾಗಿ, ಆಯತ್ತನಾಗುವದಕ್ಕೂ ಪ್ರಯ್ಯೋಜನವಾಗಿದೆ. (೨ ತಿಮ್. ೩, ೧೬. ೧೭.)

ಬಾಲ ಬ್ಯಾಧನೆಯ ಪ್ರೀತಿಕೆಯ ವಿಷಯ.

ಅಂತಿಯೋಕ್ಯದಲ್ಲಿ ಮೊದಲು ಶಿಷ್ಯರಿಗೆ ಕ್ರಿಸ್ತನವರೆಂಬ ಪೆಸರು ಉಂಟಾಯಿತು. (ಅಪಾ ಕ್ರಿ. ೧೧, ೨೬.)

ಕರ್ತನ್ಯೇ, ಕರ್ತನ್ಯೇ, ಯೆಂದು ನನಗೆ ಪೇಳುವವರೆಲ್ಲರು ಅಲ್ಲ, ಪರಲ್ಯಾಕಗಳಲ್ಲಿರುವ ನನ್ನ ತಂದೆಯ ಚಿತ್ತವನ್ನು ಮಾಡುವವನ್ಯೇ ಪರಲ್ಯಾಕದ ರಾಜ್ಯದಲ್ಲಿ ಪ್ರವ್ಯೇಶಿಸುವನು. (ಮತ್. ೭, ೨೧.)

ಕ್ರಿಸ್ತ ಯೇಸುವಿಗಾಗಿ ಸ್ನಾನ ಪಾಂದಿದವರಷ್ಟು

ಆತನ ಮರಣಕ್ಕಾಗಿ ಸ್ನಾನ ಹೊಂದಿದೆವೆಂದು ಅರಿಯರಾ? ಹಾಗಾದರೆ, ಯಾವ ಪ್ರಕಾರ ಕ್ರಿಸ್ತನು ತಂದೆಯ ಮಹಿಮೆಯಿಂದ ಸತ್ತವರೊಳಗಿಂದ ಯೆಬ್ಬಿಸಲ್ಪಟ್ಟನೋ, ಅದೇ ಪ್ರಕಾರ ನಾವು ಸಹ ಹೊಸ ಜೀವದಲ್ಲಿ ನಡೆದು ಕೊಳ್ಳುವ ಹಾಗೆ, ಆತನ ಸಂಗಡ ಸ್ನಾನದಿಂದ ಮರಣಕ್ಕಾಗಿ ಹೂಣಲ್ಪಟ್ಟೆವು. (ರೋಮ್. ೬, ೩. ೪.)

ಮೊದಲನೆ ಪರ್ವವು.

ಪರಿಶುದ್ಧ ಸ್ನಾನದ ವಿಷಯ.

ಒಬ್ಬನು ನೀರಿನಿಂದಲೂ ಆತ್ಮದಿಂದಲೂ ಹುಟ್ಟದಿದ್ದರೆ, ದೇವರ ರಾಜ್ಯದಲ್ಲಿ ಪ್ರವೇಶಿಸಲಾರನು. (ಯೋ. ೩, ೫.)

ತನ್ನ ಕರುಣೆಯ ಪ್ರಕಾರವೇ ದೇವರು ಪುನರ್ಜನ್ಮದ ತೊಳೆಯುವಿಕೆಯಿಂದಲೂ, ತಾನು ನಮ್ಮ ರಕ್ಷಕನಾದ ಯೇಸು ಕ್ರಿಸ್ತನಿಂದ ಐಶ್ವರ್ಯವಾಗಿ ನಮ್ಮ ಮೇಲೆ ಹೊಯಿದ ಪರಿಶುದ್ಧಾತ್ಮದ ನವೀಕರಣದಿಂದಲೂ ನಮ್ಮನ್ನು ರಕ್ಷಿಸಿದನು. (ತೀತ. ೩, ೫. ೬.)

ಯೆರಡನೆ ಪರ್ವವು.

ಕ್ರೈಸ್ತರ ವಿಶ್ವಾಸಪ್ರಮಾಣದ ವಿಷಯ.

ಕ್ರಿಸ್ತನ ಸುವಾರ್ತೆಗೆ ನಾಚಿಕೆ ಪಡೆನು. ಅದು ವಿ

ಶ್ವಸಿಸುವವರೆಲ್ಲರಿಗೆ ರಕ್ಷಣೆಗೋಸ್ಕರವಾದ ದೇವರ ಬಲವಾಗಿದೆ. ಹೇಗಂದರೆ, ದೇವರ ನೀತಿಯು ಅದರಲ್ಲಿ ವಿಶ್ವಾಸದಿಂದ ವಿಶ್ವಾಸಕ್ಕಾಗಿ ಪ್ರಕಟವಾಗುತ್ತದೆ. ನೀತಿವಂತನು ವಿಶ್ವಾಸದಿಂದ ಬದುಕುವನೆಂದು ಬರೆದಿರುವ ಹಾಗೆಯೇ. (ರೋಮ್. ೧, ೧೬. ೧೭.)

ದೇವರು ಒಬ್ಬನೇ ಯೆಂದು ನೀನು ನಂಬುತ್ತೀ; ಚಂನಾಗಿ ಮಾಡುತ್ತೀ; ದೆವ್ವಗಳು ಸಹಾ ನಡುಗಿ ನಂಬುತ್ತವೆ. (ಯಾಕೋಬ್. ೨, ೧೯.)

ನೀವು ಕರ್ತನಾದ ಕ್ರಿಸ್ತ ಯೇಸುವನ್ನು ಹೊಂದಿದ ಪ್ರಕಾರ ಆತನಲ್ಲಿ ನಡೆದು ಕೊಳ್ಳಿರಿ. ಆತನಲ್ಲಿ ಬೇರೂರಿ, ಕಟ್ಟಲ್ಪಟ್ಟು, ವಿಶ್ವಾಸದಲ್ಲಿ ಸ್ಥಿರ ಮಾಡಲ್ಪಟ್ಟು, ನೀವು ಬೋಧಿಸಲ್ಪಟ್ಟ ಪ್ರಕಾರ ಅದರಲ್ಲಿ ಸ್ತೋತ್ರ ಮಾಡಿ ಹೆಚ್ಚಿರಿ. (ಕೊಲ್. ೨, ೬. ೭.)

ದೇವರಿಂದ ಹುಟ್ಟಿದ್ದೆಲ್ಲಾ ಲೋಕವನ್ನು ಜಯಿಸುತ್ತದೆ. ಮತ್ತು ನಮ್ಮ ವಿಶ್ವಾಸವೇ ಲೋಕವನ್ನು ಜಯಿಸಿದ ಜಯವಾಗಿದೆ. (೧ ಯೋ. ೫, ೪.)

ನೋಡದೆ ವಿಶ್ವಸಿಸುವವರು ಭಾಗ್ಯವಂತರು. (ಯೋ. ೨೦, ೨೯.)

ಕರ್ತನೇ, ವಿಶ್ವಸಿಸುತ್ತೇನೆ; ನನ್ನ ಅವಿಶ್ವಾಸಕ್ಕೆ ಸಹಾಯ ಮಾಡು. (ಮಾರ್ಕ್. ೯, ೨೪.)

ವಿಶ್ವಾಸದ ವಿಧಿಯ ೧೨ ಸೂತ್ರಗಳು.

೧. ಪರಲೋಕ ಭೂಲೋಕಗಳ ಸರ್ವತ್ರಾಣಿ (ಸೃಷ್ಟಿಕರ್ತನಾಗಿರುವ) ತಂದೆಯಾದ ದೇವರಲ್ಲಿ ನಂಬುತ್ತೇನೆ.

೨. ದೇವರ ಒಬ್ಬನಾಗಿ ಹುಟ್ಟಿದ ಮಗನಾಗಿರುವ ನಮ್ಮ ಕರ್ತನಾದ ಯೇಸು ಕ್ರಿಸ್ತನಲ್ಲಿಯೂ ನಂಬುತ್ತೇನೆ.

೩. ಆತನು ಪರಿಶುದ್ಧಾತ್ಮದಿಂದ ಗರ್ಭದಲ್ಲಿ ಬಂದು, ಮರಿಯಳೆಂಬ ಕನ್ಯಾಸ್ತ್ರೀಯಿಂದ ಹುಟ್ಟಿದನು.

೪. ಪೊಂತಿಯ ಪಿಲಾತನ ಕಾಲದಲ್ಲಿ ಶ್ರಮೆ ಪಟ್ಟು, ಶಿಲುಬೆಗೆ ಹಾಕಲ್ಪಟ್ಟು, ಸತ್ತು, ಹೂಣಲ್ಪಟ್ಟನು.

೫. ಪಾತಾಳಕ್ಕೆ ಇಳಿದು, ಮೂರನೆ ದಿವಸದಲ್ಲಿ ಸತ್ತವರೊಳಗಿಂದ ಯೆದ್ದನು.

೬. ಪರಲೋಕಕ್ಕೆ ಯೇರಿ, ಅಲ್ಲಿ ತನ್ನ ಸರ್ವತ್ರಾಣಿಯಾದ ತಂದೆಯಾಗಿರುವ ದೇವರ ಬಲಪಾರ್ಶ್ವದಲ್ಲಿ ಕೂತು ಕೊಳ್ಳುತ್ತಾನೆ.

೭. ಅಲ್ಲಿಂದ ಇನ್ನು ಮುಂದೆ ಬಂದು, ಬದುಕುವವರಿಗೂ ಸತ್ತವರಿಗೂ ನ್ಯಾಯತೀರಿಸುವನು.

೮. ಪರಿಶುದ್ಧಾತ್ಮನಲ್ಲಿಯೂ ನಂಬುತ್ತೇನೆ.

೯. ಒಂದೇ ಪರಿಶುದ್ಧ ಕ್ರೈಸ್ತಸಭೆಯೂ, ಪರಿಶುದ್ಧರ ಅನ್ಯೋನ್ಯವೂ,

೧೦. ಪಾಪ ಪರಿಹಾರವೂ,

೧೧. ಶರೀರದ ಪುನರುತ್ಥಾನವೂ,

೧೨. ನಿತ್ಯಜೀವವೂ ಉಂಟೆಂದು ನಂಬುತ್ತೇನೆ.

ಮೊದಲನೆ ಸೂತ್ರ. ಸೃಷ್ಟಿಯ ವಿಷಯ.

ಪರಲೋಕ ಭೂಲೋಕಗಳ ಸರ್ವತ್ರಾಣಿಯಾದ ಸೃಷ್ಟಿಕರ್ತನಾಗಿರುವ ತಂದೆಯಾದ ದೇವರಲ್ಲಿ ನಂಬುತ್ತೇನೆ—ಯೆಂಬುವದು.

ಲೋಕದ ಸೃಷ್ಟಿಯಿಂದ ದೇವರ ಅದೃಶ್ಯವಾದವುಗಳು, ಅಂದರೆ ಆತನ ನಿತ್ಯ ಶಕ್ತಿಯೂ ದೇವತ್ವವೂ, ನಿರ್ಮಾಣಗಳಿಂದ ಗ್ರಹಿಸಲ್ಪಟ್ಟು ಪ್ರತ್ಯಕ್ಷವಾಗಿವೆ. (ರೋಮ್. ೧, ೨೦.)

ಯುಗಗಳ ಅರಸನೂ, ನಿರ್ಲಯನೂ, ಅದೃಶ್ಯನೂ, ಒಬ್ಬನೇ ಜ್ಞಾನಿಯೂ, ಆಗಿರುವ ದೇವರಿಗೆ ಯುಗಯುಗಾಂತರಗಳಿಗೂ ಘನವೂ ಮಹಿಮೆಯೂ ಆಗಲಿ. ಆಮೆನ್. (೧ ತಿಮ್. ೧, ೧೭.)

ಸೈನ್ಯಗಳ ಕರ್ತನು ಪರಿಶುದ್ಧನೇ ಪರಿಶುದ್ಧನೇ ಪರಿಶುದ್ಧನೇ. ಯೆಲ್ಲಾ ದೇಶಗಳು ಆತನ ಘನದಿಂದ ತುಂಬಿ ಅವೆ. (ಎಶ್. ೬, ೩.)

ಕರ್ತನೇ ನನ್ನನ್ನು ಪರಿಶೋಧಿಸಿ ತಿಳುಕೊಂಡಿದ್ದೀ. ನಾನು ಕೂಡ್ರುವದಂನೂ ಯೇಳುವದಂನೂ, ನೀನು ತಿಳು

ಕೊಂಡಿದ್ದೀ; ನನ್ನ ಆಲೋಚನೆಯನ್ನು ದೂರದಿಂದ ಗ್ರಹಿಸಿ ಕೊಂಡಿದ್ದೀ. ನಾನು ನಡೆಯುವದನ್ನೂ, ನಾನು ಮಲಗುವದನ್ನೂ, ನೀನು ಶೋಧಿಸಿದ್ದಿ; ನನ್ನ ಮಾರ್ಗಗಳೆಲ್ಲಾ ಗೊತ್ತು ಮಾಡಿದ್ದಿ; ಯಾಕಂದರೆ ಇಗೋ, ಕರ್ತನೇ ನನ್ನ ನಾಲಿಗೆಯಲ್ಲಿ ನಿನಗೆ ಪೂರ್ಣವಾಗಿ ತಿಳಿಯದ ಮಾತು ಒಂದಾದರೂ ಇಲ್ಲ. (ಕೀರ್ತ. ೧೩೯, ೧—೪.)

ನಾನು ನಿನ್ನ ಆತ್ಮಕ್ಕೆ ತಪ್ಪಿ, ಯೆಲ್ಲಿಗೆ ಹೋಗಲಿ? ನಿನ್ನ ಮುಖಕ್ಕೆ ತಪ್ಪಿ, ಯೆಲ್ಲಿಗೆ ಓಡಲಿ? ನಾನು ಆಕಾಶಕ್ಕೆ ಯೇರಿ ಹೋದರೆ, ನೀನು ಅಲ್ಲಿ ಇದ್ದೀ; ಪಾತಾಳವನ್ನು ನನ್ನ ಹಾಸಿಗೆಯಾಗಿ ಮಾಡಿದರೆ, ಇಗೋ ನೀನು ಅಲ್ಲಿ ಇದ್ದೀ. ಅರುಣೋದಯದ ರೆಕ್ಕೆಗಳನ್ನು ತಕ್ಕೊಂಡು, ಸಮುದ್ರದ ಕಟ್ಟಕಡೆಯಲ್ಲಿ ವಾಸ ಮಾಡಿದರೆ, ಅಲ್ಲಿಯೂ ನಿನ್ನ ಕೈ ನನ್ನನ್ನು ನಡಿಸಿ, ನಿನ್ನ ಬಲಗೈ ನನ್ನನ್ನು ಹಿಡಿಯುವದು. ನಿಶ್ಚಯವಾಗಿ ಕತ್ತಲೆಯು ನನ್ನನ್ನು ಕೌಚಿ ಕೊಳ್ಳುವದೆಂದು ಹೇಳಿದರೆ, ರಾತ್ರಿಯು ನನ್ನ ಸುತ್ತಲು ಬೆಳಗಾಗಿರುವದು. ಕತ್ತಲೆಯು ನಿನ್ನ ಮುಂದೆ ಕತ್ತಲಿಸುವದಿಲ್ಲಾ; ರಾತ್ರಿಯು ಹಗಲಿನ ಹಾಗೆ ಬೆಳಗಾಗುವದು; ಕತ್ತಲೂ ಬೆಳಕೂ ಒಂದೇ. (ಕೀರ್ತ. ೧೩೯, ೭—೧೨.)

ಕಾಣಲ್ಪಡುವವುಗಳು ತೋರುವಂಥವುಗಳಿಂದ ಉಂಟು ಮಾಡಲ್ಪಡದೆ, ಯುಗಗಳು ದೇವರ ವಾಕ್ಯದಿಂದ

ಸಿದ್ಧ ಮಾಡಲ್ಪಟ್ಟವೆಂದು ವಿಶ್ವಾಸದಿಂದ ಗ್ರಹಿಸುತ್ತೇವೆ. (ಇಬ್ರಿ. ೧೧, ೩.)

ಪರಲೋಕಗಳಲ್ಲಿಯೂ, ಭೂಮಿಯ ಮೇಲೆಯೂ, ಇರುವ ದೃಶ್ಯಾದೃಶ್ಯವಾದವುಗಳೂ ಯೆಲ್ಲಾ ಮಗನಲ್ಲಿ ಸೃಷ್ಟಿಸಲ್ಪಟ್ಟವು; ಸಿಂಹಾಸನಗಳಾಗಲಿ, ಒಡೆತನಗಳಾಗಲಿ, ದೊರೆತನಗಳಾಗಲಿ, ಅಧಿಕಾರಗಳಾಗಲಿ, ಯೆಲ್ಲವುಗಳು ಆತನ ಮುಖದಿಂದಲೂ ಆತನ ಕಡೆಗೂ ಸೃಷ್ಟಿಸಲ್ಪಟ್ಟವು. (ಕೊಲ. ೧, ೧೬.)

ಯೆರಡನೆ ಸೂತ್ರ. ರಕ್ಷಣೆಯ ವಿಷಯ.

ದೇವರ ಒಬ್ಬನಾಗಿ ಹುಟ್ಟಿದ ಮಗನಾಗಿರುವ ನಮ್ಮ ಕರ್ತನಾದ ಯೇಸು ಕ್ರಿಸ್ತನಲ್ಲಿಯೂ ನಂಬುತ್ತೇನೆ—ಯೆಂಬುವದು.

ಈತನೇ ನನ್ನ ಪ್ರಿಯ ಮಗನು; ಈತನಲ್ಲಿ ಆನಂದ ಪಡುತ್ತೇನೆ. (ಮತ್ಥ. ೩, ೧೭.)

ಆದಿಯಲ್ಲಿ ವಾಕ್ಯವು ಇತ್ತು. ಆ ವಾಕ್ಯವು ದೇವರ ಬಳಿಯಲ್ಲಿ ಇತ್ತು. ಆ ವಾಕ್ಯವು ದೇವರಾಗಿತ್ತು. ಅದು ಆದಿಯಲ್ಲಿ ದೇವರ ಬಳಿಯಲ್ಲಿ ಇತ್ತು, ಅದರ ಮುಖದಿಂದ ಯೆಲ್ಲಾ ಉಂಟಾಯಿತು. ಉಂಟಾದವುಗಳಲ್ಲಿ ಅದಕ್ಕೆ ಹೊರಗಾಗಿ ಒಂದಾದರು ಉಂಟಾಗಲಿ

ಲ್ಲಾ. ಅದರಲ್ಲಿ ಜೀವವು ಇತ್ತು. ಆ ಜೀವವು ಮನುಷ್ಯರ ಬೆಳಕಾಗಿತ್ತು. (ಯೋ. ೧, ೧—೪.)

ಕ್ರಿಸ್ತನು ಅದೃಶ್ಯನಾದ ದೇವರ ಪ್ರತಿ ರೂಪವೂ, ಯೆಲ್ಲಾ ಸೃಷ್ಟಿಯ ಚೊಚ್ಚಲವನೂ ಆಗಿದ್ದಾನೆ. (ಕೊಲ್. ೧, ೧೫.)

ಮೂರನೆ ಸೂತ್ರ.

ಆತನು ಪರಿಶುದ್ಧಾತ್ಮದಿಂದ ಗರ್ಭದಲ್ಲಿ ಬಂದು, ಮರಿಯಳೆಂಬ ಕನ್ಯಸ್ತ್ರೀಯಿಂದ ಪುಟ್ಟಿದನು—ಯೆಂಬುವದು.

ನಿನ್ನ ಪೆಂಡತಿಯಾದ ಮರಿಯಳನ್ನು ಅಂಗೀಕರಿಸುವದಕ್ಕೆ ಭಯ ಪಡ ಬೇಡ; ಯಾಕಂದರೆ ಆಕೆಯ ಗರ್ಭದಲ್ಲಿ ಇರುವಂಥಾದ್ದು ಪರಿಶುದ್ಧಾತ್ಮದಿಂದಾಗಿದೆ. ಆಕೆಯು ಮಗನನ್ನು ಪೆರುವಳು; ಆತನ ಪೆಸರಂನು ಯೇಸುವೆಂದು ಕರೆಯ ಬೇಕು; ಯಾಕಂದರೆ ಆತನು ತನ್ನ ಪ್ರಜೆಯನ್ನು ಅವರ ಪಾಪಗಳಿಂದ ರಕ್ಷಿಸುವನು. (ಮತ್ಥ್. ೧, ೨೦. ೨೧.)

ನಮಗೆ ಶಿಶುವು ಪುಟ್ಟಿತು, ನಮಗೆ ಮಗನು ಕೊಡಲ್ಪಟ್ಟನು; ದೊರೆತನವು ಆತನ ಪೆಗಲಿನ ಮೇಲೆ ಇರುವದು. ಆತನ ಪೆಸರನ್ನು ಆಶ್ಚರ್ಯ ಆಲೋ

ಚನೆ ಕರ್ತನೂ, ಪರಾಕ್ರಮಿಯಾದ ದೇವರೂ, ನಿತ್ಯ ತಂ·
ದೆಯೂ ಸಮಾಧಾನದ ಅಧಿಪತಿಯೂ ಯೆಂದು ಕರೆ
ಯುವರು. (ಎಶ್. ೯, ೬.)

ಕಾಲದ ಸಂಪೂರ್ಣತೆಯು ಬಂದಾಗ, ನಾವು ಪುತ್ರ
ಸ್ವೀಕಾರ ಹೊಂದುವ ಹಾಗೆ, ನ್ಯಾಯಪ್ರಮಾಣಕ್ಕೊಳಗಾ
ದವರನ್ನು ಕೊಂಡು ಕೊಳ್ಳುವದಕ್ಕೆ ದೇವರು ತನ್ನ ಮಗ
ನನ್ನು ಸ್ತ್ರೀಯಿಂದ ಹುಟ್ಟಿದವನಾಗಿಯೂ, ನ್ಯಾಯಪ್ರ
ಮಾಣಕ್ಕೊಳಗಾದವನಾಗಿಯೂ ಕಳುಹಿಸಿದನು. (ಗಲ್.
೪, ೪. ೫.)

ನಮ್ಮ ದೇವರ ಕರುಣೆಯ ಅಂತಃಕರಣದಿಂದ ಉ
ನ್ನತದಿಂದಾಗುವ ಉದಯವು ನಮ್ಮನ್ನು ದರ್ಶಿಸಿ, ನ
ಮ್ಮ ಪಾದಗಳನ್ನು ಸಮಾಧಾನದ ಮಾರ್ಗದಲ್ಲಿ ನೆಟ್ಟಗೆ
ಸೇರಿಸುವ ಹಾಗೆ, ಕತ್ತಲೆಯಲ್ಲಿಯೂ, ಮರಣದ ನೆರ
ಳಿನಲ್ಲಿಯೂ ಕೂತು ಕೊಂಡವರಿಗೆ ಬೆಳಗಿ ಅದೆ. (ಲೂ
ಕ್. ೧, ೭೮. ೭೯.)

ನಜರೇಥಿನವನಾದ ಯೇಸುವನ್ನು ದೇವರು ಪರಿ
ಶುದ್ಧಾತ್ಮದಿಂದಲೂ ಬಲದಿಂದಲೂ ಅಭಿಷೇಕಿಸಿದನು.
ಆತನ ಸಂಗಡ ದೇವರು ಇದ್ದದರಿಂದ, ಆತನು ಉ
ಪಕಾರ ಮಾಡುತ್ತಾ, ಪಿಶಾಚನಿಂದ ಬಲಕ್ಕಾರ ಪಟ್ಟವರೆ

ಲ್ಲರನ್ನು ಸ್ವಸ್ಥ ಮಾಡುತ್ತಾ ಸಂಚರಿಸಿದನು. (ಅಪೊ ಕ್ರಿ. ೧೦, ೩೮.)

ನಾಲ್ಕನೆ ಸೂತ್ರ.

ಪೊಂತಿಯ ಪಿಲಾತನ ಕಾಲದಲ್ಲಿ ಶ್ರಮೆ ಪಟ್ಟು, ಶಿಲುಬೆಗೆ ಹಾಕಲ್ಪಟ್ಟು, ಸತ್ತು, ಹೂಗಲ್ಪಟ್ಟನು—ಯೆಂಬುವದು.

ಕ್ರಿಸ್ತನು, ನಮ್ಮನ್ನು ದೇವರ ಸಮೀಪಕ್ಕೆ ಶೇರಿಸುವ ಹಾಗೆ, ನೀತಿವಂತನಾಗಿ ಅನೀತಿವಂತರಿಗೋಸ್ಕರ ಪಾಪಗಳ ನಿಮಿತ್ತವಾಂದು ಸಾರಿ ಶ್ರಮೆ ಪಟ್ಟು, ಮಾಂಸದಲ್ಲಿ ಕೊಲ್ಲಲ್ಪಟ್ಟು, ಆತ್ಮದಿಂದ ಬದುಕಿಸಲ್ಪಟ್ಟನು. (೧ ಪೇತ್ರ. ೩, ೧೮.)

ಕ್ರಿಸ್ತನು ದೇವರ ರೂಪದಲ್ಲಿದ್ದು, ದೇವರಿಗೆ ಸಮಾನವಾಗಿರುವದು ಕೊಳ್ಳೆ ಯೆಂದು ಯೆಣಿಸದೆ, ತನ್ನನ್ನು ಬರಿದು ಮಾಡಿ ಕೊಂಡು, ದಾಸನ ರೂಪ ತಕ್ಕೊಂಡು, ಮನುಷ್ಯರ ಹೋಲಿಕೆಯಾದವನಾಗಿ ಆಕಾರದಲ್ಲಿ ಮನುಷ್ಯನಾಗಿ ಕಾಣಲ್ಪಟ್ಟು, ತನ್ನನ್ನು ತಗ್ಗಿಸಿ ಕೊಂಡು, ಮರಣದ ಪರಿಯಂತರ, ಶಿಲುಬೆಯ ಮರಣದ ಪರಿಯಂತರವೇ, ವಿಧೇಯನಾದನು. (ಫಿಲಿಪ್ಪ. ೨, ೫—೮.)

ಅವರು ಮಹಿಮೆಯ ಕರ್ತನನ್ನು ಶಿಲುಬೆಗೆ ಹಾಕಿದರು. (೧ ಕೊರ್. ೨, ೮.)

ಕ್ರಿಸ್ತನು ನಮಗ್ಯೋಸ್ಕರ ಸತ್ತದರಿಂದ, ದ್ಯೇವರು ನಂಮ ಮ್ಯೇಲಿರುವ ತನ್ನ ಪ್ರೀತಿಯನ್ನು ಪ್ರತಿಷ್ಠೆ ಮಾಡುತ್ತಾನೆ. (ರ್ಯೋಮ್. ೫, ೮.)

ಕ್ರಿಸ್ತನು ಬರಹಗಳ ಪ್ರಕಾರ ನಮ್ಮ ಪಾಪಗಳ ನಿಮಿತ್ತ ಸತ್ತನು, ಮತ್ತು ಹೂಳಲ್ಪಟ್ಟನು; ಮತ್ತು ಬರಹಗಳ ಪ್ರಕಾರ ಮೂರನ್ಯೇ ದಿವಸದಲ್ಲಿ ಯೆಬ್ಬಿಸಲ್ಪಟ್ಟನು. (೧ ಕೊರ್. ೧೫, ೪.)

ಐದನೆ ಸೂತ್ರ.

ಪಾತಾಳಕ್ಕೆ ಇಳಿದು ಮೂರನೆ ದಿವಸದಲ್ಲಿ ಸತ್ತವರೊಳಗಿಂದ ಯೆದ್ದನು —ಯೆಂಬುವದು.

ಇಳಿದವನು ಸರ್ವವನ್ನು ತುಂಬಿಸುವ ಹಾಗೆ, ಯೆಲ್ಲಾ ಆಕಾಶಗಳ ಮ್ಯೇಲೆ ಯ್ಯೇರಿ ಹ್ಯೋದವನ್ಯೇ. (ಎಫ್. ೪, ೧೦.)

ಕ್ರಿಸ್ತನು ಆತ್ಮದಿಂದ ಬದುಕಿಸಲ್ಪಟ್ಟು, ಹ್ಯೋಗಿ, ನ್ಯೋಹನ ದಿವಸಗಳಲ್ಲಿ, ನಾವೆ ಕಟ್ಟುತ್ತಿರುವಾಗ, ದ್ಯೇವರ ದೀರ್ಘಶಾಂತಿಯು ಹಾಂದು ಸಾರಿ ಕಾದು ಕೊಂಡಿರುವಾಗ, ಮುಂಚೆ ಅವಿಧ್ಯೇಯರಾಗಿದ್ದಂಥ, ಶೆರೆಯಲ್ಲಿರುವಂಥ, ಆತ್ಮಗಳಿಗೆ ಸಾರಿದನು. (೧ ಪ್ಯೇತ್ರ. ೪, ೧೯.)

ಕ್ರಿಸ್ತನನ್ನು ದ್ಯೇವರು ಮೂರನ್ಯೇ ದಿವಸದಲ್ಲಿ ಯೆ

ಬ್ಬಿಸಿ, ಪ್ರತ್ಯಕ್ಷವಾಗ ಮಾಡಿದನು; ಸಮಸ್ತ ಪ್ರಜೆಗೆ ಅಲ್ಲಾ, ಮುಂಚೆ ದೇವರಿಂದ ಆದು ನೇಮಿಸಲ್ಪಟ್ಟು, ಆತನು ಸತ್ತವರೊಳಗಿಂದ ಯೆದ್ದ ಮೇಲೆ ಆತನ ಸಂಗಡ ಉಂಡು ಕುಡಿದ ಸಾಕ್ಷಿಗಳಿಗೆ ಮಾತ್ರವೇ. (ಅಪೊ ಕ್ರಿ. ೧೦, ೪೦. ೪೧.)

ಸತ್ತವರಿಗೂ ಬದುಕುವವರಿಗೂ ಕರ್ತನಾಗುವ ಹಾಗೆ, ಇದಕ್ಕೋಸ್ಕರ ಕ್ರಿಸ್ತನು ಸತ್ತು, ಯೆದ್ದು, ತಿರಿಗಿ ಬದುಕಿದನು. (ರೋಮ್. ೧೪, ೯.)

ಸತ್ತವರೊಳಗಿಂದ ಯೆಬ್ಬಿಸಲ್ಪಟ್ಟವನಾಗಿರುವ ಯೇಸು ಕ್ರಿಸ್ತನನ್ನು ನೆನಪು ಮಾಡಿಕೋ. (೨ ತಿಮ್. ೨, ೮.)

ಆರನೆ ಸೂತ್ರ.

ಪರಲೋಕಕ್ಕೆ ಯೇರಿ, ಅಲ್ಲಿ ತನ್ನ ಸರ್ವಶ್ರೇಷ್ಠನಾಗಿಯಾದ ತಂದೆಯಾಗಿರುವ ದೇವರ ಬಲಪಾರ್ಶ್ವದಲ್ಲಿ ಕೂತುಕೊಳ್ಳುತ್ತಾನೆ—ಯೆಂಬುವದು.

ಯೆಹೋವ ನನ್ನ ಕರ್ತನಿಗೆ ಹೇಳಿದ್ದೇನಂದರೆ—ನಾನು ನಿನ್ನ ಶತ್ರುಗಳನ್ನು ನಿನ್ನ ಪಾದ ಪೀಠವಾಗಿ ಇಡುವ ಪರಿಯಂತರ, ನನ್ನ ಬಲ ಪಾರ್ಶ್ವದಲ್ಲಿ ಕೂತುಕೋ. (ಕೀರ್ತ. ೧೧೦, ೧.)

ಕರ್ತನು ಅವರ ಸಂಗಡ ಮಾತಾಡಿದ ತರುವಾಯ, ಪರಲ್ಯೋಕಕ್ಕೆ ಯೆತ್ತಲ್ಪಟ್ಟು, ದ್ಯೇವರ ಬಲಪಾರ್ಶ್ವದಲ್ಲಿ ಕೂತು ಕೊಂಡನು. (ಮಾರ್ಕ. ೧೬, ೧೯.)

ದ್ಯೇವರು ಕ್ರಿಸ್ತನನ್ನು ಮ್ಯೇಲಕ್ಕೆ ಮ್ಯೇಲಾಗಿ ಯೆತ್ತಿ, ಯೆಲ್ಲಾ ಹೆಸರಿನ ಮ್ಯೇಲಿನ ಹೆಸರನ್ನು ಆತನಿಗೆ ದಯ ಮಾಡಿದನು; ಯ್ಯೇಸುವಿನ ಹೆಸರಿನಲ್ಲಿ ಪರಲ್ಯೋಕದಲ್ಲಿಯೂ, ಭೂಮಿಯಲ್ಲಿಯೂ, ಭೂಮಿಯ ಕೆಳಗೆಯೂ ಇರುವವರ ಮೊಣಕಾಲುಗಳೆಲ್ಲಾ ಮಣಿದು, ಯ್ಯೇಸು ಕ್ರಿಸ್ತನು ಕರ್ತನೆಂದು, ಯೆಲ್ಲಾ ನಾಲಿಗೆಗಳು ತಂದೆಯಾದ ದ್ಯೇವರ ಮಹಿಮೆಗಾಗಿ ಅರಿಕೆ ಮಾಡುವ ಹಾಗೆಯ್ಯೇ. (ಫಿಲಿಪ್ಪ್ಯ. ೨, ೯—೧೧.)

ಯ್ಯೇಳನೆ ಸೂತ್ರ.

ಅಲ್ಲಿಂದ ಇನ್ನು ಮುಂದೆ ಬಂದು, ಸತ್ತವರಿಗೂ ಬದುಕುವವರಿಗೂ ನ್ಯಾಯ ತೀರಿಸುವನು —ಯೆಂಬುವದು.

ದ್ಯೇವರನ್ನರಿಯದವರಿಗೂ, ನಮ್ಮ ಕರ್ತನಾದ ಯ್ಯೇಸು ಕ್ರಿಸ್ತನ ಸುವಾರ್ತೆಗೆ ವಿಧ್ಯೇಯರಾಗದವರಿಗೂ, ದಂಡನೆಯನ್ನು ಕೊಡುವ ಕರ್ತನಾದ ಯ್ಯೇಸು ತನ್ನ ಬಲದ ದೂತರ ಸಂಗಡ ಅಗ್ನಿ ಜ್ವಾಲೆಯಲ್ಲಿ ಪರಲ್ಯೋಕದಿಂದ ಪ್ರತ್ಯಕ್ಷವಾಗುವನು. (೨ ಥೆಸ್ಸ. ೧, ೬. ೭.)

ಒಬ್ಬೊಬ್ಬನು ಶರೀರದಲ್ಲಿ ಆದವುಗಳಂನು, ಒಳ್ಳೇದಾಗಲಿ ಕೆಟ್ಟದ್ದಾಗಲಿ, ಮಾಡಿದ ಪ್ರಕಾರ ಹೊಂದುವ ಹಾಗೆ, ನಾವೆಲ್ಲರು ಕ್ರಿಸ್ತನ ನ್ಯಾಯಾಸನದ ಮುಂದೆ ಕಾಣಿಸಿ ಕೊಳ್ಳ ಬೇಕು. (೨ ಕೊರ್. ೫, ೧೦.)

ಈಗ ಮಾನಸಾಂತರ ಪಡ ಬೇಕೆಂದು, ದೇವರು ಯೆಲ್ಲಾ ಕಡೆಯಲ್ಲಿರುವ ಯೆಲ್ಲಾ ಮನುಷ್ಯರಿಗೆ ಅಪ್ಪಣೆ ಕೊಡುತ್ತಾನೆ. ಯಾಕಂದರೆ ತಾನು ನೇಮಿಸಿದ ಮನುಷ್ಯನಿಂದ ಲೋಕಕ್ಕೆ ನೀತಿಯಾಗಿ ನ್ಯಾಯ ತೀರಿಸುವದಕ್ಕಿರುವ ದಿವಸವನ್ನು ನಿಷ್ಕರ್ಷೆ ಮಾಡಿದ್ದಾನೆ. (ಅಪೊ ಕ್ರಿ. ೧೭, ೩೦. ೩೧.)

ಮನೇ ಯಜಮಾನನು ಸಾಯಂಕಾಲದಲ್ಲಿಯೋ, ಮಧ್ಯ ರಾತ್ರಿಯಲ್ಲಿಯೋ, ಕೋಳಿ ಕೂಗುವಾಗಲೋ ಬೆಳಿಗ್ಗೆಯೋ ಯಾವಾಗ ಬರುತ್ತಾನೋ, ನಿಮಗೆ ತಿಳಿಯದ ಕಾರಣ, ಆತನು ಥಗ್ಗನೆ ಬಂದು, ನೀವು ನಿದ್ರೆ ಮಾಡುವದನ್ನು ಕಾಣದ ಹಾಗೆ, ಯೆಚ್ಚರಿಕೆಯಾಗಿರಿ; (ಮಾರ್ಕ. ೧೩, ೩೫. ೩೬.)

ಯೆಂಟನೆ ಸೂತ್ರ.

ಪರಿಶುದ್ಧಾತ್ಮನಲ್ಲಿಯೂ ನಂಬುತ್ತೇನೆ—ಯೆಂಬುವದು.

ಅನನೀಯನೇ, ನೀನು ಪರಿಶುದ್ಧಾತ್ಮಕ್ಕೆ ಸುಳ್ಳಾಡಿ, ಆ

ಹೊಲದ ಕ್ರಯದಲ್ಲಿ ಒಂದು ಪಾಲು ಮಡಗಿ ಕೊಳ್ಳುವ ಹಾಗೆ, ಸೈತಾನನು ಯಾಕೆ ನಿನ್ನ ಹೃದಯವನ್ನು ತುಂಬಿಸಿದ್ದಾನೆ? ಮನುಷ್ಯರಿಗಲ್ಲ, ದೇವರಿಗೆ ಸುಳ್ಳಾಡಿದಿ. (ಅಪೊ ಕ್ರಿ. ೫, ೩. ೪.)

ನಾನು ತಂದೆಯ ಬಳಿಯಿಂದ ನಿಮಗೆ ಕಳುಹಿಸುವಂಥ, ತಂದೆಯ ಬಳಿಯಿಂದ ಹೊರಡುವಂಥ, ಸತ್ಯದ ಆತ್ಮವೆಂಬ ಆದರಿಕನು ಬಂದಾಗ, ಆತನೇ ನನ್ನ ವಿಷಯ ಸಾಕ್ಷಿ ಕೊಡುವನು. (ಯೋ. ೧೫, ೨೬.)

ಒಂಬತ್ತನೆ ಸೂತ್ರ.

ಒಂದೇ ಪರಿಶುದ್ಧ ಕ್ರೈಸ್ತಸಭೆಯೂ, ಪರಿಶುದ್ಧರ ಅನ್ಯೋನ್ಯವೂ—ಯೆಂಬುವದು.

ನೀವು ಇನ್ನು ಅನ್ಯರೂ ಪರವಾಸಿಗಳೂ ಅಲ್ಲ, ಪರಿಶುದ್ಧರ ಸಂಗಡ ಪಟ್ಟವಾಸಿಗಳೂ, ದೇವರ ಮನೆತನದವರೂ ಆಗಿ, ಅಪೊಸ್ತಲರೂ, ಪ್ರವಾದಿಗಳೂ ಇವರ ಅಸ್ತಿವಾರದ ಮೇಲೆ ಕಟ್ಟಲ್ಪಟ್ಟವರಾಗಿದ್ದೀರಿ; ಯೇಸು ಕ್ರಿಸ್ತನು ತಾನೇ ಮೂಲೆ ಕಲ್ಲಾಗಿದ್ದಾನೆ. ಆತನಲ್ಲಿ ಕಟ್ಟುವಿಕೆ ಯೆಲ್ಲಾ ಚನ್ನಾಗಿ ಜೋಡಿಸಲ್ಪಟ್ಟು, ಕರ್ತನಲ್ಲಿ ಪರಿಶುದ್ಧ ಮಂದಿರವಾಗ ಬೆಳೆಯುತ್ತದೆ; ಆತನಲ್ಲಿ ನೀವೂ, ದೇವರಿಗೆ ಆತ್ಮದಿಂದ ವಾಸಸ್ಥಾನವಾಗುವ ಹಾಗೆ, ಕೂಡ ಕಟ್ಟಲ್ಪಟ್ಟಿದ್ದೀರಿ. (ಎಫ್. ೨, ೧೯—೨೨.)

ಆತ್ಮದ ಐಕ್ಯವನ್ನು ಸಮಾಧಾನದ ಬಂಧದಲ್ಲಿ ಕಾಪಾಡಲಿಕ್ಕೆ ಜಾಗ್ರತೆ ಪಡ ಬೇಕು. ಶರೀರವೂ ಒಂದೇ, ಆತ್ಮವೂ ಒಂದೇ—ನೀವು ನಿಮ್ಮ ಕರೆಯುವಿಕೆಯ ಒಂದೇ ನಿರೀಕ್ಷೆಯಲ್ಲಿ ಕರೆಯಲ್ಪಟ್ಟ ಹಾಗೆಯೇ— ಕರ್ತನೂ ಒಬ್ಬನೇ, ವಿಶ್ವಾಸವೂ ಒಂದೇ, ಸ್ನಾನವೂ ಒಂದೇ, ಯೆಲ್ಲರ ತಂದೆಯಾದ ದೇವರು ಒಬ್ಬನೇ; ಆತನು ಯೆಲ್ಲರ ಮೇಲೆಯೂ, ಯೆಲ್ಲರ ಮುಖದಿಂದಲೂ, ನಿಂಮೆಲ್ಲರಲ್ಲಿಯೂ, ಇದ್ದಾನೆ. (ಎಫ್. ೪, ೩—೬)

ಹತ್ತನೆ ಸೂತ್ರ.

ಪಾಪಪರಿಹಾರವೂ—ಯೆಂಬುವದು.

ಯಾವನ ದ್ರೋಹವು ಪರಿಹಾರವಾಗಿದೆಯೋ, ಯಾವನ ಪಾಪವು ಮುಚ್ಚಿದೆಯೋ, ಅವನು ಭಾಗ್ಯವಂತನು. ಕರ್ತನು ಯಾವನಿಗೆ ಅಕ್ರಮವನ್ನು ಯೆಣಿಸುವದಿಲ್ಲವೋ, ಯಾವನ ಆತ್ಮದಲ್ಲಿ ಮೋಸ ಇರುವದಿಲ್ಲವೋ ಆ ಮನುಷ್ಯನೇ ಭಾಗ್ಯವಂತನು. (ಕೀರ್ತ. ೩೨, ೧. ೨.)

ಕ್ರಿಸ್ತನಲ್ಲಿ ಆತನ ರಕ್ತದಿಂದಾದ ವಿಮೋಚನೆಯಾಗಿರುವ ಅಕ್ರಮಗಳ ಪರಿಹಾರವು ನಮಗುಂಟು. (ಎಫ್. ೧, ೭.)

ಪೂಂನ್ನಾಂದನೆ ಸೂತ್ರ.

ಶರೀರದ ಪುನರುಥ್ಥಾನವೂ—ಯೆಂಬುವದು.

ಸಮಾಧಿಗಳಲ್ಲಿರುವವರೆಲ್ಲರು ದೇವರ ಮಗನ ಶಬ್ಧವನ್ನು ಕೇಳುವ ಘಳಿಗೆ ಬರುತ್ತದೆ. ಆಗಲು ವಾಳ್ಲೆಯವುಗಳನ್ನು ಮಾಡಿದವರು ಜೀವದ ಪುನರುಥ್ಥಾನಕ್ಕೂ, ಕೆಟ್ಟವುಗಳನ್ನು ಮಾಡಿದವರು ಆಗ್ನೆಯ ಪುನರುಥ್ಥಾನಕ್ಕೂ, ಪೂರಗೆ ಬರುವರು. (ಯೋ. ೫, ೨೮. ೨೯.)

ಯಾವ ಪ್ರಕಾರ ಆದಾಮನಲ್ಲಿ ಯೆಲ್ಲರು ಸಾಯುತ್ತಾರ್ಯ, ಅದೇ ಪ್ರಕಾರ ಕ್ರಿಸ್ತನಲ್ಲಿ ಯೆಲ್ಲರು ಬದುಕಿಸಲ್ಪಡುವರು. ಆದರೆ ವಾಬ್ಬಾಬ್ಬನು ಸ್ವಂಶ ಕ್ರಮದಲ್ಲಿ; ಪ್ರಥಮ ಘಲ ಕ್ರಿಸ್ತನು; ಶರುವಾಯ ಆಶನ ಬರುವಿಕೆಯಲ್ಲಿ ಕ್ರಿಸ್ತನವರು. ಆ ಮ್ಯೇಲೆ ಅಂತ್ಯವು—ಆಶನು ಯೆಲ್ಲಾ ದಾರೆಶನವನ್ನೂ ಯೆಲ್ಲಾ ಅಧಿಕಾರ ಶಕ್ತಿಗಳನ್ನು ಶೆಗದು ಪೂಕಿ, ಶಂದೆಯಾದ ದೇವರಿಗೆ ರಾಜ್ಯವಂನು ವಾಪ್ಪಿಸಿದಾಗಲ್ಯೇ. (೧ ಕಾರ್. ೧೫, ೨೨—೨೪.)

ಪಾಂನೆರಡನೆ ಸೂತ್ರ.

ನಿತ್ಯಜೀವವೂ ಉಂಟೆಂದು ನಂಬುತ್ತೇನೆ—ಯೆಂಬುವದು.

ನನ್ನ ಕುರಿಗಳು ನನ್ನ ಶಬ್ದವಂನು ಕ್ಯೇಳುತ್ತವೆ.

ನಾನು ಅವುಗಳನ್ನು ತಿಳಿಯುತ್ತೇನೆ. ಅವು ನನ್ನನ್ನು ಹಿಂಬಾಲಿಸುತ್ತವೆ. ಮತ್ತು ನಾನು ನಿತ್ಯಜೀವವನ್ನು ಅವುಗಳಿಗೆ ಕೊಡುತ್ತೇನೆ. ಅವು ಯೆಂದೆಂದಿಗೂ ನಾಶವಾಗವು. ಮತ್ತು ಯಾವನೂ ಅವುಗಳನ್ನು ನನ್ನ ಕೈಯೊಳಗಿಂದ ಕಸಕೊಳ್ಳನು. (ಯೋ. ೧೦, ೨೭. ೨೮.)

ಭೂಮಿಯ ಧೂಳಿನಲ್ಲಿ ಮಲಗುವ ಅನೇಕರು ಯೇಳುವರು. ಇವರು ನಿತ್ಯಜೀವಕ್ಕೆ, ಅವರು ನಿಂದೆಗೂ ನಿತ್ಯಹೇಸಿಕೆಗೂ. (ದಾನಿಯೇಲ್. ೧೨, ೨.)

ನೀವು ಸತ್ತವರಾಗಿದ್ದೀರಿ; ಮತ್ತು ನಿಂಮ ಜೀವವು ಕ್ರಿಸ್ತನ ಸಂಗಡ ದೇವರಲ್ಲಿ ಅಡಗಿದೆ. ನಂಮ ಜೀವವಾದ ಕ್ರಿಸ್ತನು ಪ್ರತ್ಯಕ್ಷವಾಗುವಾಗ್ಯೆ, ನೀವು ಸಹ ಆತನ ಸಂಗಡ ಮಹಿಮೆಯಲ್ಲಿ ಪ್ರತ್ಯಕ್ಷವಾಗುವಿರಿ. (ಕೊಲ್. ೩, ೩. ೪.)

ವಿಶ್ವಾಸದ ಉಪಯೋಗದ ವಿಷಯ.

ಕ್ರಿಯೆ ಮಾಡದೆ, ಭಕ್ತಿಹೀನನಿಗೆ ನೀತಿ ನಿರ್ಣಯಿಸುವವನಲ್ಲಿ ವಿಶ್ವಾಸವಿಡುವವನಿಗೆ, ತಂನ ವಿಶ್ವಾಸವು ನೀತಿಯೆಂದು ಯೆಣಿಸಲ್ಪಡುವದು. (ರೋಮ್. ೪, ೫.)

ಪಾಪದ ಅಕ್ರಮದಿಂದ ಯೆಲ್ಲಾ ಮನುಷ್ಯರಿಗೆ

ಹ್ಯಾಗೆ ಆಜ್ಞೆ ನಿರ್ಣಯಕ್ಕಾಯಿತೋ, ಹಾಗೆಯೇ ಒಬ್ಬನ ನೀತಿಯಿಂದ ಯೆಲ್ಲಾ ಮನುಷ್ಯರಿಗೆ ಜೀವದ ನೀತಿ ನಿರ್ಣಯಕ್ಕಾಯಿತು. (ರೋಮ್. ೫, ೧೮.)

ಕ್ರಿಸ್ತ ಯೇಸುವಿನಲ್ಲಿ ಛೇದನೆಯಾದರೂ, ಅಛೇದನೆಯಾದರೂ, ಯೇನು ಉಪಯೋಗಿಸುವದಿಲ್ಲ; ಆದರೆ ಪ್ರೀತಿಯಿಂದ ಯತ್ನಿಸುವ ವಿಶ್ವಾಸವೇ. (ಗಲ್. ೫, ೬.)

ಮೂರನೆ ಪರ್ವವು.

ಪ್ರಾರ್ಥನೆಯ ವಿಷಯ.

ಕರ್ತನು ಬೋಧಿಸಿದ ಪ್ರಾರ್ಥನೆಯು.

ಪರಲೋಕಗಳಲ್ಲಿರುವ ನಂಮ ತಂದೆಯೇ, ನಿಂನ ನಾಮವು ಪರಿಶುದ್ಧವಾಗಲಿ. ನಿಂನ ರಾಜ್ಯವು ಬರಲಿ. ನಿಂನ ಚಿತ್ತವು ಪರಲೋಕದಲ್ಲಿ ಆಗುವ ಪ್ರಕಾರ ಭೂಮಿಯ ಮೇಲೆಯೂ ಆಗಲಿ. ಬೇಕಾದ ನಂಮ ರೊಟ್ಟಿಯನ್ನು ಈ ಹೊತ್ತು ನಮಗೆ ಕೊಡು. ನಾವು ನಂಮ ಸಾಲಗಾರರಿಗೆ ಬಿಡುವ ಪ್ರಕಾರ ನಂಮ ಸಾಲಗಳನ್ನು ನಮಗೆ ಬಿಡು. ನಂಮನ್ನು ಶೋಧನೆಯಲ್ಲಿ ಸೇರಿಸದೆ, ನಂಮನ್ನು ಕೇಡಿನೊಳಗಿಂದ ತಪ್ಪಿಸು. ಯಾಕಂದರೆ ರಾಜ್ಯವೂ, ಬಲವೂ, ಮಹಿಮೆಯೂ, ಯುಗ

ಯುಗಾಂತರಗಳ ವರಿಗೂ ನಿಂನವಾಗಿವೆ. ಆಮೆನ್. (ಮತ್ಥ್. ೬, ೯—೧೩.)

ಪ್ರೀತಿಕೆ.

ಪರಲ್ಯೋಕಗಳಲ್ಲಿರುವ ನಮ್ಮ ತಂದೆಯ್ಯೇ—ಯೆಂಬುವದು.

ಪರಲ್ಯೋಕ ಭೂಲ್ಯೋಕಗಳಲ್ಲಿ ಇರುವ ಯೆಲ್ಲಾ ಕುಟುಂಬಕ್ಕೆ ಪೆಸರಿಡುವಂಥ ತಂದೆಯು ದ್ಯೇವರ್ಯೆ. (ಎಫ್. ೩, ೧೫.)

ನನ್ನ ಬಂಡೆಯೂ, ನನ್ನ ವಿಮ್ಯೋಚಕನೂ, ಆಗಿರುವ ಕರ್ತನ್ಯೆ, ನನ್ನ ಬಾಯಿಯ ಮಾತುಗಳೂ, ನಿನ್ನ ಮುಂದಿನ ನನ್ನ ಹೃದಯದ ಧ್ಯಾನವೂ, ನಿನಗೆ ಆನಂದವಾಗಿರಲಿ. (ಕೀರ್ತ್. ೧೯, ೧೪.)

ನಿಶ್ಚಯವಾಗಿ ನಿಶ್ಚಯವಾಗಿ ನಿಮಗೆ ಪ್ಯೋಳುತ್ತ್ಯೇನೆ—ನೀವು ನನ್ನ ಪೆಸರಿನಲ್ಲಿ ತಂದೆಯನ್ನು ಬ್ಯೇಡಿ ಕೊಳ್ಳುವದ್ದೆಲ್ಲಾ ನಿಮಗೆ ಕಾಡುವನು. (ಯೋ. ೧೬, ೨೩.)

ಯೆಡೆಬಿಡದೆ ಪ್ರಾರ್ಥಿಸಿರಿ. (೧ ಥೆಸ್. ೫, ೧೭.)

ಮೊದಲನೆ ಬಿಂನಪ.

ನಿನ್ನ ನಾಮವು ಪರಿಶುದ್ಧವಾಗಲಿ—ಯೆಂಬುವದು.

ಕರ್ತನಾದ ದ್ಯೇವರನ್ನು ನಿಮ್ಮ ಹೃದಯಗಳಲ್ಲಿ ಪರಿಶುದ್ಧ ಮಾಡಿರಿ. (೧ ಪ್ಯೇತ್ರ. ೩, ೧೫.)

ಪರಿಶುದ್ಧ ತಂದೆಯೇ! ನೀನು ನನಗೆ ಕೊಟ್ಟವರಂನು, ಅವರು ನಂಮ ಹಾಗೆಯೇ ಒಂದಾಗಿರುವ ಹಾಗೆ, ನಿನ್ನ ಹೆಸರಿನಲ್ಲಿ ಕಾಪಾಡು. ನಿನ್ನ ಸತ್ಯದಿಂದ ಅವರನ್ನು ಪರಿಶುದ್ಧ ಮಾಡು; ನಿಂನ ವಾಕ್ಯವು ಸತ್ಯವೇ. (ಯೋ. ೧೭, ೧೧. ೧೭.)

ಕರ್ತನೇ, ನಿನಗೆ ಭಯ ಪಡದೆ, ನಿಂನ ಹೆಸರಂನು ಮಹಿಮೆ ಪಡಿಸದೆ ಇರುವವರ್ಯಾರು? ಯಾಕಂದರೆ ನೀನೊಬ್ಬನೇ ಪರಿಶುದ್ಧನು. (ಪ್ರಕ್. ೧೫, ೪.)

ನಾನೇ ಪರಿಶುದ್ಧನಾಗಿರುವದರಿಂದ ನೀವೂ ಪರಿಶುದ್ಧರಾಗಿರಿ, ಯೆಂದು ಬರೆದದೆ. (೧. ಪೇತ್ರ. ೧, ೧೬.)

ಯೆರಡನೆ ಬಿಂನಹ.

ನಿನ್ನ ರಾಜ್ಯವು ಬರಲಿ—ಯೆಂಬುವದು.

ಯೆಲ್ಲಾ ಯುಗಗಳಿಗೆ ನಿನ್ನ ರಾಜ್ಯವು ರಾಜ್ಯವಾಗಿದೆ; ನಿನ್ನ ಧೊರೆತನವು ಯೆಲ್ಲಾ ತಲತಲಾಂತರಗಳಲ್ಲಿ ಇರುವದು. (ಕೀರ್ತ. ೧೪೫, ೧೩.)

ಸಮಸ್ತ ಆಕಾಶದ ಕೆಳಗಿರುವ ರಾಜ್ಯವೂ, ದೊರೆತನವೂ, ಮಹತ್ತವೂ, ಮಹೋನ್ನತನ ಪರಿಶುದ್ಧ ಪ್ರಜೆಗೆ ಕೊಡಲ್ಪಡುವದು. ಆತನ ರಾಜ್ಯವು ನಿತ್ಯರಾಜ್ಯವಾಗಿದೆ. ಯೆಲ್ಲಾ ದೊರೆತನವು ಆತನಿಗೆ ಸೇವೆ ಮಾಡಿ, ಆಧೀನವಾಗಿರುವದು. (ದಾನ್. ೭, ೨೭.)

ದೇವರ ರಾಜ್ಯವೇ ಆಹಾರವೂ ಪಾನವೂ ಅಲ್ಲ, ನೀತಿಯೂ, ಸಮಾಧಾನವೂ, ಪರಿಶುದ್ಧಾತ್ಮದಿಂದಾಗುವ ಸಂತೋಷವೂ. ಯಾಕಂದರೆ ಇವುಗಳಲ್ಲಿ ಕ್ರಿಸ್ತನಿಗೆ ಸೇವೆ ಮಾಡುವವನು ದೇವರಿಗೆ ಸಮರ್ಪಕನಾಗಿಯೂ, ಮನುಷ್ಯರಿಗೆ ಪರೀಕ್ಷಿತನಾಗಿಯೂ, ಇದ್ದಾನೆ. (ರೋಮ. ೧೪, ೧೭. ೧೮.)

ಮೂರನೆ ಬಿಂನಹ.

ನಿನ್ನ ಚಿತ್ತವು ಪರಲೋಕದಲ್ಲಿ ಆಗುವ ಪ್ರಕಾರ ಭೂಮಿಯ ಮೇಲೆಯೂ ಆಗಲಿ—ಯೆಂಬುವದು.

ನನ್ನನ್ನು ಕಳುಹಿಸಿದವನ ಚಿತ್ತವು ಇದೇ—ಮಗನಂನು ನೋಡಿ, ಆತನಲ್ಲಿ ವಿಶ್ವಾಸವಿಡುವವರೆಲ್ಲರಿಗೆ ನಿತ್ಯಜೀವವು ಇರ ಬೇಕೆಂಬುವದು. ಮತ್ತು ನಾನು ಕಡೇ ದಿವಸದಲ್ಲಿ ಅವನನ್ನು ಯೆಬ್ಬಿಸುವೆನು. (ಯೋ. ೬, ೪೦.)

ಈ ಯುಗಕ್ಕೆ ಅನುಕೂಲವಾಗದೆ, ನಿಂಮ ಮನಸ್ಸಿನ ನವೀಕರಣದಿಂದ ರೂಪಾಂತರವಾಗಿರಿ; ಒಳ್ಳೇದೂ, ಸಮರ್ಪಕವೂ, ಪೂರ್ಣವೂ, ಆಗಿರುವ ದೇವರ ಚಿತ್ತವು ಯೇನೆಂದು ನೀವು ಪರೀಕ್ಷಿಸುವದಕ್ಕೋಸ್ಕರವೇ. (ರೋಮ. ೧೨, ೨.)

ಸಮಾಧಾನದ ದ್ಯೇವರು, ನ್ರೀವು ಆತನ ಚಿತ್ತವಂ ನು ಮಾಡುವ ಹಾಗೆ, ನಿಂಮನ್ನು ಸಕಲ ಸತ್‌ಕ್ರಿಯೆ ಗಳಲ್ಲಿ ಸಂಪೂರ್ಣರಾಗ ಮಾಡಿ, ತಂನ ಸಮ್ಮುಖದಲ್ಲಿ ಸಮರ್ಪಕವಾದದ್ದನ್ನ ನಿಂಮಲ್ಲಿ ಯ್ಯೇಸು ಕ್ರಿಸ್ತನ ಮು ಖಾಂತರ ಉಂಟು ಮಾಡಲಿ. ಆತನಿಗೆ ಯುಗಯು ಗಾಂತರಗಳಿಗೂ ಮಹಿಮೆ. ಆಮೆನ್. (ಇಬ್ರಿ. ೧೩, ೨೦. ೨೧.)

ನಾಲ್ಕನೆ ಬಿಂನಹಾ.

ಬ್ಯೇಕಾದ ನಮ್ಮ ರೊಟ್ಟಿಯನ್ನು ಈ ಹೊತ್ತು ನಮ ಗೆ ಕೊಡು—ಯೆಂಬುವದು.

ತುಷ್ಟಿ ಸಹಿತವಾದ ಭಕ್ತಿಯು ದೊಡ್ಡ ಲಾಭವಾಗೆ ದೆ. ಯಾಕಂದರೆ, ನಾವು ಲ್ಯೋಕದಲ್ಲಿ ಯ್ಯೇನು ತಕ್ಕೊಂ ಡು ಬರಲಿಲ್ಲಾ, ಯ್ಯೇನು ತಕ್ಕೊಂಡು ಹ್ಯೋಗಲಾರೆವೆಂ ಬುವದು ಪ್ರಕಟ. ಆದದರಿಂದ ನಮಗೆ ಅಂನ ವ ಸ್ತ್ರವಿದ್ದರೆ, ಅದು ಸಾಕೆಂದ್ಯೆಣಿಸುವ. ಆದರೆ ಐಶ್ವರ್ಯ ವಂತರಾಗ ಇಚ್ಛೈಸುವವರು ಶ್ಯೋಧನೆಯಲ್ಲಿಯೂ, ಉ ರುಲಿನಲ್ಲಿಯೂ, ಬುದ್ಧಿಯಿಲ್ಲದ ನಷ್ಟವುಳ್ಳ ಅನ್ಯೇಕ ಆ ಶೆಗಳಲ್ಲಿಯೂ ಬ್ಯೀಳುತ್ತಾರೆ; ಅವು ಮನುಷ್ಯರನ್ನು ನಾ ಶನದಲ್ಲಿಯೂ, ಲಯದಲ್ಲಿಯೂ ಮುಣುಗಿಸುತ್ತವೆ. ಯಾಕಂದರೆ ದ್ರವ್ಯದ ಆಶೆಯು ಸಕಲ ಕ್ಯೇಡುಗಳ ಬ್ಯೇ ರಾಗಿದೆ. (೧. ತಿಮ್. ೬, ೬—೧೦.)

ರೊಟ್ಟಿಯಿಂದ ಮಾತ್ರವಲ್ಲ, ದೇವರ ಬಾಯೊಳಗಿಂದ ಹೊರಡುವ ಪ್ರತಿಯೊಂದು ಮಾತಿನಿಂದ ಮನುಷ್ಯನು ಬದುಕುವನು. (ಮತ್ತ. ೪, ೪.)

ಕರ್ತನು ಮನೆಯನ್ನು ಕಟ್ಟದೆ ಇದ್ದರೆ, ಅದನ್ನು ಕಟ್ಟುವವರು ವ್ಯರ್ಥವಾಗಿ ಕಷ್ಟ ಪಡುತ್ತಾರೆ. ಕರ್ತನು ಪಟ್ಟಣವನ್ನು ಕಾಪಾಡದೆ ಇದ್ದರೆ ಕಾಯುವವನು ವ್ಯರ್ಥವಾಗಿ ಯೆಚ್ಚರವಾಗಿದ್ದಾನೆ. ಬೆಳಿಗ್ಗೆ ಯೇಳುವವರೇ, ಮಲಗುವದಕ್ಕೆ ತಡ ಮಾಡುವವರೇ, ವ್ಯಥೆಗಳ ರೊಟ್ಟಿಯನ್ನು ತಿನ್ನುವವರೇ, ಅದು ನಿಮಗೆ ವ್ಯರ್ಥವೇ. ಆತನು ಹಾಗೆಯೇ ತನ್ನ ಪ್ರಿಯನಿಗೆ ನಿದ್ರೆ ಮಲ್ಗ ಕಾಡುತ್ತಾನೆ. (ಕೀರ್ತ. ೧೨೭, ೧—೨.)

ಐದನೆ ಬಿನಹ.

ನಾವು ನಮ್ಮ ಸಾಲಗಾರರಿಗೆ ಬಿಡುವ ಪ್ರಕಾರ ನಮ್ಮ ಸಾಲಗಳನ್ನು ನಮಗೆ ಬಿಡು—ಯೆಂಬುವದು.

ಕರ್ತನೇ! ಕರ್ತನೇ! ಅಂತಃಕರಣೆ, ದಯ, ದೀರ್ಘಶಾಂತಿ, ಬಹು ಕೃಪೆ, ನಂಬಿಕೆಯುಳ್ಳ ದೇವರೂ, ಸಹಸ್ರಗಳಿಗೆ ಕೃಪೆಯನ್ನು ಕೈಕೊಳ್ಳುವವನೂ, ಅಕ್ರಮ, ಅಪರಾಧ, ಪಾಪ ಪರಿಹರಿಸುವವನೂ; ಆದರೆ ಯೆಂದಿಗೂ ಕ್ಷಮಿಸುವವನಲ್ಲಾ, ತಂದೆಗಳ ಅಕ್ರಮವನ್ನು ಮಕ್ಕಳಲ್ಲಿಯೂ, ಮಕ್ಕಳ ಮಕ್ಕಳಲ್ಲಿಯೂ, ಮೂರನೇ

ನಾಲ್ಕನೆ ತಲಾಂತರದ ವರಿಗೂ ಶಿಕ್ಷಿಸುವವನು. (ಹೊರಡೋಣ ೩೪, ೬. ೭.)

ಆದಕಾರಣ, ದೇವರು ಆದು ಕೊಂಡವರೂ, ಪರಿಶುದ್ಧರೂ ಪ್ರಿಯರೂ ಆಗಿರುವವರ ಹಾಗೆ, ಕನಿಕರಗಳ ಕರುಳುಗಳಂನೂ, ದಯವಂನೂ, ದೀನ ಮನಸ್ಸಂನೂ, ಸಾತ್ವಿಕತ್ವವಂನೂ, ದೀರ್ಘಶಾಂತಿಯಂನೂ ಧರಿಸಿ ಕೊಂಡು, ಒಬ್ಬರಂನೊಬ್ಬರು ತಾಳಿಕೊಂಡು, ಒಬ್ಬನಿಗೆ ಮತ್ತೊಬ್ಬನ ಮೇಲೆ ತಪ್ಪು ಹೊರಿಸುವ ಕಾರಣವಿದ್ದರೆ ಕ್ರಿಸ್ತನು ಹ್ಯಾಗೆ ನಿಮಗೆ ಮಂನಿಸಿದನೋ, ಹಾಗೆಯೇ ನೀವು ಒಬ್ಬರಿಗೊಬ್ಬರು ಮನ್ನಿಸಿರಿ. (ಕೊಲ್. ೩, ೧೨. ೧೩.)

ನೀವು ಮನುಷ್ಯರಿಗೆ ಅವರ ತಪ್ಪುಗಳನ್ನು ಮನ್ನಿಸಿದರೆ, ಪರಲೋಕದವನಾದ ನಿಮ್ಮ ತಂದೆಯು ನಿಮಗೂ ಮನ್ನಿಸುವನು. ಆದರೆ ನೀವು ಮನುಷ್ಯರಿಗೆ ಅವರ ತಪ್ಪುಗಳನ್ನು ಮನ್ನಿಸದೆ ಇದ್ದರೆ, ನಿಮ್ಮ ತಂದೆಯು ಸಹಾ ನಿಂಮ ತಪ್ಪುಗಳನ್ನು ಮನ್ನಿಸನು. (ಮತ್ಥ. ೬, ೧೪. ೧೫.)

ಆರನೆ ಬಿಂನಹ.

ನಂಮಂನು ಶೋಧನೆಯಲ್ಲಿ ಸೇರಿಸದೆ—ಯೆಂಬುವದು.

ಯಾವನಾದರೂ, ಶೋಧಿಸಲ್ಪಡುವಾಗ, ದೇವರಿಂದ ಶೋಧಿಸಲ್ಪಡುತ್ತೇನೆಂದು ಹೇಳದಿರಲಿ. ಯಾಕಂದರೆ

ದೇವರು ಕೇಡುಗಳಿಂದ ಶೋಧಿಸಲ್ಪಡದವನು, ತಾನು ಒಬ್ಬನಂನು ಶೋಧಿಸುವದಿಲ್ಲ. ಆದರೆ ಒಬ್ಬನು ಸ್ವಂತ ಇಚ್ಛೆಯಿಂದ ಯೆಳೆಯಲ್ಪಟ್ಟು, ಮರಳುಗೊಂಡು, ಶೋಧಿಸಲ್ಪಡುತ್ತಾನೆ. ಆ ಮೇಲೆ ಇಚ್ಛೆಯು ಗರ್ಭವನ್ನು ಧರಿಸಿ ಪಾಪವನ್ನು ಹೆರುತ್ತದೆ; ಪಾಪವು ಸಂಪೂರ್ಣವಾದ ಮೇಲೆ ಮರಣವನ್ನು ಹಡಿಯುತ್ತದೆ. (ಯಾಕೋಬ್ ೧, ೧೩—೧೫.)

ಸೀಮೋನನೇ! ಸೀಮೋನನೇ! ಇಗೋ, ಸೈತಾನನು ನಿಂಮಂನು ಗೋಧಿಯ ಹಾಗೆ ಕೇರುವದಕ್ಕೆ ಇಚ್ಛೈಸಿದ್ಧಾನೆ. ಆದರೆ ನಿಂನ ವಿಶ್ವಾಸವು ಅಳಿದು ಹೋಗದ ಹಾಗೆ ನಿನಗೋಸ್ಕರ ನಾನು ಬೇಡಿ ಕೊಂಡಿದ್ಧೇನೆ. (ಲೂಕ್. ೨೨, ೩೧. ೩೨.)

ನಂನ ಮಗನೇ, ಪಾಪಾತ್ಮರು ನಿನ್ನನ್ನು ಮರಳು ಗೊಳಿಸಿದರೆ, ಒಪ್ಪ ಬೇಡ. (ಸಾಮತಿ. ೧, ೧೦.)

ನಿಶ್ಚಯವಾಗಿ ಜಾರುವ ಸ್ಥಳಗಳಲ್ಲಿ ಅವರಂನು ಇಡುತ್ತೀ. (ಕೀರ್ತ. ೭೩, ೧೮.)

ಯೇಳನೆ ಬಿಂನಹ.

ನಮ್ಮನ್ನು ಕೇಡಿನೊಳಗಿಂದ ತಪ್ಪಿಸು — ಯೆಂಬುವದು.

ಅವರನ್ನು ಪಾತಾಳದ ಕೈಯಿಂದ ಬಿಡಿಸಿ, ಮರಣದೊಳಗಿಂದ ವಿಮೋಚನೆ ಮಾಡುವೆನು. ಮರಣವೇ!

ನಿನ್ನ ಜಾಡ್ಯವಾಗಿರುವೆನು. ಪಾತಾಳವೇ! ನಿನ್ನ ನಾಶನವಾಗಿರುವೆನು. (ಹೋಶೆಯ ೭, ೧೪.)

ಸಂಕಟವುಳ್ಳ ಮನುಷ್ಯ ನಾನೇ! ಈ ಮರಣದ ಶರೀರದಿಂದ ನನ್ನನ್ನು ಯಾವನು ತಪ್ಪಿಸುವನು? ನಮ್ಮ ಕರ್ತನಾದ ಯೇಸು ಕ್ರಿಸ್ತನ ಮುಖಾಂತರ ದೇವರನ್ನು ಸ್ತುತಿಸುತ್ತೇನೆ. (ರೋಮಾ. ೭, ೨೪.)

ಸಮಾಪ್ತ.

ಯಾಕಂದರೆ ರಾಜ್ಯವೂ ಬಲವೂ ಮಹಿಮೆಯೂ ಯುಗಯುಗಾಂತರಗಳ ವರೆಗೂ ನಿನ್ನವಾಗಿವೆ. ಆಮೆನ್—ಯೆಂಬುವದು.

ಕರ್ತನೇ ನಮ್ಮ ತಂದೆಯಾದ ಇಸ್ರಾಯೇಲಿನ ದೇವರೇ! ನಿನಗೆ ಯುಗಯುಗಾಂತರಗಳ ವರೆಗೂ ಸ್ತೋತ್ರ ಉಂಟಾಗಿರಲಿ. ನಿನಗೆ ಕರ್ತನೇ! ಮಹಿಮೆಯೂ ಪರಾಕ್ರಮವೂ, ಘನವೂ, ಜಯವೂ, ಸ್ತುತಿಯೂ ತಕ್ಕದ್ದು. ಯಾಕಂದರೆ ಪರಲೋಕ ಭೂಲೋಕಗಳಲ್ಲಿ ಯೆಲ್ಲಾ ನಿನ್ನದು; ಕರ್ತನೇ, ರಾಜ್ಯವು ಸಹಾವಾಗಿ. ನೀನು ಯೆಲ್ಲಾಕ್ಕೂ ತಲೆಯಾಗಿ ಯೆತ್ತಿಸಿ ಕೊಂಡಿದ್ದೀ. ಐಶ್ವರ್ಯವೂ, ಮಾನವೂ ನಿನ್ನ ಮುಂದೆ ಅದೆ. ನೀನು ಯೆಲ್ಲಾ ಆಳುವವನೇ, ನಿನ್ನ ಕೈಯಲ್ಲಿ ಬಲವೂ, ಪರಾಕ್ರಮವೂ. ಯೆಲ್ಲರನ್ನು ದೊಡ್ಡವರನ್ನು ಮಾಡುವ

ದೂ, ಬಲಗೊಳ್ಳಿಸುವದೂ ನಿನ್ನ ಕೈಯಲ್ಲಿ ಅದೆ. (೧ನಡವಡಿಕೆ ೨೯, ೧೦—೧೨.)

ದೇವರ ವಾಗ್ದತ್ತಗಳೆಷ್ಟು, ನಂಮ ಮುಖಾಂತರದಿಂದಾಗುವ ದೇವರ ಮಹಿಮೆಗಾಗಿ, ಯೇಸು ಕ್ರಿಸ್ತನಲ್ಲಿ ಹೌದು, ಆತನಲ್ಲಿ ಆಮೆನ್, ಆಗಿವೆ.

ನಾಲ್ಕನೆ ಪರ್ವವು.

ನ್ಯಾಯಪ್ರಮಾಣದ ವಿಷಯ.

ನ್ಯಾಯಪ್ರಮಾಣವಿಲ್ಲದ ಜನಾಂಗಗಳು ಸ್ವಭಾವದಿಂದ ನ್ಯಾಯಪ್ರಮಾಣದವುಗಳನ್ನು ಮಾಡಿದರೆ, ಅವರು ನ್ಯಾಯಪ್ರಮಾಣವಿಲ್ಲದವರಾಗಿದ್ದು, ತಮಗೆ ತಾವೇ ನ್ಯಾಯಪ್ರಮಾಣವಾಗಿದ್ದಾರೆ. ಅವರ ಮನಸ್ಸಾಕ್ಷಿ ಕೂಡ ಸಾಕ್ಷಿ ಕೊಟ್ಟು, ಅವರ ಯೋಚನೆಗಳು ಒಂದಕ್ಕೆ ಒಂದು ತಪ್ಪು ಹೊರಿಸುತ್ತಾ, ಇಲ್ಲವೆ ಪ್ರತ್ಯುತ್ತರ ಕೊಡುತ್ತಾ, ಇರುವವರಿಂದ ಅವರು ತಂಮ ಹೃದಯಗಳಲ್ಲಿ ಬರೆದಿರುವ ನ್ಯಾಯಪ್ರಮಾಣದ ಕ್ರಿಯೆಯಂನು ತೋರಿಸುತ್ತಾರೆ. (ರೋಮ್. ೨, ೧೪. ೧೫.)

ನ್ಯಾಯಪ್ರಮಾಣವಂನಾದರೂ, ಪ್ರವಾದಿಗಳಂನಾದರೂ ತೆಗದು ಹಾಕುವದಕ್ಕೆ ಬಂದೆನೆಂದು ನೆನಸ ಬೇಡಿರಿ; ತೆಗದು ಹಾಕುವದಕ್ಕಲ್ಲಾ, ಪೂರೈಸುವದಕ್ಕೆ ಬಂ

ದೆನು. ನಿಶ್ಚಯವಾಗಿ ನಿಮಗೆ ಹೇಳುತ್ತೇನೆ—ಆಕಾಶ ವೂ ಭೂಮಿಯೂ ಗತಿಸಿ ಹೋಗುವ ಪರಿಯಂತರ, ನ್ಯಾಯಪ್ರಮಾಣದಲ್ಲಿಂದ ಒಂದು ಸೊನ್ನೆಯಾದರೂ, ಗು ಡುಸಾದರೂ, ಅವುಗಳೆಲ್ಲಾ ಆಗುವ ಮಟ್ಟಿಗೂ, ಗತಿ ಸಿ ಹೋಗದು. (ಮತ್ಥ್. ೫, ೧೭. ೧೮.)

ದಶಾಜ್ಞೆಗಳು.

೧. ದಾಸತ್ವದ ಮನೆಯಾದ ಮಿಸ್ರ ದೇಶದೊಳಗಿಂದ ನಿನ್ನನ್ನು ಹೊರಡಿಸಿದ ನಿನ್ನ ದೇವರಾದ ಕರ್ತನು ನಾ ನೇ. ನನ್ನ ಹೊರತು ನಿನಗೆ ಬೇರೆ ದೇವರುಗಳು ಇ ರ ಬೇಡ.

೨. ಮೇಲಿನ ಆಕಾಶದಲ್ಲಾದರೂ, ಕೆಳಗಿನ ಭೂ ಮಿಯಲ್ಲಿ ಆದರೂ, ಭೂಮಿಯ ಕೆಳಗಿರುವ ನೀರುಗ ಳಲ್ಲಿ ಆದರೂ ಯಾವ ವಿಗ್ರಹವನ್ನಾಗಲಿ, ಪ್ರತಿಮೆ ಯನ್ನಾಗಲಿ ನಿನಗೆ ಮಾಡಿಕೊಳ್ಳ ಬೇಡ. ಅವುಗಳಿಗೆ ನಮಸ್ಕಾರವನ್ನಾದರೂ ಸೇವೆಯನ್ನಾದರೂ ಮಾಡ ಬೇ ಡ. ಯಾಕಂದರೆ ನಿನ್ನ ದೇವರಾದ ಕರ್ತನಾದ ನಾನು ರೋಷವುಳ್ಳ ದೇವರಾಗಿ ತಂದೆಗಳ ಅಕ್ರಮವನ್ನು ಮಕ್ಕ ಳಲ್ಲಿ, ಮೂರನೇ ನಾಲ್ಕನೇ ತಲಾಂತರದ ವರಿಗೂ ಶಿಕ್ಷಿ ಸುವವನೂ; ಆದರೆ ನನಗೆ ಪ್ರೀತಿ ಮಾಡಿ, ನನ್ನ ಆ

ಜ್ಞೆಗಳನ್ನು ಕೈಕೊಳ್ಳುವ ಸಹಸ್ರಗಳಿಗೆ ಕೃಪೆ ಮಾಡುವವನೂ ಆಗಿದ್ದೇನೆ.

೩. ನಿನ್ನ ದೇವರಾದ ಕರ್ತನ ನಾಮವನ್ನು ವ್ಯರ್ಥವಾಗಿ ನುಡಿಯ ಬೇಡ. ಯಾಕಂದರೆ ತನ್ನ ನಾಮವನ್ನು ವ್ಯರ್ಥವಾಗಿ ನುಡಿಯುವವನನ್ನು ಕರ್ತನು ನಿರ್ದೋಷಿಯೆಂದೆಣಿಸನು.

೪. ಸಬ್ಬಥ್ ದಿವಸವನ್ನು ಪರಿಶುದ್ಧ ಮಾಡಲಿಕ್ಕೆ ನೆನಪು ಮಾಡಿಕೋ. ಆರು ದಿವಸ ದುಡಿದು ನಿನ್ನ ಕೆಲಸವನ್ನೆಲ್ಲಾ ಮಾಡು; ಆದರೆ ಯೇಳನೆ ದಿವಸವು ನಿನ್ನ ದೇವರಾದ ಕರ್ತನಿಗೆ ವಿಶ್ರಾಂತಿ ದಿವಸವಾಗಿದೆ. ಅದರಲ್ಲಿ ನೀನಾಗಲಿ, ನಿನ್ನ ಮಗನಾಗಲಿ, ನಿನ್ನ ಮಗಳಾಗಲಿ, ನಿನ್ನ ಸೇವಕನಾಗಲಿ, ನಿನ್ನ ಸೇವಕಳಾಗಲಿ, ನಿನ್ನ ದನವಾಗಲಿ, ನಿನ್ನ ಬಾಗಲಲ್ಲಿರುವ ಪರದೇಶಿಯಾಗಲಿ, ಯಾವ ಕೆಲಸ ಮಾಡ ಬೇಡ. ಯಾಕಂದರೆ ಆರು ದಿವಸಗಳಲ್ಲಿ ಕರ್ತನು ಆಕಾಶವನ್ನೂ, ಭೂಮಿಯನ್ನೂ, ಸಮುದ್ರವನ್ನೂ, ಅವುಗಳಲ್ಲಿರುವಂಥಾದ್ದೆಲ್ಲಾ ಉಂಟು ಮಾಡಿ ಯೇಳನೆ ದಿವಸದಲ್ಲಿ ವಿಶ್ರಾಂತಿಸಿ ಕೊಂಡನು. ಅದುಕಾರಣ ಕರ್ತನು ಯೇಳನೆ ದಿವಸವನ್ನು ಆಶೀರ್ವದಿಸಿ, ಅದನ್ನು ಪರಿಶುದ್ಧ ಮಾಡಿದನು.

೫. ನಿನ್ನ ದೇವರಾದ ಕರ್ತನು ನಿನಗೆ ಕೊಡುವ ಭೂ

ಮಿಯಲ್ಲಿ ನಿನ್ನ ದಿವಸಗಳು ಬಹಳ ಆಗುವ ಹಾಗೆ, ನಿನ್ನ ತಂದೆ ತಾಯಿಗಳನ್ನು ಸನ್ಮಾನಿಸು.

೬. ಕೊಲ್ಲ ಬೇಡ.

೭. ವ್ಯಭಿಚಾರ ಮಾಡ ಬೇಡ.

೮. ಕದ್ದುಕೊಳ್ಳ ಬೇಡ.

೯. ನಿನ್ನ ನೆರೆಯವನ ಮೇಲೆ ಸುಳ್ಳು ಸಾಕ್ಷಿ ನುಡಿಯ ಬೇಡ.

೧೦. ನಿನ್ನ ನೆರೆಯವನ ಮನೆಯನ್ನು ಆಶಿಸ ಬೇಡ. ನಿನ್ನ ನೆರೆಯವನ ಹೆಂಡತಿಯನ್ನಾದರೂ, ಅವನ ಸೇವಕ ಸೇವಕಳನ್ನಾದರೂ, ಅವನ ದನ ಕತ್ತೆಯನ್ನಾದರೂ,—ನಿನ್ನ ನೆರೆಯವನಿಗೆ ಇರುವಂಥಾದ್ದೆಲ್ಲಾವನ್ನು ಆಶಿಸ ಬೇಡ. (ಹೊರಡೋಣ ೨೦, ೩—೧೭.)

ಮೊದಲನೆ ಆಜ್ಞೆ.

ನಿನ್ನ ದೇವರಾದ ಕರ್ತನು ನಾನೇ; ನನ್ನ ಹೊರತು ನಿನಗೆ ಬೇರೆ ದೇವರುಗಳು ಇರ ಬೇಡ—ಯೆಂಬುವದು.

ನಿನ್ನ ದೇವರಾದ ಕರ್ತನು ನಿಂನ ಕಡೆಯಿಂದ ಕೇಳುವದೇನಂದರೆ: ನಿನ್ನ ದೇವರಾದ ಕರ್ತನಿಗೆ ಭಯ ಪಡು, ಆತನ ಯೆಲ್ಲಾ ಮಾರ್ಗಗಳಲ್ಲಿ ನಡಿ, ಆತನಿಗೆ ಪ್ರೀತಿ ಮಾಡು, ನಿಂನ ದೇವರಾದ ಕರ್ತನಂನು ನಿಂನ

ಪೂರ್ಣ ಹೃದಯದಿಂದಲೂ, ನಿಂನ ಪೂರ್ಣ ಪ್ರಾಣ ದಿಂದಲೂ ಸೇವಿಸು. ಕರ್ತನ ಆಜ್ಞೆಗಳಂನು ಕೈಕೊ. (ದ್ವಿತೀಯವ್ಯಾಯ ೧೦, ೧೨. ೧೩.)

ಆಕಾಶವನ್ನು ನಿರ್ಮಾಣ ಮಾಡಿ, ವಿಸ್ತರಿಸಿ, ಭೂಮಿಯಂನೂ, ಅದರ ಮೊಳಿಕೆಗಳಂನೂ ಹಾಸಿ, ಅದರ ಮೇಲೆ ಇರುವ ಜನಾಂಗಕ್ಕೆ ಉಸುರಂನೂ, ಅದರಲ್ಲಿ ನಡಿಯುವವರಿಗೆ ಆತ್ಮವಂನೂ ಕಾಡುವ ಕರ್ತನಾದ ದೇವರು ಹೇಳುವದೇನಂದರೆ: ನಾನೇ ಕರ್ತನು, ನನ್ನ ನಾಮವು ಇದೇ, ನನ್ನ ಮಾನವಂನೂ ಬೇರಾಬ್ಬನಿಗೆ, ನನ್ನ ಸ್ತುತಿಯಂನೂ ವಿಗ್ರಹಗಳಿಗೆ ಕಾಡುವದಿಲ್ಲ. (ಎಶ್. ೪೨, ೫. ೮.)

ವಿಗ್ರವು ಲೋಕದಲ್ಲಿ ಯೇನು ಅಲ್ಲವೆಂದೂ, ವಾಬ್ಬನೇ ಹೊರ್ತು ಬೇರೆ ದೇವರು ಇಲ್ಲವೆಂದೂ ಬಲ್ಲೆವು. ಯಾಕಂದರೆ ಆಕಾಶದಲ್ಲಾದರೂ ಭೂಮಿಯ ಮೇಲ್ಯಾದರೂ ದೇವರುಗಳೆಂದು ಕರೆಯಲ್ಪಡುವವುಗಳು ಇದ್ದರೂ, ನಮಗೆ ತಂದೆಯಾದ ವಾಬ್ಬನೇ ದೇವರು. ಆತನಿಂದ ಸಮಸ್ತವು. (೧ ಕಾರ್. ೮, ೪. ೫.)

ಜನಾಂಗಗಳು ಕಡಿಯುವಂಥವುಗಳನ್ನು ದೇವರಿಗಲ್ಲ, ದೆವ್ವಗಳಿಗೆ ಕಡಿಯುತ್ತಾರೆ. (ಅರ್ಪಿಸುತ್ತಾರೆ.) (೧ ಕಾರ್. ೧೦, ೨೦.)

ಯೆರಡನೆ ಆಜ್ಞೆ.

ಯಾವ ವಿಗ್ರಹವಂನಾಗಲಿ, ಪ್ರತಿಮೆಯಂನಾಗಲಿ, ನಿನಗೆ ಮಾಡಿ ಕೊಳ್ಳ ಬೇಡ. ಅವುಗಳಿಗೆ ನಮಸ್ಕಾರವಂನೂ ಸೇವೆಯಂನೂ ಮಾಡ ಬೇಡ—ಯೆಂಬುವದು.

ಜನಾಂಗಗಳು ದೇವರನ್ನು ತಿಳಿದು, ಆತನನ್ನು ದೇವರೆಂದು ಮಹಿಮೆ ಪಡಿಸದೆ, ಸ್ತುತಿಸದೆ, ತಂಮ ಯೋಚನೆಗಳಲ್ಲಿ ನಿಷ್ಪ್ರಯೋಜಕರಾಗಿ, ಅವರ ಬುದ್ಧಿ ಇಲ್ಲದ ಹೃದಯವು ಅಂಧಕಾರವಾಯಿತು. ತಾವು ಜ್ಞಾನಿಗಳೆಂದು ಅಂದು ಕೊಂಡು, ಹುಚ್ಚರಾದರು. ಮತ್ತು ಲಯವಿಲ್ಲದ ದೇವರ ಮಹಿಮೆಯಂನು, ಲಯವಾಗುವ ನರ ಪಕ್ಷಿ ಚತುಷ್ಪಾದ ಕ್ರಿಮಿಗಳಿಗೆ ಸಮಾನ ರೂಪವಾಗಿ ಮಾರ್ಪಡಿಸಿದರು. ಇವರು ದೇವರ ಸತ್ಯವನ್ನು ಸುಳ್ಳಿಗಾಗಿ ಮಾರ್ಪಡಿಸಿ, ಸೃಷ್ಟಿ ಕರ್ತನಿಗಿಂತ ಸೃಷ್ಟಿಯಂನು ಪೂಜಿಸಿ, ಸೇವಿಸಿದರು. (ರೋಮ್. ೧, ೨೧—೨೩. ೨೫.)

ಲೋಕವಂನೂ, ಅದರಲ್ಲಿರುವ ಯೆಲ್ಲವುಗಳಂನೂ, ಉಂಟು ಮಾಡಿದ ದೇವರು, ತಾನೇ ಪರಲೋಕ ಭೂಲೋಕಗಳ ಕರ್ತನಾಗಿದ್ದು, ಕೈಯಿಂದಾದ ಮಂದಿರಗಳಲ್ಲಿ ವಾಸ ಮಾಡನು. ತಾನೆ ಯೆಲ್ಲರಿಗೆ ಜೀವವಂನೂ, ಉ

ಸುರಂನೂ, ಯೆಲ್ಲವುಗಳಂನೂ ಕೊಡುವವನಾಗಿ, ಯೇನಾದರೂ ಬೇಕಾದವನ ಹಾಗೆ ಮನುಷ್ಯರ ಕೈಗಳಿಂದ ಪೂಜಿಸಲ್ಪಡುವದಿಲ್ಲ. ಆತನಲ್ಲಿ ಬದುಕುತ್ತೇವೆ, ಚರಿಸುತ್ತೇವೆ, ಇರುತ್ತೇವೆ. ಆದದರಿಂದ ನಾವು ದೇವರ ವಂಶವಾಗಿದ್ದರೆ, ದೈವವು ಮನುಷ್ಯನ ಚಮತ್ಕಾರದಿಂದಲೂ ಆಲೋಚನೆಯಿಂದಲೂ ಉಂಟಾದ ನಿರ್ಮಾಣವಾಗಿರುವ ಚಿಂನಕ್ಕಾದರೂ, ಬೆಳ್ಳಿಗಾದರೂ, ಕಲ್ಲಿಗಾದರೂ ಸಮಾನವಾಗಿದೆ ಯೆಂದು ನಾವು ನೆನಸ ಬಾರದು. (ಅಪೊ. ಕ್ರಿ. ೧೭, ೨೪. ೨೫. ೨೮. ೨೯.)

ದೇವರು ಆತ್ಮವೇ; ಮತ್ತು ಆತನನ್ನು ಆರಾಧಿಸುವವರು ಆತ್ಮದಿಂದಲೂ ಸತ್ಯದಿಂದಲೂ ಆರಾಧಿಸ ಬೇಕು. (ಯೋ. ೪, ೨೪.)

ಮೂರನೆ ಆಜ್ಞೆ.

ನಿಂನ ದೇವರಾದ ಕರ್ತನ ನಾಮವನ್ನು ವ್ಯರ್ಥವಾಗಿ ಸ್ಮರಿಸ ಬೇಡ—ಯೆಂಬುವದು.

ಕರ್ತನಾದ ಯೆಹೋವಾನು ಹೇಳುವದೇನಂದರೆ: ನೀವು ನನಗೆ ಕಿವಿ ಕೊಡದವರಿದ್ದರೆ, ಹೋಗಿ ಇನ್ನು ಮುಂದೆ ಸುದಾ, ಒಬ್ಬೊಬ್ಬನು ತನ್ನ ವಿಗ್ರಹಗಳಿಗೆ ಸೇವೆ ಮಾಡಿರಿ, ಆದರೆ ನನ್ನ ಪರಿಶುದ್ಧ ಹೆಸರನ್ನು

ಇನ್ನು ಅಶುದ್ಧ ಮಾಡ ಬೇಡಿರಿ. (ಹೆಜೆಕ್. ೨೦, ೩೯.

ನನ್ನ ಸಹೋದರರೇ, ಆಣೆ ಇಡ ಬೇಡಿರಿ. ಆಕಾಶದ ಮೇಲಾಗಲಿ, ಭೂಮಿಯ ಮೇಲಾಗಲಿ, ಬೇರೆ ಯಾವ ಆಣೆಯಾಗಲಿ, ಬೇಡ. ನೀವು ಆಜ್ಞೆಗೊಳಗಾಗದ ಹಾಗೆ, ನೀವು ಹೌದಂದರೆ ಹೌದಾಗಲಿ, ಅಲ್ಲವಂದರೆ ಅಲ್ಲವಾಗಲಿ. (ಯಾಕೋಬ್ ೫, ೧೨.)

ನಾಲ್ಕನೆ ಆಜ್ಞೆ.

ಸಬ್ಬಥ್ ದಿವಸವನ್ನು ಆಚರಿಸ ಬೇಕು —ಯೆಂಬುವದು.

ನೀವು ಸಬ್ಬಥ್ ದಿವಸದಲ್ಲಿ ಹೊರೆ ಹೊತ್ತು ಕೊಂಡು, ಯೆರೂಸಲೇಮಿನ ಬಾಗಲುಗಳಲ್ಲಿ ಬಾರದೆ, ಸಬ್ಬಥ್ ದಿವಸವನ್ನು ಪರಿಶುದ್ಧ ಮಾಡುವ ಹಾಗೆ, ನನಗೆ ಕಿವಿ ಕೊಡದೆ ಹೋದರೆ, ಅದರ ಬಾಗಲುಗಳಲ್ಲಿ ಬೆಂಕಿಯನ್ನು ಹಚ್ಚುವೆನು; ಅದು ಯೆರೂಸಲೇಮಿನ ಅರಮನೆಗಳನ್ನು ತಿಂದು ಬಿಟ್ಟು ಆರಿಸಲ್ಪಡದು. (ಎರ್. ೧೭, ೨೭.)

ಸ್ತೋತ್ರದ ಶಬ್ದದಿಂದ ಕೇಳಿಸಿ, ನಿನ್ನ ಅದ್ಭುತಗಳಂನೆಲ್ಲಾ ಸಾರುವ ಹಾಗೆ, ನಿನ್ನ ಬಲಿಪೀಠವನ್ನು ಸುತ್ತಿಕೊಳ್ಳುವೆನು, ಕರ್ತನೇ! ನಿನ್ನ ಮನೆಯ ಸ್ಥಾನವನ್ನೂ, ನಿ

ನ್ನ ಘನದ ನಿವಾಸವನ್ನು ಪ್ರೀತಿ ಮಾಡುತ್ತೇನೆ. (ಕೀರ್ತ. ೨೬, ೬—೮.)

ನಿಂಮನ್ನು ನೀವೇ ಮೋಸಗೊಳಿಸಿ, ವಾಕ್ಯವನ್ನು ಕೇಳುವವರು ಮಾತ್ರವಲ್ಲ, ಅದನ್ನು ಮಾಡುವವರು ಆಗಿರಿ. (ಯಾಕೋಬ್ ೧, ೨೨.)

ಐದನೆ ಆಜ್ಞೆ.

ನಿನ್ನ ತಂದೆ ತಾಯಿಗಳನ್ನು ಸನ್ಮಾನಿಸು—ಯೆಂಬುವದು.

ನಿನ್ನನ್ನು ಪಡೆದ ನಿನ್ನ ತಂದೆಗೆ ಕಿವಿ ಕೊಡು, ನಿನ್ನ ತಾಯಿಯನ್ನು ತಿರಸ್ಕರಿಸ ಬೇಡ. ನಿನ್ನ ತಂದೆ ತಾಯಿಗಳು ಸಂತೋಷ ಪಡಲಿ. (ಜ್ಞಾನೋ ೨೩, ೨೨. ೨೫.)

ಮಕ್ಕಳು ಹೆತ್ತವರಿಗೆ ಪ್ರತ್ಯುಪಕಾರ ಮಾಡಲಿ. ಯಾಕಂದರೆ ದೇವರ ಮುಂದೆ ಇದೇ ಒಳ್ಳೇದಾಗಿಯೂ ಸಮರ್ಪಕವಾಗಿಯೂ ಅದೆ. (೧ ತಿಮ್. ೫, ೪.)

ತಂದೆಯನ್ನು ಗೇಲಿಬಟ್ಟು, ತಾಯಿಗೆ ವಿಧೇಯವಾಗಿರುವದಕ್ಕೆ ತಿರಸ್ಕರಿಸುವ ಕಣ್ಣನ್ನು ತಗ್ಗಿನ ಕಾಗೆಗಳು ಕಿತ್ತು, ಹದ್ದಿನ ಮರಿಯಗಳು ತಿಂನುವವು. (ಜ್ಞಾನೋ ೩೦, ೧೭.)

ಆರನೆ ಆಜ್ಞೆ.

ಕೊಲ್ಲ ಬೇಡ—ಯೆಂಬುವದು.

ಕೊಲ್ಲ ಬೇಡ; ಕೊಲ್ಲುವವನು ನ್ಯಾಯತೀರ್ವಿಕೆಗೆ ಗುರಿಯಾಗಿರುವನೆಂತ ಹಿರಿಯರಿಗೆ ಹೇಳಲ್ಪಟ್ಟಿತೆಂದು ಕೇಳಿದ್ದೀರಿ. ಆದರೆ ನಾನು ನಿಮಗೆ ಹೇಳುತ್ತೇನೆ—ತಮ್ಮ ಸಹೋದರರ ಮೇಲೆ ಕಾರಣವಿಲ್ಲದೆ ಕೋಪ ಮಾಡುವವರೆಲ್ಲರು ನ್ಯಾಯತೀರ್ವಿಕೆಗೆ ಗುರಿಯಾಗಿರುವರು. (ಮತ್ಥ. ೫, ೨೧. ೨೨.)

ಸಹೋದರನಂನು ಪ್ರೀತಿ ಮಾಡದವನು ಮರಣದಲ್ಲಿ ನೆಲೆಯಾಗಿದ್ದಾನೆ. ತನ್ನ ಸಹೋದರನನ್ನು ಹಗೆ ಮಾಡುವ ಪ್ರತಿ ಮನುಷ್ಯನು ನರಹಿಂಸಕನಾಗಿದ್ದಾನೆ. ಮತ್ತು ನರಹಿಂಸಕನಾದ ಯಾವನಿಗೂ ತಂನಲ್ಲಿ ನೆಲೆಯಾಗಿರುವ ನಿತ್ಯಜೀವವಿಲ್ಲವೆಂದು ಬಲ್ಲಿರಿ. (೧ಯೋ. ೩, ೧೪. ೧೫.)

ಯೇಳನೆ ಆಜ್ಞೆ.

ವ್ಯಭಿಚಾರ ಮಾಡ ಬೇಡ—ಯೆಂಬುವದು.

ಮದುವೆ ಯೆಲ್ಲರಲ್ಲಿ ಮಾನವುಳ್ಳದ್ದು, ಹಾಸಿಗೆಯು ನಿಷ್ಕಳಂಕವಾದದ್ದು; ಆದರೆ ಜಾರರಿಗೂ ವ್ಯಭಿಚಾರಿಗಳಿಗೂ ದೇವರು ನ್ಯಾಯ ತೀರಿಸುವನು. (ಇಬ್ರಿ. ೧೩, ೪.)

ಇದೇ ದೇವರ ಚಿತ್ತವು, ನೀವು ಪರಿಶುದ್ಧರಾಗುವ ದೇ. ಯೇನಂದರೆ ಜಾರತ್ವಕ್ಕೆ ದೂರವಾಗಿರುವದು– ಪ್ರತಿಯೊಬ್ಬನು ದೇವರಂನರಿಯದ ಜನಾಂಗಗಳ ಪ್ರಕಾರ ದುರಾಶೆ ಪಡದೆ, ಪರಿಶುದ್ಧತ್ವದಲ್ಲಿಯೂ ಘನತೆಯಲ್ಲಿಯೂ ತನ್ನ ಘಟವನ್ನು ಕಾಪಾಡ ತಿಳಿದು ಕೊಳ್ಳುವದು. (೧. ಥೆಸ್ಸ. ೪, ೩. ೪.)

ಯೆಂಟನೆ ಆಜ್ಞೆ.

ಕದ್ದುಕೊಳ್ಳ ಬೇಡ–ಯೆಂಬುವದು.

ಕಳ್ಳರಾದರೂ, ಕೊಳ್ಳೆಗಾರರಾದರೂ ದೇವರ ರಾಜ್ಯವನ್ನು ಬಾಧ್ಯವಾಗಿ ಹೊಂದರು. (೧ ಕೊರ್. ೬, ೧೦.)

ದೇವರ ಚಿತ್ತವೇನಂದರೆ–ಪ್ರತಿಯೊಬ್ಬನು ತನ್ನ ಸಹೋದರನನ್ನು ವ್ಯವಹಾರದಲ್ಲಿ ಅತಿಕ್ರಮಿಸದೆ, ವಂಚಿಸದೆ, ಇರುವದು. ಯಾಕಂದರೆ ಇವುಗಳ ನಿಮಿತ್ತ ಕರ್ತನು ಮುಯ್ಯಿಗೆ ಮುಯ್ಯಿ ತೀರಿಸುವವನಾಗಿದ್ದಾನೆ. (೧ ಥೆಸ್ಸ. ೪, ೫. ೬.)

ಕದ್ದವನು ಇನ್ನು ಕದಿಯದೆ, ಕಷ್ಟ ಪಟ್ಟು, ಅವಶ್ಯವಿದ್ದವನಿಗೆ ಯೇನಾದರೂ ಕೊಡುವದಕ್ಕೆ ತನಗಿರುವ ಹಾಗೆ, ಕೈಗಳಿಂದ ಒಳ್ಳೆ ಕೆಲಸ ಮಾಡಲಿ. (ಎಫ. ೪, ೨೭. ೨೮.)

ಒಂಬತ್ತನೆ ಆಜ್ಞೆ.

ನಿನ್ನ ನೆರೆಯವನ ಮೇಲೆ ಸುಳ್ಳು ಸಾಕ್ಷಿ ನುಡಿಯ ಬೇಡ—ಯೆಂಬುವದು.

ಸುಳ್ಳನ್ನು ತಳ್ಳಿ ಬಿಟ್ಟು, ಪ್ರಾಬ್ಯಾಬ್ಬನು ತನ್ನ ನೆರೆಯವನ ಸಂಗಡ ಸತ್ಯವನ್ನೇ ಮಾತಾಡಿರಿ. ಯಾಕಂದರೆ ಪ್ರಾಬ್ಬರಿಗಾಬ್ಬರು ಅಂಗಗಳಾಗಿದ್ದೇವೆ. (ಎಫ್. ೪, ೨೫.)

ಕರ್ತನೇ, ನಿನ್ನ ಗುಡಾರದಲ್ಲಿ ತಂಗುವವನ್ಯಾರು? ನಿನ್ನ ಪರಿಶುದ್ಧ ಪರ್ವತದಲ್ಲಿ ವಾಸ ಮಾಡುವವನ್ಯಾರು? ಸಂಪೂರ್ಣನಾಗಿ ನಡೆದು, ನೀತಿಯನ್ನು ಮಾಡಿ, ತನ್ನ ಹೃದಯದಲ್ಲಿ ಸತ್ಯವಂನಾಡುವವನೇ. ಅವನು ತನ್ನ ನಾಲಿಗೆಯಿಂದ ಚಾಡಿ ಹೇಳುವದಿಲ್ಲ; ತನ್ನ ನೆರೆಯವನಿಗೆ ಕೇಡು ಮಾಡುವದಿಲ್ಲ, ತನ್ನ ಪಾತ್ರದವನ ಮೇಲೆ ನಿಂದೆ ಯೆತ್ತುವದಿಲ್ಲ. ಅವನ ಕಣ್ಣುಗಳಲ್ಲಿ ನೀಚನು ತಿರಸ್ಕರಿಸಲ್ಪಡುತ್ತಾನೆ; ಆದರೆ ಕರ್ತನಿಗೆ ಭಯ ಪಡುವವನಿಗೆ ಘನ ಪಡಿಸುತ್ತಾನೆ; ತನ್ನ ಕೇಡಿಗೆ ಆಣೆ ಇಟ್ಟು ಮೀರುವದಿಲ್ಲ. ತನ್ನ ಹಣವನ್ನು ಬಡ್ಡಿಗೆ ಕಾಡುವದಿಲ್ಲ; ನಿರಪರಾಧಿಗೆ ವಿರೋಧವಾಗಿ ಲಂಚ ತಕ್ಕೊಳ್ಳುವದಿಲ್ಲ; ಇವುಗಳನ್ನು ಮಾಡುವವನು ಯುಗಯುಗಕ್ಕೂ ಕದಲದೆ ಇರುವನು. (ಕೀರ್ತ. ೧೫.)

ಹತ್ತನೆ ಆಜ್ಞೆ.

ನಿನ್ನ ನೆರೆಯವನಿಗೆ ಇರುವಂಥಾದೆಲ್ಲವನ್ನು ಆಶಿಸ ಬೇಡ—ಯೆಂಬುವದು.

ಹೃದಯದೊಳಗಿಂದ ದುರಾಲೋಚನೆಗಳೂ, ಕೊಲೆಗಳೂ, ಜಾರತ್ವಗಳೂ, ವ್ಯಭಿಚಾರಗಳೂ, ಕಳ್ಳತನಗಳೂ, ಅಪಸಾಕ್ಷಿಗಳೂ, ದೂಷಣೆಗಳೂ, ಹೊರಡುತ್ತವೆ. (ಮತ್ಥ. ೧೫, ೧೮. ೧೯.)

ಮನುಷ್ಯನ ಹೃದಯದ ಆಲೋಚನೆಗಳ ಕಲ್ಪನೆಯೆಲ್ಲಾ ಅವನ ಚಿಕ್ಕತನದಾರಭ್ಯ ದಿನಾಲೂ ಕೆಟ್ಟದ್ದು. (ಉತ್ಪತಿ. ೬, ೫. ೮, ೨೧.)

ಆತ್ಮದಲ್ಲಿ ನಡಿದು ಕೊಳ್ಳಿರಿ, ಆಗಲು ಮಾಂಸದ ಆಶೆಯನ್ನು ತೀರಿಸದೆ ಇರುವಿರಿ. ಯಾಕಂದರೆ ಮಾಂಸವು ಆತ್ಮಕ್ಕೆ ವಿರೋಧವಾಗಿಯೂ ಆತ್ಮವು ಮಾಂಸಕ್ಕೆ ವಿರೋಧವಾಗಿಯೂ ಆಶಿಸುತ್ತದೆ; ನೀವು ಇಚ್ಛೈಸುವವುಗಳನ್ನು ಮಾಡದ ಹಾಗೆ, ಅವು ಒಂದಕ್ಕೊಂದು ವಿರೋಧವಾಗಿವೆ. (ಗಲ. ೫, ೧೬. ೧೭.)

ನ್ಯಾಯ ಪ್ರಮಾಣದ ಉಪಯೋಗದ ವಿಷಯ.

ನ್ಯಾಯಪ್ರಮಾಣದಿಂದ ಪಾಪದ ತಿಳುವಿಕೆ ಆಗುತ್ತದೆ. (ರೋಮ. ೩, ೨೦.)

ನ್ಯಾಯಪ್ರಮಾಣವು ಕ್ರಿಸ್ತನಿಗಾಗಿ ನಮ್ಮ ಉಪಾಧ್ಯನಾಗಿತ್ತು. (ಗಲ್. ೩, ೨೪.)

ಮಾಂಸದ ಕ್ರಿಯೆಗಳು ಪ್ರಕಟವಾಗಿವೆ. ಯಾವವಂದರೆ, ವ್ಯಭಿಚಾರ, ಜಾರತ್ವ, ಅಶುದ್ಧತ್ವ, ಬಂಡುತನ, ವಿಗ್ರಹಾರಾಧನೆ, ಶೂನ್ಯ, ವಿರೋಧಗಳು, ಜಗಳಗಳು, ಹೊರುಡುಗಳು, ಸಿಟ್ಟುಗಳು, ವಾಗ್ವಾದಗಳು, ದ್ವೇಷಗಳು, ಮತ ಭೇದಗಳು, ಹೊಟ್ಟೆಕಿಚ್ಚುಗಳು, ಕೊಲೆಗಳು, ಅಮಲುಗಳು, ದುಂದೌತನಗಳು, ಇವು ಮೊದಲಾದವುಗಳು ಇಂಥವುಗಳನ್ನು ಮಾಡುವವರು ದೇವರ ರಾಜ್ಯವಂನು ಬಾಧ್ಯವಾಗಿ ಹೊಂದುವದಿಲ್ಲಾ. (ಗಲ್. ೫, ೧೯—೨೧.)

ಆದರೆ ಆತ್ಮದ ಫಲಗಳು ಯಾವವಂದರೆ—ಪ್ರೀತಿಯು, ಸಂತೋಷವು, ಸಮಾಧಾನವು, ದೀರ್ಘಶಾಂತಿಯು, ದಯವು, ಒಳ್ಳೇತನವು, ವಿಶ್ವಾಸವು, ಸಾತ್ವಿಕತ್ವವು, ಮಿತಾನುಭಾವವು; ಇಂಥವುಗಳಿಗೆ ವಿರೋಧವಾಗಿ ನ್ಯಾಯಪ್ರಮಾಣವು ಇಲ್ಲ. (ಗಲ್. ೫, ೨೨. ೨೩.)

ದೇವರ ಆಜ್ಞೆಗಳನ್ನು ಕೈಕೊಳ್ಳುವದರ ವಿಷಯ.

ನಾನು ನಿಮಗೆ ಹೊಸ ಹೃದಯ ಕೊಟ್ಟು, ನಿಮ್ಮ ಅಂತರಂಗದಲ್ಲಿ ಹೊಸ ಆತ್ಮವನ್ನು ಕಾಡುವೆನು. ಕ

ಲ್ಲಾದ ಹೃದಯವನ್ನು ನಿಮ್ಮ ಮಾಂಸದೊಳಗಿಂದ ತೆಗದು, ನಿಮಗೆ ಮಾಂಸವಾದ ಹೃದಯ ಕೊಡುವೆನು. ನನ್ನ ಆತ್ಮವನ್ನು ನಿಮ್ಮ ಅಂತರಂಗದಲ್ಲಿ ಕೊಟ್ಟು, ನೀವು ನನ್ನ ನೇಮಕಗಳಲ್ಲಿ ನಡಿದು, ನನ್ನ ನ್ಯಾಯಗಳನ್ನು ಕೈಕೊಂಡು, ಅದನ್ನು ನಡಿಸುವ ಹಾಗೆ, ಮಾಡುವೆನು. (ಎಜೆಕ್. ೩೬, ೨೬. ೨೭.)

ಬದುಕಿಸುವ ನ್ಯಾಯಪ್ರಮಾಣವು ಕೊಡಲ್ಪಟ್ಟಿದ್ದರೆ, ನಿಜವಾಗಿ ನ್ಯಾಯಪ್ರಮಾಣದಿಂದ ನೀತಿ ಉಂಟಾಗಿರುವದು. ಆದರೆ ಯೇಸು ಕ್ರಿಸ್ತನ ವಿಶ್ವಾಸದಿಂದಾದ ವಾಗ್ದತ್ತವು ವಿಶ್ವಾಸಿಸುವವರಿಗೆ ಕೊಡಲ್ಪಡುವ ಹಾಗೆ, ಬರಹವು ಯೆಲ್ಲವನ್ನು ಯೇಕವಾಗಿ ಪಾಪದ ಕೆಳಗೆ ಮುಚ್ಚಿ ಹಾಕಿತು. (ಗಲ್. ೩, ೨೧. ೨೨.)

ಮಾಂಸದಿಂದ ಬಲಹೀನವಾಗಿದ್ದ ನ್ಯಾಯಪ್ರಮಾಣಕ್ಕೆ ಅಸಾಧ್ಯವಾದದ್ದನ್ನು—ದೇವರು ತನ್ನ ಮಗನನ್ನು ಪಾಪ ಮಾಂಸದ ಹೋಲಿಕೆಯಾಗಿಯೂ, ಪಾಪದ ನಿಮಿತ್ತವಾಗಿಯೂ, ಕಳುಹಿಸಿ, ಪಾಪಕ್ಕೆ ಮಾಂಸದಲ್ಲಿ ಆಗ್ನೆ ನಿರ್ಣಯಿಸಿ—ಮಾಡಿದನು. ಮಾಂಸದ ಪ್ರಕಾರವಲ್ಲ, ಆತ್ಮದ ಪ್ರಕಾರ ನಡಿಯುವ ನಂಮಲ್ಲಿ ನ್ಯಾಯಪ್ರಮಾಣದ ನೀತಿಯು ಪೂರ್ತಿಯಾಗುವ ಹಾಗೆಯೇ. (ರೋಮ್. ೮, ೩. ೪.)

ಸತ್ಕ್ರಿಯೆಗಳ ವಿಷಯ.

ನೀವು ಆಯಲ್ಪಟ್ಟ ಸಂತತಿಯೂ, ರಾಜಯಾಜಕತ್ವವೂ, ಪರಿಶುದ್ಧ ಜನಾಂಗವೂ, ಆಗಿದ್ದು, ಕತ್ತಲೆಯೊಳಗಿಂದ ತನ್ನ ಆಶ್ಚರ್ಯವಾದ ಬೆಳಕಿಗೆ ನಿಮ್ಮನ್ನು ಕರೆದವನ ಸದ್ಗುಣಗಳನ್ನು ಸಾರ ತಕ್ಕವರಾಗಿದ್ದೀರಿ. (೧. ಪೇತ್ರ. ೨, ೯.)

ಅವರು ನಿಮ್ಮ ಸತ್ಕ್ರಿಯೆಗಳನ್ನು ನೋಡಿ, ಪರಲೋಕಗಳಲ್ಲಿರುವ ನಿಮ್ಮ ತಂದೆಯನ್ನು ಮಹಿಮೆ ಪಡಿಸುವ ಹಾಗೆ, ಮನುಷ್ಯರ ಮುಂದೆ ನಿಮ್ಮ ಬೆಳಕು ಪ್ರಕಾಶಿಸಲಿ. (ಮತ್ಥ. ೫, ೧೬.)

ಮನುಷ್ಯನು ಯಾವದನ್ನು ಬಿತ್ತುವನೋ, ಅದನ್ನೇ ಕೊಯ್ಯುವನು. ಯೇನಂದರೆ ತನ್ನ ಮಾಂಸಕ್ಕೆ ಬಿತ್ತುವವನು ಮಾಂಸದಿಂದ ಕೊಳೆಯನ್ನು ಕೊಯ್ಯುವನು, ಆದರೆ ಆತ್ಮದಿಂದ ಬಿತ್ತುವವನು ಆತ್ಮದಿಂದ ನಿತ್ಯಜೀವವನ್ನು ಕೊಯ್ಯುವನು. ದಣಿಯದೆ ಒಳ್ಳೇದನ್ನು ಮಾಡೋಣ; ಯಾಕಂದರೆ ಆಯಾಸ ಪಡದಿದ್ದರೆ, ತಕ್ಕ ಕಾಲದಲ್ಲಿ ಕೊಯ್ಯುವೆವು. (ಗಲ್. ೬, ೭—೯.)

ಐದನೆ ಪರ್ವವು.

ಪರಿಶುದ್ಧ ರಾತ್ರಿ ಭೋಜನದ ವಿಷಯ.

ಕಷ್ಟ ಪಟ್ಟು ಭಾರ ಹೊರುವವರೆಲ್ಲರೇ, ನನ್ನ ಬಳಿ

ಗೆ ಬರ್ರಿ, ನಾನು ನಿಮಗೆ ವಿಶ್ರಾಂತಿ ಕೊಡುವೆನು. ನನ್ನ ನೊಗವನ್ನು ನಿಂವು ಮೇಲೆ ತಕ್ಕೊಂಡು, ನನ್ನಿಂದ ಕಲಿತು ಕೊಳ್ಳಿರಿ. ಯಾಕಂದರೆ ಸಾತ್ವಿಕನೂ, ದೀನ ಹೃದಯವುಳ್ಳವನೂ, ಆಗಿದ್ದೇನೆ. ಆಗಲು ನಿಮ್ಮ ಆತ್ಮಗಳಿಗೆ ವಿಶ್ರಾಂತಿಯನ್ನು ಹೊಂದುವಿರಿ. ಯಾಕಂದರೆ ನನ್ನ ನೊಗ ಲೇಸು, ನನ್ನ ಹೊರೆ ಹಗುರವೂ ಆಗಿದೆ. (ಮತ್ಥ್. ೧೧, ೨೮. ೨೯.)

ನಾವು ಆಶೀರ್ವದಿಸುವ ಆಶೀರ್ವಾದದ ಪಾತ್ರೆಯು ಕ್ರಿಸ್ತನ ರಕ್ತದ ಅನ್ಯೋನ್ಯವಲ್ಲವೋ? ನಾವು ಮುರಿಯುವ ರೊಟ್ಟಿಯು ಕ್ರಿಸ್ತನ ಶರೀರದ ಅನ್ಯೋನ್ಯವಲ್ಲವೋ? ಯಾಕಂದರೆ ಅನೇಕರಾದ ನಾವು ಒಂದೇ ರೊಟ್ಟಿಯೂ ಒಂದೇ ಶರೀರವೂ ಆಗಿದ್ದೇವೆ. ಯಾಕಂದರೆ ಯೆಲ್ಲರು ಆ ಒಂದೇ ರೊಟ್ಟಿಯಲ್ಲಿ ಪಾಲುಗಾರರಾಗಿದ್ದೇವೆ. (೧ ಕೊರ್. ೧೦, ೧೬. ೧೭.)

ಯೆಷ್ಟು ಸಾರಿ ಈ ರೊಟ್ಟಿಯನ್ನು ತಿಂದು ಈ ಪಾತ್ರೆಯಲ್ಲಿ ಕುಡಿಯುವಿರೋ ಕರ್ತನ ಮರಣವಂನು, ಆತನು ಬರುವ ಮಟ್ಟಿಗೂ ತೋರಿಸುತ್ತೀರಿ. ಆದದರಿಂದ, ಯಾವನು ಅಯೋಗ್ಯವಾಗಿ ಈ ರೊಟ್ಟಿಯನ್ನು ತಿನುವನೋ, ಇಲ್ಲವೆ ಕರ್ತನ ಪಾತ್ರೆಯಲ್ಲಿ ಕುಡಿಯುವನೋ, ಅವನು ಕರ್ತನ ಶರೀರಕ್ಕೂ ರಕ್ತಕ್ಕೂ ಅಪರಾಧಿಯಾಗಿರು

ವನು. ಹಾಗಾದರೆ, ಮನುಷ್ಯನು ತನ್ನನ್ನು ಪರೀಕ್ಷಿಸಿ ಕೊಳ್ಳಲಿ. ಮತ್ತು ಹೀಗೆ ಆ ರೊಟ್ಟಿಯಲ್ಲಿ ತಿಂದು ಆ ಪಾತ್ರೆಯಲ್ಲಿ ಕುಡಿಯಲಿ. ಯಾಕಂದರೆ ಅಯೋಗ್ಯವಾಗಿ ತಿಂದು ಕುಡಿಯುವವನು ಕರ್ತನ ಶರೀರವನ್ನು ವಿಶೇಷ ಮಾಡದೆ, ತನಗೆ ಅಗ್ಣ ನಿರ್ಣಯ ತಿಂದು ಕುಡಿಯುತ್ತಾನೆ. (೧ ಕೊರ್. ೧೧, ೨೮—೨೯.)

ಕ್ರೈಸ್ತಮನೇ ಪದ್ಧತಿ,

ಅಂದರೆ.

ಕ್ರೈಸ್ತರಲ್ಲಿ ಒಬ್ಬೊಬ್ಬನಿಗೆ ತನ್ನತನ್ನ ಸ್ಥಿತಿ ಉದ್ಯೋಗದಲ್ಲಿ ಇರುವ ಹಾಗನ್ನು ತಿಳಿಸುವಂಥ ವಚನಗಳು.

ಸಕಲ ಸ್ಥಿತಿ ಉದ್ಯೋಗಗಳಲ್ಲಿರುವವರಿಗೆ ಸಮವಾಗಿ

ದೇವರು ಒಬ್ಬೊಬ್ಬನಿಗೆ ಹ್ಯಾಗೆ ಪಾಲಿಟ್ಟನೋ, ಕರ್ತನು ಒಬ್ಬೊಬ್ಬನನ್ನು ಹ್ಯಾಗೆ ಕರದನೋ, ಹಾಗೆಯೇ ನಡಿಯಲಿ. (೧ ಕೊರ್. ೭, ೧೭.)

ಒಬ್ಬನು ಸೇವಿಸಿದರೆ, ದೇವರು ತಂದು ಕೊಡುವ ಬಲದಿಂದಾದ ಹಾಗೆ ಸೇವಿಸಲಿ; ಎಲ್ಲವುಗಳಲ್ಲಿ ದೇವರು ಯೇಸು ಕ್ರಿಸ್ತನ ಮುಖಾಂತರ ಮಹಿಮೆ ಪಡುವ ಹಾಗೆಯೇ. ಈತನಿಗೆ ಯುಗಯುಗಾಂತರಗಳ ವರಿ

ಗೂ ಮಹಿಮೆಯೂ ಪರಾಕ್ರಮವೂ. ಆಮೆನ್.
(೧ ಪೇತ್ರ. ೪, ೧೧.)

ಸಭೆಯ ಅಧ್ಯಕ್ಷರು, ಬೋಧಕರು, ಪ್ರಸಂಗಿಗಳು, ಇವರಿಗೆ.

ಅಧ್ಯಕ್ಷನು ದೋಷವಿಲ್ಲದವನೂ, ಒಬ್ಬಳೇ ಹೆಂಡತಿಯ ಗಂಡನೂ, ಯೆಚ್ಚರಿಕೆಯುಳ್ಳವನೂ, ಮನೋಸ್ವಸ್ಥನೂ, ಮರ್ಯಾದಸ್ಥನೂ, ಆತಿಥ್ಯ ಪ್ರಿಯನೂ, ಬೋಧಿಸ ಶಕ್ತನೂ ಆಗಿರ ಬೇಕು. ಮದ್ಯಪಾನಿಯೂ, ಹೊಡೆದಾಡುವವನೂ, ಲೋಭಿಯೂ, ಆಗಿರದೆ ಶಾಂತನೂ, ಜಗಳವಿಲ್ಲದವನೂ, ದ್ರವ್ಯಾಶೆಯಿಲ್ಲದವನೂ ಸ್ವಂತ ಮನೆಯನ್ನು ಚನ್ನಾಗಿ ಆಳುವವನೂ, ಯೆಲ್ಲಾ ಘನದಿಂದ ಮಕ್ಕಳನ್ನು ವಿಧೇಯರಾಗಿ ನಡಿಸುವವನೂ, ಆಗಿರ ಬೇಕು. ಯಾಕಂದರೆ ಒಬ್ಬನು ಸ್ವಂತ ಮನೆಯನ್ನು ಆಳ ತಿಳಿಯದಿದ್ದರೆ, ದೇವರ ಸಭೆಯ ವಿಚಾರಣೆ ಹ್ಯಾಗೆ ಮಾಡುವನು? (೧ ತಿಮ್. ೩, ೨–೫.)

ಅಧ್ಯಕ್ಷನು ಸಜ್ಜನ ಪ್ರಿಯನೂ, ಮನೋಸ್ವಸ್ಥನೂ, ನೀತಿಯುಳ್ಳವನೂ, ಪವಿತ್ರನೂ, ಸಮ್ಯಮನೂ ಆಗಿದ್ದು, ಸ್ವಸ್ಥ ಬೋಧನೆಯಿಂದ ಬುದ್ಧಿ ಹೇಳಲೂ ಯೆದುರಾಡುವವರನ್ನು ಖಂಡಿಸಲೂ ಶಕ್ತನಾಗುವ ಹಾಗೆ, ಉಪ

ದೇಶಕ್ಕೆ ಅನುಸಾರವಾದ ನಂಬಿಕೆಯೊದ ವಾಕ್ಯವನ್ನು ಕೈಕೊಳ್ಳ ಬೇಕು. (ತೀತ. ೧, ೮. ೯.)

ಸಭೆಯವರಿಗೂ, ಉಪದೇಶ ಕೇಳುವವರಿಗೂ

ಸಹೋದರರೇ, ನಿಂಮಲ್ಲಿ ಕಷ್ಟಪಟ್ಟು, ಕರ್ತನಲ್ಲಿ ನಿಮ್ಮ ಮುಖ್ಯಸ್ಥರಾಗಿದ್ದು, ನಿಮಗೆ ಬುದ್ಧಿ ಹೇಳುವವರನ್ನು ತಿಳಿದು, ಅವರ ಕೆಲಸದ ಕಾರಣದಿಂದ ಅವರಂನು ಪ್ರೀತಿಯಲ್ಲಿ ಅತ್ಯಧಿಕವಾಗಿ ಸನ್ಮಾನಿಸ ಬೇಕೆಂದು, ನಿಂಮನ್ನು ಬೇಡಿಕೊಳ್ಳುತ್ತೇವೆ. (೧ ಥೆಸ್ಸ. ೫, ೧೨. ೧೩.)

ನಿಮ್ಮ ನಡಿಸುವವರಿಗೆ, ಅವರು ಲೆಖ್ಖ ಹಾಕ್ಬಿಸ ಬೇಕಾದವರಾಗಿ, ನಿಮ್ಮ ಆತ್ಮಗಳ ವಿಷಯ ಯೆಚ್ಚತ್ತು ಇರುವದರಿಂದ, ವಿಧೇಯರಾಗಿದ್ದು ಹಾಳ ಬೀಳಿರಿ. ಅವರು ನರಳಿಕೆಯಿಂದಲ್ಲಾ, ಸಂತೋಷದಿಂಥ ಅದನ್ನು ಮಾಡುವ ಹಾಗೆಯೇ. ಯಾಕಂದರೆ ಅದು ನಿಮಗೆ ಪ್ರಯೋಜನವಿಲ್ಲ. (ಇಬ್ರಿ. ೧೩, ೧೭.)

ಪ್ರಪಂಚದ ಅಧಿಕಾರಿಗಳಿಗೆ.

ಅರಸುಗಳೇ, ಈಗ ಬುದ್ಧಿವಂತರಾಗಿರಿ. ಭೂಮಿಯ ನ್ಯಾಯಾಧಿಪತಿಗಳೇ ಶಿಕ್ಷೆ ತಕ್ಕೊಳ್ಳಿರಿ. ಭಯದಿಂದ ಕರ್ತನನ್ನು ಸೇವಿಸಿರಿ; ನಡುಗುತ್ತಾ ಉಲ್ಲಾಸ ಪಡಿರಿ. (ಕೀರ್ತ್. ೨, ೧೦. ೧೧.)

ಕೆಟ್ಟದನ್ನು ಬಿಟ್ಟು, ಒಳ್ಳೇದನ್ನು ಮಾಡ ಕಲಿತು ಕೊಳ್ಳಿರಿ; ನ್ಯಾಯವನ್ನು ಹುಡುಕಿ, ಬಲತ್ಕಾರ ಪಡುವವನಿಗೆ ನೆಟ್ಟಗೆ ನಡಿಸಿರಿ; ದಿಕ್ಕಿಲ್ಲದವರಿಗೆ ನ್ಯಾಯ ತೀರಿಸಿ ವಿಧವೆಯ ವ್ಯಾಜ್ಯ ಆಡಿರಿ. (ಎಶ್. ೧, ೧೬. ೧೭.)

ಸಮಸ್ತ ಪ್ರಜೆಯೊಳಗಿಂದ ಗಟ್ಟಿಗರೂ, ದೇವರಿಗೆ ಅಂಜುವವರೂ, ನಂಬಿಕೆಯುಳ್ಳವರೂ, ಹಗೆ ಮಾಡುವವರೂ, ಆಗಿರುವವರನ್ನು ಆರಿಸಿ ಸಾವಿರ ಮಂದಿಗೂ, ನೂರು ಮಂದಿಗೂ, ಐವತ್ತು ಮಂದಿಗೂ, ಹತ್ತು ಮಂದಿಗೂ ಅಧಿಪತಿಗಳಾಗಿ ಅವರ ಮೇಲೆ ಇಡು. ಇರುವ ಪ್ರಜೆಗೆ ಯಾವಾಗಲು ನ್ಯಾಯತೀರಿಸಲಿ. (ಹೊರಡಾಣ ೧೮, ೨೧. ೨೨.)

ನ್ಯಾಯವನ್ನು ತಿರುಗಿಸ ಬೇಡ. ಮುಖದಾಕ್ಷಿಣ್ಯ ಮಾಡ ಬೇಡ, ಲಂಚ ತಕ್ಕೊಳ್ಳ ಬೇಡ. ಯಾಕಂದರೆ ಲಂಚವು ಜ್ಞಾನಿಗಳ ಕಣ್ಣುಗಳನ್ನು ಕುರುಡ ಮಾಡಿ, ನೀತಿವಂತರ ಕಾರ್ಯಗಳನ್ನು ಡೊಂಕು ಮಾಡುತ್ತದೆ. ನೀತಿ ನ್ಯಾಯ ಹಿಂದಟ್ಟು. (ದ್ವಿತೀಯ ನ್ಯಾಯ ೧೬, ೧೯. ೨೦.)

ನೀವು ಮಾಡುವಂಥಾದ್ದಕ್ಕೆ ನೋಡಿ ಕೊಳ್ಳಿರಿ. ಯಾಕಂದರೆ ಮನುಷ್ಯರಿಗೋಸ್ಕರ ಅಲ್ಲಾ, ದೇವರಿಗೋಸ್ಕರ ನ್ಯಾಯತೀರಿಸುತ್ತೀರಿ. ಆತನು ನಿಮ್ಮ ಸಂಗಡ ನ್ಯಾಯದ ಕಾರ್ಯದಲ್ಲಿ. ಆದದರಿಂದ ಕರ್ತನ ಭಯವು ನಿಮ

ಮೇಲೆ ಇರಲಿ. ಯೆಚ್ಚರಿಕೆಯಾಗಿ ಮಾಡಿರಿ. ಯಾಕಂದರೆ ನಮ್ಮ ದೇವರಾದ ಕರ್ತನ ಬಳಿಯಲ್ಲಿ ಅನ್ಯಾಯವೂ ಮುಖದಾಕ್ಷಿಣ್ಯವೂ, ಲಂಚ ತೆಗೆಯುವದೂ ಇಲ್ಲ. (೨ ನಡವಡಿಕೆ ೧೯, ೬. ೭.)

ಪ್ರಜೆಗಳಿಗೆ.

ಒಬ್ಬೊಬ್ಬ ಮನುಷ್ಯನು ಮೇಲಾಗಿರುವ ಅಧಿಕಾರಿಗಳಿಗೆ ವಿಧೇಯನಾಗಿರಲಿ. ಯಾಕಂದರೆ ದೇವರಿಂದಲ್ಲೇ ಹೊರ್ತು ಯಾವ ಅಧಿಕಾರವು ಇಲ್ಲ. ಇರುವ ಅಧಿಕಾರಿಗಳು ದೇವರಿಂದ ನೇಮಿಸಲ್ಪಟ್ಟವೆ. ಹೀಗಿರುವದರಿಂದ ಅಧಿಕಾರವನ್ನು ಯೆದುರಿಸುವವನು ದೇವರ ನೇಮಕವನ್ನು ಯೆದುರಿಸುತ್ತಾನೆ. ಆದರೆ ಯೆದುರಿಸುವವರು ತಮಗೆ ತಾವೇ ಆಗ್ಞೆ ನಿರ್ಣಯವನ್ನು ಹೊಂದುವರು. ಯಾಕಂದರೆ ಅಧಿಪತಿಗಳು ಒಳ್ಳೇ ಕ್ರಿಯೆಗಳಿಗಲ್ಲ, ಕೆಟ್ಟವುಗಳಿಗೆ ಭಯಂಕರವಾಗಿದ್ದಾರೆ. ಹಾಗಾದರೆ ಅಧಿಕಾರಕ್ಕೆ ಭಯ ಪಡದೆ ಇರ ಬೇಕಾ? ಒಳ್ಳೇದನ್ನು ಮಾಡು, ಆಗಲು ಅದರಿಂದ ಹೊಗಳಿಕೆಯನ್ನು ಹೊಂದುವಿ; ಯಾಕಂದರೆ ನಿನಗೆ ಮೇಲಿಗಾಗಿ ದೇವರ ಸೇವಕನಾಗಿದ್ದಾನೆ. ಆದರೆ ಕೆಟ್ಟದ್ದನ್ನು ಮಾಡಿದರೆ ಭಯ ಪಡು, ಯಾಕಂದರೆ ಸುಮ್ಮನೆ ಖಡ್ಗವನ್ನು ಧರಿಸುವದಿಲ್ಲ; ಕೆಟ್ಟದ್ದನು ನಡಿಸುವವನಿಗೆ ಕೋಪಕ್ಕಾಗಿ ತೀ

ಪೂರ್ಣ ಮಾಡುವ ದೇವರ ಸೇವಕನಾಗಿದ್ದಾನೆ. ಆದಕಾರಣ ಕೋಪದ ನಿಮಿತ್ತ ಮಾತ್ರವಲ್ಲ, ಮನಸ್ಸಾಕ್ಷಿಯ ನಿಮಿತ್ತವು ವಿಧೇಯವಾಗಿರುವದು ಅವಶ್ಯವು. ಇದಕ್ಕೋಸ್ಕರವೇ ತೆರಿಗೆ ಕೊಡುತ್ತೀರಿ. ಯಾಕಂದರೆ ದೇವರ ಸೇವಕರಾಗಿ ಇದೇ ಕೆಲಸಕ್ಕೆ ಯಾವಾಗಲೂ ಸಿದ್ಧವಾಗಿದ್ದಾರೆ. (ರೋಮ್. ೧೩, ೧—೬.)

ಅತಿ ಶ್ರೇಷ್ಠನಾಗಿರುವ ಅರಸನಿಗಾದರೂ, ಅಕ್ರಮಗಾರರನ್ನು ಶಿಕ್ಷಿಸುವದಕ್ಕೂ, ಒಳ್ಳೇದನ್ನು ಮಾಡುವವರನ್ನು ಹೊಗಳುವದಕ್ಕೂ, ಆತನಿಂದ ಕಳುಹಿಸಲ್ಪಟ್ಟವರಾದ ಅಧಿಪತಿಗಳಿಗಾದರೂ, ಮನುಷ್ಯ ನಿರ್ಮಾಣಕ್ಕೆಲ್ಲಾ ಕರ್ತನ ನಿಮಿತ್ತ ಒಳಗಾಗಿರಿ. (೧ ಪೇತ್ರ. ೨, ೧೩. ೧೪.)

ಗಂಡಂದಿರಿಗೆ.

ಪುರುಷರೇ, ನಿಮ್ಮ ಹೆಂಡತಿಯರನ್ನು ಪ್ರೀತಿ ಮಾಡಿರಿ—ಕ್ರಿಸ್ತನು ಸಭೆಯನ್ನು ಪ್ರೀತಿ ಮಾಡಿದ ಹಾಗೆಯೇ (ಎಫ್. ೫, ೨೫.)

ಗಂಡಸರೇ ಹೆಂಡರನ್ನು ಪ್ರೀತಿ ಮಾಡಿ ಅವರ ಮೇಲೆ ಕಹಿಯಾಗಿರ ಬೇಡಿರಿ. (ಕೊಲ್. ೩, ೧೯.)

ಗಂಡಸರೇ, ನಿಮ್ಮ ಪ್ರಾರ್ಥನೆಗಳಿಗೆ ಅಡ್ಡಿ ಆಗದ ಹಾಗೆ, ಜೀವದ ಕೃಪೆಗೆ ಸಮ ಬಾಧ್ಯಸ್ಥರಾಗಿ, ಜ್ಞಾನದ

ಪ್ರಕಾರ ಆಕೆಯ ಸಂಗಡ ಒಗತನ ಮಾಡಿ, ಬಲಹೀನ ಪಾತ್ರೆಗೆಂದು, ಹೆಂಗಸಿಗೆ ಮಾನ ಸಲ್ಲಿಸಿರಿ. (೧ ಪೇತ್ರ. ೩, ೭.)

ಹೆಂಡರಿಗೆ.

ಹೆಂಡರೇ ಸ್ವಂತ ಗಂಡಂದಿರಿಗೆ, ಕರ್ತನಿಗಾದ ಹಾಗೆ ಅಧೀನರಾಗಿರ್ರಿ. ಯಾಕಂದರೆ ಗಂಡನು ಹೆಂಡತಿಯ ತಲೆಯಾಗಿದ್ದಾನೆ—ಕ್ರಿಸ್ತನು ಸಭೆಯ ತಲೆಯಾಗಿರುವ ಪ್ರಕಾರವೇ. (ಎಫ್. ೫, ೨೨. ೨೩. ಕೊಲ್. ೩, ೧೮.)

ಹೆಂಡರೇ, ಸ್ವಂತ ಗಂಡಂದಿರಿಗೆ ಒಳಗಾಗಿರಿ. ಕೆಲವರು ವಾಕ್ಯಕ್ಕೆ ವಿಧೇಯರಾಗದಿದ್ದರೂ, ನೀವು ಭಯಸ್ಥರಾಗಿಯೂ ನಿರ್ಮಲರಾಗಿಯೂ ನಡೆದು ಕೊಳ್ಳುವದನ್ನು ನೋಡಿ, ಹೆಂಡತಿಯರ ನಡತೆಯಿಂದ ವಾಕ್ಯವಿಲ್ಲದೆ ಗೆಲ್ಲಲ್ಪಡುವ ಹಾಗೆ, ಒಳಗಾಗಿರಿ. ಕೂದಲು ಹೆಣೆಯುವದೂ, ಚಿನ್ನದ ಒಡವೆಗಳನ್ನು ಇಟ್ಟು ಕೊಳ್ಳುವದೂ, ವಸ್ತ್ರಗಳನ್ನು ಧರಿಸುವದೂ, ಈ ಹೊರಗಿನ ಅಲಂಕಾರವು ಬೇಡ; ಶಾಂತಿ ಸಮಾಧಾನವುಳ್ಳ ಆತ್ಮದ ನಿರ್ಲಯವಾದದರಲ್ಲಿರುವ ಹೃದಯದ ಅಂತರಂಗವಾದ ಮನುಷ್ಯನೂ ನಿಮಗೆ ಇರ ಬೇಕು. ಅದು ದೇವರ ಮುಂದೆ ಬಹು ಬೆಲೆಯುಳ್ಳದ್ದಾಗಿದೆ. ಯಾಕಂ

ದರೆ ಇದೇ ಮೇರೆಗೆ ಪೂರ್ವದಲ್ಲಿ ದೇವರ ಮೇಲೆ ನಂಬಿಕೆ ಇಟ್ಟ ಪರಿಶುದ್ಧ ಹೆಂಗಸರು ಸಹ, ಸ್ವಂತ ಗಂಡಂದಿರಿಗೆ ಒಳಗಾಗಿದ್ದು, ತಮ್ಮನ್ನು ಅಲಂಕರಿಸಿ ಕೊಂಡರು. (೧ ಪೇತ್ರ. ೩, ೧—೫.)

ತಂದೆ ತಾಯಿಗಳಿಗೆ.

ನಾನು ನಿನಗೆ ಈ ಹೊತ್ತು ಆಜ್ಞಾಪಿಸಿದ ಈ ಮಾತುಗಳು ನಿಂನ ಹೃದಯದಲ್ಲಿ ಇರಲಿ. ಅವುಗಳನ್ನು ನಿಂನ ಮಕ್ಕಳಿಗೆ ಚುರುಕು ಮಾಡು; ನೀನು ನಿಂನ ಮನೆಯಲ್ಲಿ ಕೂತು ಕೊಳ್ಳುವಲ್ಲಿಯೂ ದಾರಿಯಲ್ಲಿ ನಡಿಯುವಲ್ಲಿಯೂ, ಮಲಗುವಲ್ಲಿಯೂ ಯೇಳುವಲ್ಲಿಯೂ ಅವುಗಳ ವಿಷಯ ಮಾತಾಡು. (ದ್ವಿತೀಯ ನ್ಯಾಯ. ೬, ೬. ೭.)

ಹುಡುಗನಿಗೆ ಶಿಕ್ಷೆಯನ್ನು ಹಿಂದೆಗೆಯ ಬೇಡ; ಯಾಕಂದರೆ ಅವನನ್ನು ಬೆತ್ತದಿಂದ ಹೊಡೆದರೆ ಸಾಯನು. ನೀನು ಕೋಲಿನಿಂದ ಅವನನ್ನು ಹೊಡೆದರೆ, ಅವನ ಪ್ರಾಣವನ್ನು ಪಾತಾಳಕ್ಕೆ ತಪ್ಪಿಸುವಿ. (ಸಾಮತಿ ೨೩, ೧೩. ೧೪.)

ತನ್ನ ಕೋಲು ಹಿಂದೆಗಿಯುವವನು ತನ್ನ ಮಗನನ್ನು ಹಗೆ ಮಾಡುತ್ತಾನೆ; ಆದರೆ ಅವನನ್ನು ಪ್ರೀತಿ ಮಾಡುವವನು ಬಾಲ್ಯದಲ್ಲಿ ಅವನನ್ನು ಶಿಕ್ಷಿಸುತ್ತಾನೆ. (ಸಾಮತಿ ೧೩, ೨೪.)

ನಿರೀಕ್ಷೆ ಇರುವ ಪರಿಯಂತರ ನಿನ್ನ ಮಗನನ್ನು ಶಿಕ್ಷಿಸು; ಆದರೆ ಅವನನ್ನು ಕೊಲ್ಲುವ ಹಾಗೆ ನಿನ್ನ ಮನಸ್ಸು ಯೆಬ್ಬಿಸ ಬೇಡ. (ಜ್ಞಾನೋ. ೧೯, ೧೮.)

ತಂದೆಗಳೇ, ನಿಮ್ಮ ಮಕ್ಕಳು ಮನಗುಂದದ ಹಾಗೆ ಅವರಿಗೆ ಕೋಪವನ್ನೆಬ್ಬಿಸ ಬೇಡಿರಿ, ಅವರನ್ನು ಕರ್ತನ ಶಿಕ್ಷೆಯಲ್ಲಿಯೂ ಉಪದೇಶದಲ್ಲಿಯೂ ಬೆಳೆಸಿರಿ. (ಎಫ್. ೬, ೪. ಕೊಲ್. ೩, ೨೧.)

ಮಕ್ಕಳಿಗೆ.

ಮಕ್ಕಳೇ, ನಿಮ್ಮ ಹೆತ್ತವರಿಗೆ ಕರ್ತನಲ್ಲಿ ವಿಧೇಯರಾಗಿರಿ, ಯಾಕಂದರೆ ಅದು ನ್ಯಾಯವೇ. ನಿನಗೆ ಮೇಲೇದಾಗುವ ಹಾಗೆಯೂ, ನೀನು ಭೂಮಿಯ ಮೇಲೆ ದೀರ್ಘಾಯುಷ್ಯದವನಾಗುವ ಹಾಗೆಯೂ, ನಿನ್ನ ತಂದೆಯನ್ನೂ ತಾಯಿಯನ್ನೂ ಸನ್ಮಾನಿಸು; ಇದು ವಾಗ್ದತ್ತವುಳ್ಳ ಮೊದಲನೆ ಆಜ್ಞೆಯಾಗಿದೆ. (ಎಫ್. ೬, ೧—೩. ಕೊಲ್. ೩, ೨೦.)

ತಂದೆಯನ್ನು ಸೂರೆಗೊಂಡು, ತಾಯಿಯನ್ನು ಹೊರಡಿಸುವವನು ಲಜ್ಜೆಯನ್ನೂ, ನಾಚಿಕೆಯನ್ನೂ, ಹುಟ್ಟಿಸುವ ಮಗನಾಗಿದ್ದಾನೆ. (ಜ್ಞಾನೋ. ೧೯, ೨೬.)

ಸೇವಕರಿಗೂ, ಕೂಲಿಯಾಳುಗಳಿಗೂ, ಕೆಲಸದವರಿಗೂ.

ಸೇವಕರೇ, ವಾಳ್ಗೆಯವರೂ, ಸಾತ್ವಿಕರೂ ಆಗಿರುವ ಯಜಮಾನರಿಗೆ ಮಾತ್ರವಲ್ಲ, ವಿಪರೀತವಾಗಿರುವವರಿಗೆ ಸುದಾ ಸಕಲ ಭಯದಲ್ಲಿ ವೊಳಗಾಗಿರಿ. (೧ ಪೇತ್ರ. ೨, ೧೮.)

ದಾಸರೇ, ಮಾಂಸದ ಪ್ರಕಾರವಾದ ಯಜಮಾನರಿಗೆ ಭಯದಿಂದಲೂ ನಡುಗಿನಿಂದಲೂ, ನಿಮ್ಮ ಹೃದಯಗಳ ಯಥಾರ್ಥದಲ್ಲಿ ಕ್ರಿಸ್ತನಿಗಾದ ಹಾಗೆ ವಿಧೇಯರಾಗಿರಿ. ಕಣ್ಣು ಸೇವೆಯಿಂದ ಮನುಷ್ಯರನ್ನು ಮೆಚ್ಚಿಸುವವರ ಹಾಗಲ್ಲ, ಕ್ರಿಸ್ತನ ದಾಸರ ಹಾಗೆ ದೇವರ ಚಿತ್ತವನ್ನು ಮನಸ್ಸಿನಿಂದ ಮಾಡಿ, ಸುಚಿತ್ತದಿಂದ ಮನುಷ್ಯರಂನಲ್ಲ, ಕರ್ತನನ್ನು ಸೇವಿಸಿ, ದಾಸನಾಗಲಿ, ಸ್ವತಂತ್ರನಾಗಲಿ, ವೊಬ್ಬಾಬ್ಬನು ವಾಳ್ಯೆದೇನಾದರೂ ಮಾಡುವನ್ನೋ, ಅದನ್ನು ಕರ್ತನಿಂದ ಹೊಂದುವನೆಂದು ತಿಳಿದು ಕೊಳ್ಳಿರಿ. (ಎಫ್. ೬, ೫—೮.) (ಕೊಲ್. ೩. ೨೨—೨೪.)

ಯಜಮಾನರಿಗೆ.

ಯಜಮಾನರೇ, ಹೆದರಿಸುವದನ್ನು ಬಿಟ್ಟು, ನಿಮಗೂ ಯಜಮಾನನು ಪರಲೋಕಗಳಲ್ಲಿ ಇದ್ದಾನೆಂದೂ,

ಆತನ ಬಳಿಯಲ್ಲಿ ಮುಖದಾಕ್ಷಿಣ್ಯವಿಲ್ಲವೆಂದೂ, ತಿಳಿದು ಸೇವಕರಿಗೆ ಹಾಗೆಯೇ ಮಾಡಿರಿ. ನ್ಯಾಯವಾದ್ದಂನೂ ಸರಿಯಾದದ್ದಂನೂ ದಾಸರಿಗೆ ಕೊಡಿರಿ. (ಎಫ್. ೬, ೯. ಕೊಲ್. ೪, ೧.)

ಮದಿವೆ ಇಲ್ಲದ ಪ್ರಾಯದವರಿಗೆ

ಮೋಸ ಹೋಗ ಬೇಡಿರಿ; ಜಾರರಾದರೂ, ವಿಗ್ರಹಾರಾಧಕರಾದರೂ, ವ್ಯಭಿಚಾರಿಗಳಾದರೂ, ಪುರುಷಸಂಗಮ ಪಡುವವರಾದರೂ, ಮಾಡುವವರಾದರೂ, ಲೋಭಿಗಳಾದರೂ, ಮದ್ಯಪಾನಿಗಳಾದರೂ, ಬೈಯುವವರಾದರೂ, ಕೊಳ್ಳೆಗಾರರಾದರೂ, ದೇವರ ರಾಜ್ಯವನ್ನು ಬಾಧ್ಯವಾಗಿ ಹೊಂದರು. (೧ ಕೊರ್. ೬, ೯. ೧೦.)

ಚಿಕ್ಕವರೇ, ಹಿರಿಯರಿಗೆ ಒಳಗಾಗಿರಿ. (೧ ಪೇತ್ರ. ೫, ೫.)

ವಿಧವೆಯರಿಗೆ.

ಒಂಟಿಗಳಾಗಿರುವ ನಿಜ ವಿಧವೆಯು ದೇವರ ಮೇಲೆ ಭರವಸವಿಟ್ಟು, ರಾತ್ರಿ, ಹಗಲು ಪ್ರಾರ್ಥನೆಗಳಲ್ಲಿಯೂ ಬಿನ್ನಹಗಳಲ್ಲಿಯೂ ನೆಲೆಯಾಗಿರುವಳು. ಆದರೆ ಭೋಗಸ್ಥಳು ಬದುಕುವಾಗ್ಯೆ ಸತ್ತವಳಾಗಿದ್ದಾಳೆ. (೧ ತಿಮ್. ೫, ೫. ೬.)

ಸರ್ವರಿಗೆ.

ದಿವ್ಯ ನ್ಯಾಯಪ್ರಮಾಣದ ಸಾರಂಶವು.

ನಿನ್ನ ದೇವರಾದ ಕರ್ತನನ್ನು ನಿನ್ನ ಪೂರ್ಣ ಹೃದಯದಿಂದಲೂ ನಿನ್ನ ಪೂರ್ಣ ಪ್ರಾಣದಿಂದಲೂ, ನಿನ್ನ ಪೂರ್ಣ ಬುದ್ಧಿಯಿಂದಲೂ, ಪ್ರೀತಿ ಮಾಡು. ಈ ಕಟ್ಟಳೆಯು ಮೊದಲನೇದೂ, ದೊಡ್ಡದೂ, ಆಗಿದೆ. ಮತ್ತು ಯೆರಡನೇದು ಅದಕ್ಕೆ ಸಮಾನವಾಗಿದೆ; ಯೇನಂದರೆ—ನಿನ್ನ ನೆರೆಯವನನ್ನು ನಿನ್ನ ಹಾಗೆಯೇ ಪ್ರೀತಿ ಮಾಡು. ಈ ಯೆರಡು ಕಟ್ಟಳೆಗಳಲ್ಲಿ ನ್ಯಾಯಪ್ರಮಾಣವೆಲ್ಲವೂ, ಪ್ರವಾದಿಗಳೂ ಅಡಗಿ ಅವೆ. (ಮತ್ಥ. ೨೨, ೩೭—೪೦.)

ಸುವಾರ್ತೆಯ ಸಾರಂಶವು.

ಆತನಲ್ಲಿ ವಿಶ್ವಾಸವಿಡುವವರೆಲ್ಲರು ನಾಶನವಾಗದೆ, ನಿತ್ಯಜೀವವನ್ನು ಹೊಂದುವ ಬಗ್ಯೆ, ದೇವರು ವಾಬ್ಬನಾಗಿ ಹುಟ್ಟಿದ ತನ್ನ ಮಗನನ್ನು ಕಾಡುವ ಹಾಗೆ ಲೋಕವನ್ನು ಅಷ್ಟು ಪ್ರೀತಿ ಮಾಡಿದನು. (ಯೋ. ೩, ೧೬.)

ಯೆಲ್ಲಾ ಅಂಗೀಕಾರಕ್ಕೆ ಯೋಗ್ಯವಾದ ನಂಬಿಕೆಯಾದ ವಾಕ್ಯವು ಇದೇ—ಕ್ರಿಸ್ತ ಯೇಸು ಪಾಪಿಗಳನ್ನು

ರಕ್ಷಿಸುವದಕ್ಕೆ ಲೋಕಕ್ಕೆ ಬಂದನು. ಅವರಲ್ಲಿ ಮೊದಲಿನವನು ನಾನೇ. (೧ ತಿಮ್. ೧, ೧೫.)

ಪಶ್ಚಾತಾಪದ ಕೀರ್ತನೆಗಳು.

೧ನೇದು—ಕೀರ್ತನೆ. ೬. ೨ನೇದು—ಕೀರ್ತನೆ. ೩೨.
೩ನೇದು—ಕೀರ್ತನೆ. ೩೮. ೪ನೇದು—ಕೀರ್ತನೆ. ೫೧.
೫ನೇದು—ಕೀರ್ತನೆ. ೧೦೨. ೬ನೇದು—ಕೀರ್ತನೆ. ೧೩೦.
೭ನೇದು—ಕೀರ್ತನೆ. ೧೪೩.

ಪ್ರಾರ್ಥನೆ ಬಿಂನಪಗಳಾದ ವಚನಗಳು.

ಮುಂಜಾನೆಗೆ, ಯೇಳುವಾಗ.

೧.

ಕರ್ತನನ್ನು ಕೊಂಡಾಡುವದೂ—ಮಹೋನ್ನತನೇ ನಿನ್ನ ಹೆಸರನ್ನು ಕೀರ್ತಿಸುವದೂ,—ಬೆಳಿಗ್ಗೆ ನಿನ್ನ ಕೃಪೆಯನ್ನೂ ಪ್ರತಿ ರಾತ್ರಿಯಲ್ಲಿ ನಿನ್ನ ನಂಬಿಕೆಯನ್ನೂ ತಿಳಿಸುವದೂ—ಒಳ್ಳೇದು. ಯಾಕಂದರೆ ಕರ್ತನೇ, ನಿನ್ನ ಕ್ರಿಯೆಯಿಂದ ನನ್ನನ್ನು ಸಂತೋಷ ಪಡಿಸಿದ್ದೀ. ನಿನ್ನ ಕೈಕೆಲಸಗಳಲ್ಲಿ ಉತ್ಸಾಹಧ್ವನಿ ಗೈಯುತ್ತೇನೆ. ಕರ್ತನೇ, ನಿನ್ನ ಕೆಲಸಗಳು ಯೆಷ್ಟೋ ದೊಡ್ಡವು! ನಿನ್ನ ಯೋಚನೆಗಳು ಬಹಳ ಆಳವಾಗಿವೆ. (ಕೀರ್ತ. ೯೨, ೧—೫.)

೨.

ಹೊತ್ತಾರೆ ನಿನ್ನ ಕೃಪೆಗೆ ಉತ್ಸಾಹ ಪಡುವೆನು; ಯಾಕಂದರೆ ನೀನು ನನಗೆ ದುರ್ಗವಾಗಿಯೂ, ನನ್ನ ಇಕ್ಕಟ್ಟಿನ ದಿವಸದಲ್ಲಿ ಆಶ್ರಯವಾಗಿಯೂ, ಇದ್ದೀ. ನನ್ನ ಬಲವೇ, ನಿನ್ನನ್ನು ಕೀರ್ತಿಸುವೆನು, ಯಾಕಂದರೆ ದೇವರು ನನ್ನ ದುರ್ಗವೂ, ಕೃಪೆಯುಳ್ಳ ನನ್ನ ದೇವರೂ ಆಗಿದ್ದಾನೆ. (ಕೀರ್ತ. ೫೯, ೧೬. ೧೭.)

೩.

ಕರ್ತನೇ, ನನ್ನ ಹೃದಯವನ್ನು ಶೋಧಿಸಿದ್ದೀ. ರಾತ್ರಿಯಲ್ಲಿ ದರ್ಶಿಸಿದ್ದೀ. ನನ್ನ ಅಡಿಗಳು ಕದಲದ ಹಾಗೆ ನನ್ನ ನಡೆಗಳನ್ನು ನಿಂನ ಹಾದಿಗಳಲ್ಲಿ ಸ್ಥಿರ ಪಡಿಸು. ನಾನು ನಿಂನಂನು ಕರೆದಿದ್ದೇನೆ; ಯಾಕಂದರೆ ದೇವರೇ ನನಗೆ ಉತ್ತರ ಕೊಡುವಿ. (ಕೀರ್ತ. ೧೭, ೩. ೫. ೬.)

೪.

ಕರ್ತನೇ ಯೆಲ್ಲಾ ಕೇಡಿನಿಂದ ನಂನಂನು ಕಾಯು, ನಂನ ಪ್ರಾಣವನ್ನು ಕಾಪಾಡು. ಕರ್ತನೇ ನನ್ನ ಹೋಗೋಣವಂನೂ ನಂನ ಬರೋಣವಂನೂ ಈಗಿನಿಂದ ಯುಗಯುಗಕ್ಕೂ ಕಾಪಾಡು. (ಕೀರ್ತ. ೧೨೧, ೭. ೮.)

ಸಂಜೆಗೆ, ಮಲಗುವಾಗ.

೧.

ದೇವರೇ, ನನ್ನನ್ನು ಕರುಣಿಸಿ, ನನ್ನ ಪ್ರಾರ್ಥನೆಯನ್ನು ಕೇಳು. ಸಮಾಧಾನವಾಗಿ ಮಲಗಿ, ನಿದ್ರೆ ಮಾಡುವೆನು. ಯಾಕಂದರೆ ಕರ್ತನೇ, ನೀನಾಬ್ಬನೇ ನನ್ನನ್ನು ಭರವಸವಾಗಿ ವಾಸಿಸ ಮಾಡುತ್ತೀ. (ಕೀರ್ತ. ೪, ೪. ೮.)

೨.

ದೇವರೇ ನನ್ನ ದೇವರು ನೀನೇ. ನಿನ್ನನ್ನು ನಂನ ಹಾಸಿಗೆಯ ಮೇಲೆ ಜ್ಞಾಪಕ ಮಾಡಿ ಕೊಳ್ಳುವಾಗ, ರಾತ್ರಿಯ ಝಾವುಗಳಲ್ಲಿ ನಿನ್ನನ್ನು ಧ್ಯಾನಿಸುತ್ತೇನೆ. ಯಾಕಂದರೆ ನನಗೆ ಸಹಾಯವಾಗಿದ್ದೀ. ಆದದರಿಂದ ನಿನ್ನ ರೆಕ್ಕೆಗಳ ನೆರಳಿನಲ್ಲಿ ಉತ್ಸಾಹ ಪಡುವೆನು. (ಕೀರ್ತ. ೬೩, ೧. ೬. ೭.)

೩.

ಯೆಲ್ಲಾ ಕಾಲಗಳಲ್ಲಿ ಕರ್ತನನ್ನು ಸ್ತುತಿಸುವೆನು; ಆತನ ಸ್ತೋತ್ರವು ಯಾವಾಗಲೂ ನನ್ನ ಬಾಯಿಯಲ್ಲಿ ಇರುವದು. ಕರ್ತನ ದೂತನು ಆತನಿಗೆ ಭಯ ಪಡುವವರ ಸುತ್ತಲು ಇಳಕೊಳ್ಳುತ್ತಾ, ಅವರನ್ನು ತಪ್ಪಿಸಿ ಬಿಡುತ್ತಾನೆ. ಕರ್ತನು ಒಳ್ಳೆಯವನೆಂದು ಸವಿದು ನೋಡಿರಿ, ಆತನಲ್ಲಿ ಆಶ್ರಯಿಸಿ ಕೊಳ್ಳುವವನೇ ಭಾಗ್ಯವಂತನು. (ಕೀರ್ತ. ೩೪, ೧. ೭. ೮.)

೪.

ನನ್ನ ಸಹಾಯವು ಯೆಲ್ಲಿಂದ ಬರುವದು? ನನ್ನ ಸಹಾಯವು ಆಕಾಶವಂನೂ ಭೂಮಿಯಂನೂ ಉಂಟು ಮಾಡಿದ ಕರ್ತನ ಬಳಿಯಿಂದಲೇ. ಆತನು ನಂನ ಕಾಲನ್ನು ಕದಲಿಸದಿರುವನು, ನನ್ನನ್ನು ಕಾಪಾಡುವವನು ತೂಕಡಿಸುವದಿಲ್ಲ. ಇಗೋ ಇಸ್ರಯೇಲನ್ನು ಕಾಪಾಡುವವನು ತೂಕಡಿಸುವದಿಲ್ಲ, ನಿದ್ರೆ ಮಾಡುವದಿಲ್ಲ; ಕರ್ತನು ನನ್ನನ್ನು ಕಾಪಾಡುವವನಾಗಿದ್ದಾನೆ, ಕರ್ತನು ನನ್ನ ಬಲ ಕಡೆಯಲ್ಲಿ ನನ್ನ ನೆರಳಾಗಿದ್ದಾನೆ. (ಕೀರ್ತ. ೧೨೧, ೧—೫.)

ಊಟಕ್ಕೆ ಮುಂಚೆ.

೧.

ಕರ್ತನೇ, ಯೆಲ್ಲರ ಕಣ್ಣುಗಳು ನಿನಗೆ ಕಾದು ಕೊಳ್ಳುತ್ತವೆ. ನೀನು ಅವರಿಗೆ ಅವರ ಆಹಾರವನ್ನು ತಕ್ಕ ಕಾಲದಲ್ಲಿ ಕೊಡುತ್ತೀ. ನಿನ್ನ ಕೈ ತೆರೆದು ಯೆಲ್ಲಾ ಜೀವಿಗಳ ಇಷ್ಟವನ್ನು ತೃಪ್ತಿಪಡಿಸುತ್ತೀ. (ಕೀರ್ತ. ೧೪೫, ೧೫. ೧೬.)

೨.

ದೇವರೇ, ನಮ್ಮನ್ನು ಕರುಣಿಸಿ, ನಮ್ಮನ್ನು ಆಶೀರ್ವದಿಸು. ಜನರು ನಿನ್ನನ್ನು ಕೊಂಡಾಡಲಿ, ದೇವರೇ; ಭೂಮಿಯು ತನ್ನ ಬೆಳೆಯನ್ನು ಕೊಡುವದು. ನಂಮ

ದೇವರಾದ ದೇವರೇ, ನಂಮಂನು ಆಶೀರ್ವದಿಸು. (ಕೀರ್ತ. ೬೭, ೧. ೫. ೬.)

ಊಟ ಆದ ಮೇಲೆ.

೧.

ನಂನ ಪ್ರಾಣವೇ, ಕರ್ತನನ್ನು ಸ್ತುತಿಸು, ಆತನ ಉಪಕಾರಗಳಂನೆಲ್ಲಾ ಮರೆತು ಬಿಡ ಬೇಡ. ಆತನು ನಿಂನ ಅಕ್ರಮಗಳಂನೆಲ್ಲಾ ಮಂನಿಸಿ, ನಿಂನ ರೋಗಗಳಂನೆಲ್ಲಾ ಸ್ವಸ್ಥ ಮಾಡಿ, ನಿಂನ ಜೀವವನ್ನು ನಾಶನದೊಳಗಿಂದ ಬಿಡಿಸಿ, ಕೃಪೆ ಅಂತಃಕರಣಗಳನ್ನು ನಿನಗೆ ಮಾಡಿ, ನಿಂನಂನು ವೊಳ್ಳೇದರಿಂದ ತೃಪ್ತಿ ಪಡಿಸುತ್ತಾನೆ. (ಕೀರ್ತ. ೧೦೩, ೨—೫.)

೨.

ಕರ್ತನನ್ನು ಕೊಂಡಾಡಿರಿ; ಯಾಕಂದರೆ ಆತನು ವೊಳ್ಳೆಯವನು. ಯೆಲ್ಲಾ ಮಾಂಸಕ್ಕೆ ರೊಟ್ಟಿ ಕೊಡುವವನಂನು ಕೊಂಡಾಡಿರಿ; ಯಾಕಂದರೆ ಆತನ ಕೃಪೆಯು ಯುಗಯುಗಕ್ಕೂ ಅದೆ. (ಕೀರ್ತ. ೧೩೬, ೧. ೨೫.)

ಶಾಲೆಯ ಆರಂಭದಲ್ಲಿ.

೧.

ಕರ್ತನೇ, ನಿಂನ ಮಾರ್ಗಗಳನ್ನು ನನಗೆ ತಿಳಿಸು, ನಿಂನ ಹಾದಿಗಳಂನು ನನಗೆ ಕಲಿಸು. ನಿನ್ನ ಸತ್ಯದಲ್ಲಿ ನನ್ನ

ನ್ನು ನಡಿಸಿ, ನನಗೆ ಕಲಿಸು. ಯಾಕಂದರೆ ನೀನು ನಂನ ರಕ್ಷಣೆಯ ದೇವರೇ. (ಕೀರ್ತ. ೨೫, ೪. ೫.)

೨.

ದೇವರೇ ನನ್ನನ್ನು ಶೋಧಿಸಿ, ನನ್ನ ಹೃದಯವನ್ನು ತಿಳುಕೋ. ನನ್ನನ್ನು ಪರೀಕ್ಷಿಸಿ ನನ್ನ ಚಿಂತೆಗಳನ್ನು ತಿಳುಕೋ ನಂನಲ್ಲಿ ವ್ಯರ್ಥ ಮಾರ್ಗ ಉಂಟೇನೋ? ನೋಡಿ, ನಿತ್ಯಮಾರ್ಗದಲ್ಲಿ ನನ್ನನ್ನು ನಡಿಸು. (ಕೀರ್ತ. ೧೩೯, ೨೩. ೨೪.)

ಶಾಲೆ ಮುಗಿಯುವಾಗ.

೧.

ಕರ್ತನು ನಮ್ಮನ್ನು ಆಶೀರ್ವದಿಸಿ ಕಾಯಲಿ. ಕರ್ತನು ತನ್ನ ಮುಖವನ್ನು ನಮ್ಮ ಮೇಲೆ ಪ್ರಕಾಶಿಸ ಮಾಡಿ ನಮಗೆ ಕೃಪೆಯುಳ್ಳವನಾಗಿರಲಿ. ಕರ್ತನು ತನ್ನ ಮುಖವನ್ನು ನಮ್ಮ ಮೇಲೆ ಯೆತ್ತಿ ನಮಗೆ ತನ್ನ ಸಮಾಧಾನವಂನು ಕೊಡಲಿ. (ಅಂಕೆಗಳು ೬, ೨೪–೨೬.)

೨.

ಯೆಲ್ಲಾ ಬುದ್ಧಿಯನ್ನು ಮೀರುವ ದೇವರ ಸಮಾಧಾನವು ನಮ್ಮ ಹೃದಯ ಮನಸ್ಸುಗಳನು ಕ್ರಿಸ್ತ ಯೇಸುವಿನಲ್ಲಿ ಕಾಯಲಿ. (ಫಿಲಿಪ್ಪ್ಯ. ೪, ೭.)

PRINTED AND PUBLISHED BY G. PLEBST GERMAN MISSION PRESS.

1922 g 9992

Ratnamāle

ರತ್ನಮಾಲೆ.

ಅಂದರೆ

ಶಾಲೇ ಹುಡುಗರು ಬಾಯಿಪಾಠ ಮಾಡುವದಕ್ಕೆ

ಆರಿಸಿದ

ದೇವರ ವಾಕ್ಯದ ವಚನಗಳು.

ಮಂಗಳೂರು:
ಜರ್ಮನ್ ಮಿಶ್ಶನ್ ಪ್ರೆಸ್.
೧೮೫೭.
1857–60.